ಅನ್ವೇಷಣೆ

ಸಾಹಿತ್ಯ-ಸಾಂಸ್ಕೃತಿಕ ಪತ್ರಿಕೆ

ಸಂಚಿಕೆ: 40

ಈ ಸಂಚಿಕೆಯಲ್ಲಿ:

ಬೆಲೆ ರೂ. 5

ಪ್ರಗತಿಪರ
ವಿಚಾರಗಳಿಗೆ

ಅನ್ವೇಷಣೆ

ಸಾಂಸ್ಕೃತಿಕ
ಚಟುವಟಿಕೆಗಳಿಗೆ

ಸಂಪುಟ : 6 ಸೆಪ್ಟೆಂಬರ್-ಅಕ್ಟೋಬರ್ 90 ಸಂಚಿಕೆ : 40

ಈ ಸಂಚಿಕೆಯ ಲೇಖಕರು :

* **ರಾಜು ಹೆಗಡೆ**, ಮಾಗೋಡು-ಅಂಚೆ, ಹೊನ್ನಾವರ-ತಾ॥ ಉ. ಕ. 581395. * **ಡಾ॥ ಅರ್ಕೆ**, ಮಣಿಪಾಲ ಜ್ಯೂ. ಕಾಲೇಜು, ಮಣಿಪಾಲ (ದ. ಕ.) 576119. * **ಬಿ.ಎಂ. ಹನೀಫ್**, ಉಪ ಸಂಪಾದಕ, ಪ್ರಜಾವಾಣಿ, ಎಂ.ಜಿ. ರಸ್ತೆ, ಬೆಂಗಳೂರು-560001. * **ಡಾ॥ ಕೆ. ಕೇಶವಶರ್ಮ**, ಕನ್ನಡ ಅಧ್ಯಯನ ಸಂಸ್ಥೆ, ಕುವೆಂಪು ವಿಶ್ವವಿದ್ಯಾಲಯ, ಬಿ. ಆರ್. ಪ್ರಾಜೆಕ್ಟ್-577115. * **ಪ್ರಹ್ಲಾದ ಅಗಸನ ಕಟ್ಟೆ**, ಸಮಾಜ ಕಾರ್ಯಕರ್ತರು, ಕೆ. ಎಂ. ಸಿ, ಹುಬ್ಬಳ್ಳಿ-580022 * **ಪ್ರತಿಭಾ ನಂದಕುಮಾರ್**, 68ಎ, 4ನೇ ಬ್ಲಾಕ್ ಪಶ್ಚಿಮ, ಜಯನಗರ, ಬೆಂಗಳೂರು-560011 * **ಕೆ. ಎಂ. ಮುನಿಕೃಷ್ಣಪ್ಪ**, ಶ್ರೀರಂಗ ನಿಲಯ, ಚಿಕ್ಕಣ್ಣ ಗಾರ್ಡನ್, ಚಾಮರಾಜಪೇಟೆ, ಬೆಂಗಳೂರು-560018. * **ಜಿ. ಪಿ. ಬಸವರಾಜು**, ವರದಿಗಾರರು, 'ಪ್ರಜಾವಾಣಿ' ಹಂಪನಕಟ್ಟ, ಮಂಗಳೂರು-575001. * **ದುರ್ಗಾ ಸುತೆ** (ಎಸ್ ಜಯಮಂಗಳ), 218, 'ಅರ್ಚನಾ', ಕೋಡಿಗೇಹಳ್ಳಿ, ವಿದ್ಯಾನಿಲಯ (ಅಂಚೆ) ಬೆಂಗಳೂರು-560091. **ಎಚ್. ಎಸ್. ಗೋಪಾಲರಾವ್**, 35, 5ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸಿ. ಪಿ. ವಿ. ಬ್ಲಾಕ್, ಗಂಗೇನಹಳ್ಳಿ, ಬೆಂಗಳೂರು 560032. * **ಟಿ. ಜಿ. ಭಟ್ಟ**, ಹಾಸಣಗಿ, ಇಂಗ್ಲಿಷ್ ಉಪನ್ಯಾಸಕರು, 'ಅಭಿನಂದನ್', ಮೋಲಿನಕೇರಿ, ಹೆಗಡೆ-581330. (ಉ. ಕ. ಜಿಲ್ಲೆ) * **ಆರ್. ವಿ. ಭಂಡಾರಿ**, ಅಧ್ಯಾಪಕರು, ಅರೆ ಅಂಗಡಿ, ಹೊನ್ನಾವರ-ತಾ॥ (ಉ. ಕ. ಜಿಲ್ಲೆ) * **ಜಿ. ಕುಮಾರಪ್ಪ**, ಸಹಾಯಕ ಗ್ರಂಥಪಾಲಕರು (ಕನ್ನಡ) ನ್ಯಾಷನಲ್ ಲೈಬ್ರರಿ, ಕಲ್ಕತ್ತ-70 (ಪ. ಬಂಗಾಳ).

ಪುಸ್ತಕ ಸ್ವೀಕಾರ

ರಾಜಕೀಯ ಚಿಂತನೆ : ಬರಗೂರು ರಾಮಚಂದ್ರಪ್ಪ, ಪುಟ 182, ಬೆಲೆ ರೂ. 20, ಬಯಲು ಪರಿಷತ್ತು, 5/ಬಿ, 4ನೇ ಬ್ಲಾಕ್, ರಾಜಾಜಿನಗರ, ಬೆಂ-560010.

ಗುಲಾಮ ಗೀತೆ (ಕವನ ಸಂಕಲನ) : ಬರಗೂರು ರಾಮಚಂದ್ರಪ್ಪ, ಪುಟ 64, ಬೆಲೆ ರೂ. 10, ಕಲ್ಯಾಣಿ ಪ್ರಕಾಶನ, ಶ್ರೀನಗರ, ಬೆಂಗಳೂರು-560050.

ಕಪ್ಪು ಹಲಗೆ (ನಾಟಕ) : ಬರಗೂರು ರಾಮಚಂದ್ರಪ್ಪ, ಪುಟ 56, ಬೆಲೆ ರೂ. 10, ನಂದನ ಪ್ರಕಾಶನ, ಶ್ರೀನಿವಾಸನಗರ ಬೆಂಗಳೂರು-560050.

ಬಂಡಾಯ ಕಾವ್ಯ ಸಂ : ಬರಗೂರು ರಾಮಚಂದ್ರಪ್ಪ, ಬೆಲೆ ರೂ. 18, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂ. 560002.

ದನಿ ಎತ್ತಿ ಹಾಡೇನ (ಕವನ ಸಂಕಲನ) : ಡಾ॥ ಬಸವರಾಜ ಸಬರದ, ಪುಟ 68. ಬೆಲೆ ರೂ. 10. ಸ್ವಯಂ ಜ್ಯೋತಿ ಪ್ರಕಾಶನ, ಗುಲಬರ್ಗಾ-585102.

ನೆನ್ನೂರ ಹಾಡು (ಕವನ ನಂಕಲನ) ; ರಂಗಾರೆಡ್ಡಿ ಕೋಡಿರಾಂಪುರ, ಪುಟ 56, ಬೆಲೆ ರೂ. 10, ಶಂಭೂಕ ಪ್ರಕಾಶನ, ಗೌರಿಬಿದನೂರು, ಕೋಲಾರ ಜಿಲ್ಲೆ.

ಅಗ್ನಿ ಸ್ತಂಭ (ಕವನ ಸಂಕಲನ) : ಡಾ॥ ಎಚ್. ಎಸ್. ವೆಂಕಟೇಶಮೂರ್ತಿ, ಪುಟ 48, ಬೆಲೆ ರೂ. 15, ಕೃತಿ ಪ್ರಕಾಶನ, ಬೆಂಗಳೂರು-560070.

ತುಂಗೆಯಲ್ಲಿ ಹೆಣ (ಕವನ ಸಂಕಲನ) : ಜಿ. ಪಿ. ಬಸವರಾಜು, ಪುಟ 74, ಬೆಲೆ ರೂ. 20, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ-577417.

ಬರುತ್ತಾನೆ ಸೂರ್ಯ (ಕವನ ಸಂಕಲನ) : ಎಂ. ಲೋಕೇಶ್. ಪುಟ 50, ಬೆಲೆ ರೂ. 8, ವಿಚಾರವಾದಿ ಪ್ರಕಾಶನ, 382, 4ನೇ ಮೈನ್, ಸರಸ್ವತಿಪುರಂ, ಮೈಸೂರು-9.

ದಫನ್ (ನಾಟಕ) : ಹೂಲಿ ಶೇಖರ್, ಪುಟ 34, ಬೆಲೆ ರೂ. 9, ಅನನ್ಯ ಪ್ರಕಾಶನ, 'ಹೂಮನೆ', ಶ್ರೀದೇವಿ ನಗರ, ವಿದ್ಯಾಗಿರಿ, ಧಾರವಾಡ-580004.

ಬೆಕುವ (ನಾಟಕ) : ಹೂಲಿ ಶೇಖರ್, ಪುಟ 85, ಬೆಲೆ ರೂ. 13, ಅಭಿವ್ಯಕ್ತಿ ಪ್ರಕಾಶನ, ಫಾತಿಮಾ ಗಾರ್ಡನ್ಸ್, ವಲೆನ್ಸಿಯಾ, ಮಂಗಳೂರು-575002.

ದೀಪದ ಮರೆಯ ಹಿಂದೆ (ಕವನ ಸಂಕಲನ) ; ಪ್ರಸಾದ್ ಆಳ್ವ, ಪುಟ 76, ಬೆಲೆ ರೂ. 10. ಪಿನೋಕಿಯೋ ಪ್ರಕಾಶನ. ಕೆ.ಹೆಚ್.ಬಿ. ಕಾಲೋನಿ, ಬೆಂ-79.

ನ್ಯಾಯ (ಕಥಾ ಸಂಕಲನ) : ಕೋರಗಲ್ ವಿರೂಪಾಕ್ಷಪ್ಪ, ಪುಟ 106, ಬೆಲೆ ರೂ. 15, ಸಂಕ್ರಮಣ ಪ್ರಕಾಶನ, ಧಾರವಾಡ-580008.

ಕೈಗೂಡಿದ ಕನಸು (ಕಾದಂಬರಿ) : ನೇತ್ರಾವತಿ ಹಾಲಪ್ಪ, ಪುಟ 146, ಬೆಲೆ ರೂ. 18, ಜಾಣಗೆರೆ ಪ್ರಕಾಶನ, ಲಕ್ಷ್ಮೀನಾರಾಯಣಪುರ, ಬೆಂ-560021.

ಬರಗೂರರ ಸೃಜನೇತರ ಬರಹಗಳು

—ಆರ್. ವಿ. ಭಂಡಾರಿ

ಕನ್ನಡದ ಯಾವುದೇ ಸಾಹಿತ್ಯ ಚಳುವಳಿಯ ಮುಂಚೂಣಿಯ ಬರಹಗಾರರು ತಮ್ಮ ಸೃಜನಶೀಲ ಬರಹಗಳ ಒಟ್ಟೊಟ್ಟಿಗೆ ಆ ಸಾಹಿತ್ಯ ಚಳುವಳಿಯ ಸೈದ್ಧಾಂತಿಕ ಹಾಗೂ ವಿಮರ್ಶಕ ಆಲೋಚನೆಯನ್ನು ಗಟ್ಟಿಗೊಳಿಸುತ್ತಲೇ ಹೋಗಬೇಕಾದುದು ಒಂದು ಪರಂಪರೆ ಎನ್ನುವಷ್ಟು ಸಹಜವಾಗಿದೆ. ಈ ಮಾತನ್ನು ನಮ್ಮ ನವೋದಯ, ಪ್ರಗತಿಶೀಲ, ನವ್ಯದ ಉದಾಹರಣೆಯಿಂದ ಹೇಳಬಹುದು. ಅಂತೆಯೇ ಬಂಡಾಯ ದಲಿತವೂ ಇದಕ್ಕೆ ಹೊರತಾಗಿಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಗುರುತಿಸಬಹುದು. ಒಂದು, ಸಾಹಿತ್ಯಕ ಪ್ರಕ್ರಿಯೆಗಳ ಮೇಲು ನೋಟದ ಸಾಹಚರ್ಯ ಒಂದೇ ಎಂದು ತೋರಬಹುದಾದರೂ ಒಳ ರಚನೆಯಲ್ಲಿಯ ಸೂಕ್ಷ್ಮತೆಗಳು ಭಿನ್ನವಾಗಿರುತ್ತವೆ ಮತ್ತು ಇದು ಶೈಕ್ಷಣಿಕ (Educative) ಆಗಿ ಕೂಡ ಇರಬಯಸುತ್ತದೆ. ಎರಡು, ಬಂಡಾಯದ ಹಿಂದಿನ ಪ್ರಕಾರವಾದ ನವ್ಯದಲ್ಲಿ ಪ್ರತಿಭಾನ್ವಿತ ಲೇಖಕರು ಇದ್ದು ಕಲಾತ್ಮಕವಾಗಿ ಮತ್ತು ಚಿಂತನಾತ್ಮಕವಾಗಿ ಕೂಡ ಒಂದು ಸಂಕೀರ್ಣತೆಯನ್ನು ಸಾಧಿಸಿತ್ತು. ಬಹು ಅಂಶದಲ್ಲಿ ಇದಕ್ಕೆ ಸಮಾಂತರವಾದ ವೈಚಾರಿಕ ನೆಲೆಯನ್ನು ಪ್ರಸ್ತುತಪಡಿಸಬೇಕಿತ್ತು. ಆ ಕೆಲಸವನ್ನು ಬಂಡಾಯದ ವಿಮರ್ಶಕರು ಸಾರ್ಥಕವಾಗೇ ಸಿದ್ಧಪಡಿಸಿದ್ದಾರೆ.

ಮುಖ್ಯವಾಗಿ ಬರಗೂರು ರಾಮಚಂದ್ರಪ್ಪ ಸೃಜನಶೀಲ ಲೇಖಕರು. ಅವರು ಕವಿಯಾಗಿ ಉತ್ತಮ ಕವಿತೆಗಳನ್ನು ಕೊಟ್ಟಿರುವರಾದರೂ ಮುಖ್ಯವಾಗಿ ಕಥೆ–ಕಾದಂಬರಿಕಾರರೆಂದೇ ಸರಿಯಾಗೇ ಗುರುತಿಸಲ್ಪಡುತ್ತಾರೆ. ಅವರ ಕಥೆ-ಕಾದಂಬರಿಗಳು ಪ್ರಶ್ನಾತೀತವಲ್ಲವೇನೂ ಆಗಿರದಿದ್ದರೂ ಬಂಡಾಯದ ಲೇಖಕರ ಮಧ್ಯೆ ಇಂದಿಗೂ ಮುಖ್ಯರಾಗೇ ಇದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ವರ್ತಮಾನದಲ್ಲಿ ವರ್ಗ ಮತ್ತು ವರ್ಣಗಳ ಸೂಕ್ಷ್ಮವಾದ ಚಲನಶೀಲತೆಯನ್ನು ಗುರುತಿಸಲು ಅವರ ಸೈದ್ಧಾಂತಿಕ ನಿಖರತೆ ಮತ್ತು ಸಮಾಜ ನಿರೀಕ್ಷಣೆಯಿಂದ ಸಾಧ್ಯವಾಗಿದೆ.

ಹೀಗೆ ಬರಗೂರರು ಒಂದು ನಿಖರವಾದ ಎಡಪಂಥೀಯ, ಮುಖ್ಯವಾಗಿ ಮಾರ್ಕ್ಸ್‌ವಾದಿ ಧೋರಣೆಯನ್ನು ಹೊಂದಿರುವುದರಿಂದಲೇ ಗೊಂದಲಮಯವಾಗಿ ಮತ್ತು ಸುಳಿವ ಸುಳಿಗಾಳಿಯಂತೆ ಕಾಣುವ ವರ್ತಮಾನದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಸರಿಯಾಗಿ ಮತ್ತು ಅಷ್ಟೇ ಬೋಧನ ಪರವಾಗಿ ವಿಶ್ಲೇಷಿಸಬಲ್ಲರು. ಎಂತಲೇ ಅವರ ಬರಹಗಳು ನಮಗೆ ಅಗತ್ಯವಾದ ಎಜ್ಯುಕೇಟಿವ್ ಉದ್ದೇಶವನ್ನು ನೆರವೇರಿಸುತ್ತವೆ.

ಬರಗೂರರ ಬರಹದ ಇನ್ನೊಂದು ಮಹತ್ವದ ಸಂಗತಿಯೆಂದರೆ ಅದರ ಸರಳತೆ. ಅವರು ಸಮಸ್ಯೆಗಳನ್ನು ಸರಳವಾಗಿ, ನಿರಾತಂಕವಾಗಿ ವಿಶ್ಲೇಷಿಸುತ್ತಾರೆ. ಅಸ್ಪಷ್ಟ ಅರ್ಥ

ವನ್ನೀಯುದೆ ಮತ್ತು ನೇರವಾದ ವಾಕ್ಯ ರಚನೆ ಸುಲಭ ಗಮ್ಯವಾಗುತ್ತದೆ. ಉದಾಹರಣೆಗಳ ಮುಖಾಂತರವೇ ಅವರು ವಿಷಯ ಮಂಡಿಸುವುದರಿಂದ ಅವರ ಧೋರಣೆಗೆ ಒಂದು ಕ್ರಿಯಾತ್ಮಕ ಆಯಾಮ ಒದಗುತ್ತದೆ. ಆದ್ದರಿಂದಲೇ ಲೇಖನಗಳು ಬಡವಾಗದೆ ಒಂದು ಮಿತಿಯಲ್ಲಿ ಅರ್ಥಪೂರ್ಣವಾಗಿರುತ್ತವೆ. ಅವರ ಧೋರಣೆಯನ್ನೇ ಅಲ್ಲಗಳೆಯುವುದು ಬೇರೆ. ಆದರೆ ಅವರಿಗಿರುವ ಸೈದ್ಧಾಂತಿಕ ನಿಲುವಿನ ನಿಖರತೆಯನ್ನು ಅಲ್ಲಗಳೆಯಲಾಗುವುದಿಲ್ಲ.

1981 ರಲ್ಲಿ ಅವರು "ಸಾಹಿತ್ಯ ಮತ್ತು ರಾಜಕಾರಣ'' ಎಂಬ ಪುಸ್ತಕದಲ್ಲಿ ಬಂಡಾಯಕ್ಕೆ ಸಂಬಂಧಿಸಿದ ಬರಹಗಳನ್ನು ಕೊಟ್ಟರು. ಅದರಲ್ಲಿ 'ಬಂಡಾಯ ಸಾಹಿತ್ಯ ಚಳುವಳಿ ಒಂದು ಚಿಂತನೆ' ಎಂಬ ದೀರ್ಘವಾದ ಬರಹದಲ್ಲಿ ಬಂಡಾಯ ಸಾಹಿತ್ಯ ಒಂದು ಚಾರಿತ್ರಿಕ ಅವಶ್ಯವಾಗಿ ಬಂತು ಎಂಬುದನ್ನು ಮತ್ತು ಅದು ಒಳಗೊಳ್ಳುವ ಸಾಂಸ್ಕೃತಿಕ-ರಾಜಕೀಯ ಧೋರಣೆಯನ್ನು ವಿವೇಚಿಸಿದ್ದಾರೆ. ಅದರಲ್ಲಿ ಬಂಡಾಯದ ಪರಂಪರೆಯ ಬಗ್ಗೆ ಅವರ ನಿಲುವನ್ನು ಹಾಗೆ ಹಾಗೇ ಒಪ್ಪಬೇಕಾಗಿಲ್ಲವಾದರೂ ಆ ಒಂದು ವಿಧಾನವನ್ನು ತೋರಿರುವುದು ಅಂದಂತೂ ಮಹತ್ವದ್ದಾಗೇ ಇತ್ತು. ಇಂದಿಗೂ ಅದು ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳಲಿಲ್ಲ.

ಹೊಸಗನ್ನಡ ಸಾಹಿತ್ಯದ ವರ್ಗ ಸ್ವಭಾವ ಆ ಸಂಕಲನದಲ್ಲಿಯ ಒಂದು ಮಹತ್ವದ ಲೇಖನ. 1976ರ ಹೊತ್ತಿಗೆ ಕನ್ನಡ ಸಾಹಿತ್ಯವನ್ನು ವರ್ಗಸ್ವಭಾವದಿಂದ ಗಮನಿಸಿದ ಸಮತೂಕದ ಲೇಖನಗಳು ಕಡಿಮೆ ಇದ್ದವು. ಪ್ರಗತಿಶೀಲರಲ್ಲಿ, ನಿಷೇಧಾತ್ಮಕತೆಯ ಅಬ್ಬರವೇ ಕಾಣುತ್ತಿತ್ತು. ಬಂಡಾಯ ಪ್ರಗತಿಶೀಲ ಚಳುವಳಿಯ ಮತ್ತು ನಂತರದ ನವ್ಯ ಚಳುವಳಿಯ ಪ್ರಾರಂಭಿಕ ಹಂತದಲ್ಲಿ ಅಬ್ಬರಗಳು ಸಹಜವೇ ಆದರೂ ಅದಕ್ಕೂ ಮೊದಲೇ ಬರಗೂರರು ತಮ್ಮ ಲೇಖನದಲ್ಲಿ ಒಂದು ಸಮತೋಲನ ಸಾಧಿಸಿದ್ದಾರೆ. ಇಡೀ ಕನ್ನಡ ಕಾವ್ಯವನ್ನು ವರ್ಗ ಸ್ವಭಾವದಿಂದ ನೋಡುವುದು ಲೇಖನದ ಉದ್ದೇಶವಾಗಿರುವುದರಿಂದ ಅಲ್ಲಿಯ ಕಾವ್ಯ ಪರಂಪರೆಯ ನಿರೂಪಣೆ ಹ್ರಸ್ವವಾಗುವುದು ಅನಿವಾರ್ಯ. ಆದರೂ ಸೈದ್ಧಾಂತಿಕತೆ ಹರಿತಗೊಳ್ಳಬೇಕಾದುದು ಪ್ರಾಯೋಗಿಕ ವಿಮರ್ಶೆಯಲ್ಲೇ. ಆದ್ದರಿಂದ ಬರಗೂರರ ಪ್ರಸ್ತುತ ಲೇಖನ ಇಂದಿಗೂ ಒಂದು ರೆಫರೆನ್ಸ್ ಆಗಿದೆ. ಹಾಗೆಯೇ 'ವಂಶವೃಕ್ಷ'ದ ಅಧ್ಯಯನ ಕೂಡ ಸೂಕ್ಷ್ಮ ವಿಶ್ಲೇಷಣೆ ಅಲ್ಲದಿದ್ದರೂ ಅದರ ಸೈದ್ಧಾಂತಿಕ ವಿಶ್ಲೇಷಣೆಯ ಚೌಕಟ್ಟು ಮುಂದಿನ ಬೆಳವಣಿಗೆಗೆ ಕಾರಣವಾಗಿದೆ.

ಈಗ ಬಂಡಾಯದ ಹತ್ತು ವರ್ಷದ ಬರಗೂರರ ಮತ್ತೊಂದು ವೈಚಾರಿಕ ಬರಹಗಳ ಪುಸ್ತಕ "ಸಂಸ್ಕೃತಿ ಮತ್ತು ಸೃಜನಶೀಲತೆ'' ಹೊರ ಬಂದಿದೆ. ಇದರ ನೂರಾ ಐವತ್ತು ಪುಟಗಳಲ್ಲಿ ಇಪ್ಪತ್ತೂರು ಲೇಖನಗಳು ಹರಡಿಕೊಂಡಿವೆ. ಇವುಗಳಲ್ಲಿ ದೀರ್ಘ ಲೇಖನಗಳು ಕಡಿಮೆ. ಪುಸ್ತಕದ ಮುನ್ನುಡಿಯಲ್ಲಿ "ಇಲ್ಲಿರುವ ಬರಹಗಳು ವಿವಿಧ ಸಂದರ್ಭದಲ್ಲಿ ಬರೆದಿದ್ದರೂ ಅವುಗಳ ಅಂತರದೃಷ್ಟಿಯಲ್ಲಿ ನಿರ್ದಿಷ್ಟ ನೆಲೆಯೊಂದು ಕ್ರಿಯಾಶೀಲವಾಗಿದೆಯೆಂದು ನನ್ನ ನಂಬಿಕೆ'' ಎಂದಿದ್ದಾರೆ. ಈ ಅವರ ನಂಬಿಕೆ ಪುಸ್ತಕದಲ್ಲಿ ಹುಸಿಯಾಗಿಲ್ಲ. ಇವೆಲ್ಲ ಬರಹಗಳೂ ಒಂದೇ ಸೈದ್ಧಾಂತಿಕ ಧೋರಣೆಗೆ ಚಿಗುರಿಕೊಂಡ ಟಿಸಿಲುಗಳು. ಅವುಗಳ ಜೀವಾಧಾರಣೆಯ ನೆಲೆ ಒಂದೇ. ಇಷ್ಟು ಮಾತ್ರವಲ್ಲ ಅವರ ಮೊದಲ ಪುಸ್ತಕದಲ್ಲಿಯ

ಬರಹಗಳ ಶಿಸ್ತು ಸ್ವಭಾವ ಕೂಡ ಸಾಹಿತ್ಯವನ್ನು ಉಳಿಸಿಕೊಂಡು ಮತ್ತಷ್ಟು ಗಟ್ಟಿಯಾಗಿದೆ. ಉದಾಹರಣೆಗಾಗಿ 'ಸಾಹಿತ್ಯ ಮತ್ತು ರಾಜಕಾರಣ' (ಹಿಂದಿನ ಪುಸ್ತಕ)ದಲ್ಲಿ 'ಸಾಹಿತ್ಯ ಮತ್ತು ಬದ್ಧತೆ' ಎಂಬ ಲೇಖನದ ಜೊತೆ ಈಗಿನ ಪುಸ್ತಕದಲ್ಲಿಯ 'ಸಾಹಿತ್ಯದಲ್ಲಿ ಬದ್ಧತೆ'ಯನ್ನು ಹೋಲಿಸಿ ನೋಡಬಹುದು. ಈ ಲೇಖನದಲ್ಲಿ ಭಾಷೆ ಕೂಡ ಒಂದು ಬಗೆಯ ಮೊನಚು ಸಾಧಿಸಿಕೊಂಡಿದೆ.

ಬರಗೂರರ ಅಚ್ಚುಕಟ್ಟಾದ ಬರಹದ ಮಾದರಿಗಾಗಿ ಒಂದು ಉದಾ: "ಸಂಸ್ಕೃತಿ ಎನ್ನುವುದು ಜೀವನ ವಿಧಾನ. ಇದು ಕಲಿಯುವುದರಿಂದ ಬರುತ್ತದೆಯೆಂಬುದು ಬಹುಪಾಲು ಮಾನವಶಾಸ್ತ್ರಜ್ಞರ ಅಭಿಪ್ರಾಯ. ತಂತಾನೆ ಅನುವಂಶಿಕವಾಗಿ ಬರದೆ ವ್ಯಕ್ತಿಯೊಬ್ಬ ಬೆಳೆಯುವ ವಾತಾವರಣದಿಂದ ಅವನ ಸಂಸ್ಕೃತಿಯು ರೂಪುಗೊಳ್ಳುತ್ತದೆ. ವಾಸ್ತವವಾಗಿ ತಾನು ಬದುಕುತ್ತಿರುವ ಭಾಗದ ಸಂಸ್ಕೃತಿಯೇ ಅವನ ಸಂಸ್ಕೃತಿಯೂ ಆಗುತ್ತದೆ. ವ್ಯಕ್ತಿ ಅಥವಾ ವ್ಯಕ್ತಿ ಸಮೂಹವೊಂದು ಅಸ್ತಿತ್ವದಲ್ಲಿರುವ ಸಂಸ್ಕೃತಿಗಿಂತ ಭಿನ್ನವಾದಾಗ, ಈ ಭಿನ್ನಭಾವ ಬದಲಾದಾಗ ಬದಲಾವಣೆಯ ಕ್ರಿಯೆ ಕಾಣಿಸುತ್ತದೆ".

ಸಂಸ್ಕೃತಿಯ ಆತ್ಮರತಿ ಸೃಜನಶೀಲತೆಯು ಸ್ಥಗಿತಗೊಂಡಿದ್ದರ ಸೂಚನೆ ಎನ್ನುತ್ತಾರೆ ಬರಗೂರು. ಸಂಸ್ಕೃತಿಯ ಮೌಲ್ಯದಲ್ಲಿ "ವಿಧೇಯತೆಯ ಬದಲು ವಿನಯವನ್ನು, ಪೂಜ್ಯತೆಯ ಬದಲು ಪ್ರಜ್ಞೆಯನ್ನು ಸ್ಥಾಪಿಸಬೇಕಿತ್ತು. ವಿನಯ, ಪ್ರಜ್ಞೆ, ಸೌಜನ್ಯ, ಸ್ವಾಭಿಮಾನಗಳ ಬದಲು ವಿಧೇಯತೆ, ಪೂಜ್ಯತೆ, ಶರಣಾಗತಿಯನ್ನು ಕಲಿಸಿದ ಸಂಸ್ಕೃತಿ ನಮ್ಮ ಪಂಚೇಂದ್ರಿಯಗಳಿಗೆ ಪೊರೆ ಕಟ್ಟಿದೆ" ಎನ್ನುತ್ತಾರೆ ಅವರು. ಅದರ ಪರಿಣಾಮವಾಗಿ "ನಳನಳಿಸುವ ಹೂವನ್ನು ನೋಡಿ ಸಂತೋಷಿಸುವ ಕಣ್ಣಿಗೆ ಹೂವಿನ ಸೌಂದರ್ಯ ಕಾಣಿಸುತ್ತದೆಯೇ ಹೊರತು ಅದಕ್ಕೆ ನೀರೆರೆದು ಬೆಳೆಸಿದ ಮೂಳೆ ಕೈಗಳು ಕಾಣಿಸುವುದಿಲ್ಲ" ಎನ್ನುತ್ತಾರೆ....ಈ ಪೊರೆಯನ್ನು ಸೀಳುವುದರಿಂದ ಮಾತ್ರ ಸೃಜನಶೀಲತೆ ಸಂತೋಷದಿಂದ ಅರಳುತ್ತದೆ....ಇದೇ ಬಂಡಾಯ ಎಂಬ ನಿಲುವಿಗೆ ತಲುಪುತ್ತಾರೆ.

'ಬಂಡಾಯ ಸಾಹಿತ್ಯ ಚಳುವಳಿಯ ತಾತ್ವಿಕ ನೆಲೆಗಳು' ಒಂದು ಮುಖ್ಯ ಲೇಖನ. ಈ ಲೇಖನದಲ್ಲಿ ಹೊರಡಿಸುವ ತಾತ್ವಿಕತೆಗೆ ಕಳೆದ ಹತ್ತು ವರ್ಷಗಳ ಗಟ್ಟಿ ಅನುಭವವಿದೆ.

1. ಅಕ್ಷರ ಕಲಿಕೆಯ ಸ್ವಾತಂತ್ರ್ಯ ಸಿಕ್ಕಿದ ಜನಸಮುದಾಯ ಹೊಸ ಅನುಭವ ಪಡೆದು ಪ್ರಕಟಿಸತೊಡಗಿದ್ದೆ ಪ್ರಥಮ ಬಂಡಾಯ.

2. ಬಂಡಾಯ ಸಾಹಿತ್ಯದಲ್ಲಿ ಬಹುಪಾಲು ಅನುಭವ ದ್ರವ್ಯ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದೆ.

3. ಹಿಂದೆ ಅಭಿವ್ಯಕ್ತಿಗೊಂಡ ಗ್ರಾಮೀಣ ಬದುಕು ಸಂಸ್ಕೃತಿಯ ನೆಪದಲ್ಲಿ ವೈಭವೀಕರಣಗೊಳ್ಳುತ್ತಿತ್ತು; ಇಲ್ಲವೇ ಬದಲಾಗುತ್ತಿರುವ ಗ್ರಾಮೀಣ ಸಂಸ್ಕೃತಿಯ ಬಗ್ಗೆ ವೇದನೆ ವ್ಯಕ್ತವಾಗುತ್ತಿತ್ತು. ಆದರೆ ಇಲ್ಲಿ ವೈಭವೀಕರಣಕ್ಕೆ ಬದಲಾಗಿ ಮಾನವೀಕರಣ ಮುಖ್ಯವಾಗುತ್ತದೆ. ವೇದನೆಗೆ ಬದಲಾಗಿ ವಾಸ್ತವದ ಉಸುರಿನಲ್ಲಿ ಹುಟ್ಟುವ ವಿಷಾದ ಮುಖ್ಯವಾಗುತ್ತದೆ.

4. ಬದುಕಿನ ಬಗ್ಗೆ ಮಹಾ ಕನಸುಗಳನ್ನು ಹೊತ್ತುಕೊಂಡು ಬರೆಯಲಾಗದಿದ್ದರೂ

ಕಲಾವಿದನ ಕಣ್ಣು-ಕಿರುಳನ್ನು ಹೊಂದಿರುವ ಮನುಷ್ಯ ಮಹಾ ಕಲಾಕಾರ. ಅಂಥ ಮನುಷ್ಯರ ಶೋಧನೆಯು ಆಶಯು.

5. ಬಂಡಾಯ ಸಾಹಿತ್ಯ ವೇದಿಕೆ ಆತ್ಮಸ್ಥೈರ್ಯದ ಬೆಂಬಲಕ್ಕಿದೆಯೆ ಹೊರತೂ ಆತ್ಮ ರತಿಯ ಬೆಂಬಲಕ್ಕಲ್ಲ.

ಬಂಡಾಯಕ್ಕೊಂದು ಆರೋಗ್ಯಯುಕ್ತವಾದ ಪರಂಪರೆಯನ್ನು ಪ್ರಸ್ತುತಪಡಿಸುವ ಅವಶ್ಯಕತೆ ಇದ್ದೇ ಇದೆ. ಅನೇಕ ಲೇಖಕರು ಅದನ್ನು ಮಾಡುತ್ತಲೇ ಇದ್ದಾರೆ. ಅಂಥ ತವಕ ಬರಗೂರರದ್ದೂ ಆಗಿದೆ. ತವಕ ಒಂದೊಂದು ಸಲ ಅವರ ಪ್ರಾಯೋಗಿಕ ಪ್ರಜ್ಞೆ ಯನ್ನು ಮಸಕು ಮಾಡುವುದುಂಟು. ಅದು ತೀರಾ ಕ್ವಚಿತ್ತಾಗಿ. ಪ್ರಸ್ತುತ ಪುಸ್ತಕದಲ್ಲಿ ಸಿಕ್ಕ ಒಂದೇ ಒಂದು ಉದಾಹರಣೆ: ಯುದ್ಧದ ಅಮಾನವೀಯ ಸ್ತರವನ್ನು ಗುರುತಿಸುವ ಸೂಕ್ಷ್ಮತೆ ಕುಮಾರವ್ಯಾಸನ ಸೃಜನ ಶೀಲತೆಗೆ ಸಾಧ್ಯವಾಗಿದೆ ಎಂದು ಉದಾಹರಣೆಗಾಗಿ ಕರ್ಣನ ಮೇಲೆ ಪಾಂಡವರ ಸೈನ್ಯ ಎರಗಿದ ಸಂದರ್ಭದ "ಉರಿಯ ಪೇಟೆಗಳಲ್ಲಿ ಪತಂಗದ... ಸರಕು ಮಾರದೆ ಮರಳುವುದೆ..." ಪದ್ಯವನ್ನು ಕೊಟ್ಟು,

"ಅಂದರೆ ಯುದ್ಧದ ಉತ್ಕಟ ಸಂದರ್ಭದಲ್ಲಿ ವ್ಯಾಪಾರದ ಪರಿಭಾಷೆಯನ್ನು ಬಳಸುವ ಮೂಲಕ ಕುಮಾರವ್ಯಾಸ ಕವಿ ಯುದ್ಧದ ಅಮಾನವೀಯತೆಯನ್ನು ಸೂಕ್ಷ್ಮವಾಗಿ ಹೇಳುತ್ತಿದ್ದಾನೆ...ಯುದ್ಧದಲ್ಲಿ ಮನುಷ್ಯ ಮುಖ್ಯವಾಗುವುದಿಲ್ಲ. ಆತ 'ಸರಕು' ಮಾತ್ರ ವಾಗುತ್ತಾನೆಂಬ ಧ್ವನಿ ಹೊರಡಿಸುವ ಈ ರೂಪಕ ಅನನ್ಯವಾದುದು" ಎನ್ನುತ್ತಾರೆ. ಬರಗೂರರು ಎಂದಂತೆ ರೂಪಕ ಅನನ್ಯವಾದುದೇನೋ ಹೌದು. ಕುಮಾರವ್ಯಾಸ ಬಳಸುವ ಪತಂಗ, ಪೇಟೆ, ಸರಕು, ಮಾಲು ಈ ಎಲ್ಲ ಪದಗಳು ಕುಮಾರವ್ಯಾಸನಿಗೇ ಸಾಧ್ಯವಾದ ವೈಖರಿ ಕೂಡ ಹೌದು. ಆದರೆ ಆತ ಯುದ್ಧದ ಅಮಾನವೀಯತೆಯನ್ನು ಧ್ವನಿಗೊಳಿಸಿದ್ದಾ ನೆಂಬುದನ್ನು ಸಿದ್ಧಪಡಿಸಲಾಗುವುದಿಲ್ಲ. ಯಾಕೆಂದರೆ ಕರ್ಣನ ಸಾವು ಮೊದಲೇ ನಿರ್ಧರಿತ ವಾಗಿದ್ದು, ಆತನ ಶೌರ್ಯ, ಔದಾರ್ಯ ಮುಂತಾದವುಗಳನ್ನು ಪರಾಕಾಷ್ಠೆಗೊಳಿಸುವ ಸಂದರ್ಭ ಮಾತ್ರ ಇದು. ಒಂದು ವೇಳೆ ಯುದ್ಧದ ಅಮಾನವೀಯತೆಯನ್ನು ಧ್ವನಿಸುವು ದಿದ್ದರೆ ಬೇರೆ ಮುಖ್ಯ ಸಂದರ್ಭವನ್ನು ಆರಿಸಿಕೊಳ್ಳಬಹುದಿತ್ತು ಮತ್ತು ಅದರ ಪ್ರಸ್ತುತ ಪಡಿಸುವ ಸಂವಿಧಾನ ಬೇರೆಯಾಗಿರುತ್ತಿತ್ತು. ಆದರೆ ಬರಹಗಾರರು ಇದು ಕುಮಾರ ವ್ಯಾಸ ಯುದ್ಧದ ಅಮಾನವೀಯತೆಯನ್ನು ಸ್ಫೋಟಗೊಳಿಸುವ ಉದಾಹರಣೆಯೆಂದು ನಂಬುವುದಾದರೆ ಕುಮಾರವ್ಯಾಸನ ಔಚಿತ್ಯ ಪ್ರೌಢಿಮೆಯನ್ನು ತಗ್ಗಿಸಿದಂತಾಗುತ್ತದೆ. ಆದರೆ ಬರಗೂರರು ಇತರ ಸಂದರ್ಭಗಳಲ್ಲಿ ಉದಾ : ದ್ರೌಪದಿಯ ಪ್ರಶ್ನೆ ಇತ್ಯಾದಿಗಳನ್ನು ಸರಿಯಾಗಿಯೇ ಬಹಳ ಅರ್ಥವತ್ತಾಗಿಯೇ ವಿಶ್ಲೇಷಿಸುತ್ತಾರೆ.

ಸಂಕಲನದಲ್ಲಿ ಸಮೂಹ ಮಾಧ್ಯಮ ಮತ್ತು ಮಹಿಳೆ, ಸಿನೇಮಾ ಕುರಿತ ಮೌಲಿಕ ವಾದ ಬರಹಗಳಿವೆ. ಎಲ್ಲ ಬರಹಗಳನ್ನು ವಿವರಿಸುವುದು ಅಥವಾ ಮೌಲ್ಯಮಾಪನ ಮಾಡುವುದು ನನ್ನ ಉದ್ದೇಶವಲ್ಲ. ಆದರೆ ನಮ್ಮ ಬಂಡಾಯದ ಹೊಸ ಮತ್ತು ಕೆಲ ಹಿರಿಯ ಲೇಖಕರ ಗಮನ ಸೆಳೆಯಲು ಮಾತ್ರ ಬಯಸಿದ್ದೇನೆ. ಯಾಕೆಂದರೆ ಅದರಿಂದ ಬಂಡಾಯ ಸಾಹಿತ್ಯಕ್ಕೆ ಬಹಳ ಲಾಭ ಉಂಟು.

ಬಂಡಾಯದ 'ಜನಪರತೆ': ಯಾವ ಜನ?

ದ. ಕ. ಮತ್ತು ಉ. ಕ. ಜಿಲ್ಲೆಗಳಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯನ್ನು ಬಲಪಡಿಸುವಲ್ಲಿ ನನ್ನ ಪಾತ್ರವನ್ನು ಚೆನ್ನಾಗಿ ಬಲ್ಲ (—ಇದನ್ನು ಹೆಗ್ಗಳಿಕೆಗಾಗಿ ಹೇಳುತ್ತಿಲ್ಲ) ಆರ್.ವಿ., ನನ್ನ ಪ್ರಶ್ನೆಗಳಿಗೆ ನೀಡಿದ ಉತ್ತರ (ಅನ್ವೇಷಣೆ-ಸಂ. 39) ನನಗೆ ಪೂರ್ತಿ ಸಮಾಧಾನ ನೀಡಿಲ್ಲ. ಸಂಘಟನೆಯ 'ಜೀರ್ಣಿಸಿಕೊಳ್ಳುವ ಶಕ್ತಿ'ಯ ಬಗ್ಗೆ ಅವರು ಹೇಳಿಕೊಂಡಿದ್ದಾರೆ. ಕ. ಸಾ. ಪರಿಷತ್ತು ಬಂಡಾಯದ ದಶಮಾನೋತ್ಸವ ನೆನಪಿನ ವಿಚಾರ ಸಂಕಿರಣ ಜರುಗಿಸುವುದಕ್ಕೆ ಮುನ್ನ ಅದರ ರೂಪರೇಷೆ ತಯಾರಿಸಲು ಕರೆದ ಪೂರ್ವಭಾವಿ ಸಭೆಯಲ್ಲಿ ಬಂಡಾಯದ ಪ್ರಮುಖ ಮಿತ್ರರು ಭಾಗವಹಿಸಿ ಪರಿಷತ್ತಿಗೆ ನೀಲನಕಾಶೆ ತಯಾರಿಸಿಕೊಟ್ಟದ್ದು ನನಗೆ ಸರಿಕಾಣಲಿಲ್ಲ. ಈ ಬಗ್ಗೆ ನನ್ನ ತೀವ್ರ ಅಸಹನೆಯನ್ನು ವಲಯ ಸಂಚಾಲಕರಾದ ಆರ್. ವಿ. ಭಂಡಾರಿ ಅವರಿಗೆ ಬರೆದು ತಿಳಿಸಿದ್ದೆ. ಪರಿಷತ್ತು ಕರೆದ ಸಭೆಯಲ್ಲಿ ಭಾಗವಹಿಸುವುದು ಬೇರೆ, ನೀಲನಕಾಶೆ ತಯಾರಿಸಿಕೊಟ್ಟು ಅದರೊಂದಿಗೆ ಗುರುತಿಸಿಕೊಳ್ಳುವುದು ಬೇರೆ. ಪರಿಷತ್ತನ್ನು 'ಯಜಮಾನ ಸಂಸ್ಕೃತಿ'ಯ ಪ್ರತಿನಿಧಿಯೆಂದು ಪರಿಗಣಿಸಿಯೇ ಪ್ರತಿಭಟನಾತ್ಮಕ ನೆಲೆಯಲ್ಲಿ ಹುಟ್ಟಿಕೊಂಡ ಸಾಹಿತ್ಯಿಕ ಸಂಘಟನೆಯೊಂದು ಇಂಥದೊಂದು ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಮೊದಲು ಸರ್ವ ಸದಸ್ಯರ ಸಭೆ ಕರೆದು ಸರ್ವಾನುಮತದ ಅಭಿಪ್ರಾಯದ ಮೇರೆಗೆ ಭಾಗವಹಿಸುವುದೇ ಬೇಡವೇ ಎಂಬುದನ್ನು ಇತ್ಯರ್ಥಪಡಿಸಿಕೊಳ್ಳಬೇಕಿತ್ತು. ಎಡಪಂಥೀಯ ಯಾಕೆ, ಪ್ರಜಾಸತ್ತಾತ್ಮಕವೆಂದು ಘೋಷಿಸಿಕೊಂಡಿರುವ ಯಾವುದೇ ಸಂಘಟನೆಗೆ ಈ ಕ್ರಮ ಹೆಚ್ಚು ಶೋಭಿಸುವಂಥಾದ್ದು. ಇದು ನನ್ನ ಖಚಿತವಾದ ನಿಲುವು. ಈ ಬಗ್ಗೆ ಆರ್. ವಿ. ಜತೆಗೆ ಸೈದ್ಧಾಂತಿಕವಾದ ಚರ್ಚೆ ನಡೆಸಿದ್ದೆ. 'ಅನುಕೂಲವಾದಿ' ನಿಲುವು ಎಂದು ವರ್ಣಿಸುವಾಗ ಸಂಘಟನೆಯ ವರಿಷ್ಠರ ಈ ಪ್ರಮಾದವನ್ನೇ ನಾನು ಉದ್ದೇಶಿಸುತ್ತಿರುವುದು; ವ್ಯಕ್ತಿವಾದಿ ಹಿತಾಸಕ್ತಿಗಳ ಬಗ್ಗೆ ನಾನು ಪತ್ರಮುಖೇನ ಆರ್.ವಿ.ಗೆ ಸ್ಪಷ್ಟವಾಗಿ ತಿಳಿಸಿರುವುದರಿಂದ ಅದರ ಬಗ್ಗೆ ಬರೆಯುವ ಅಗತ್ಯವಿಲ್ಲ ಅನಿಸುತ್ತದೆ. ದ.ಕ.., ಉ.ಕ. ಮತ್ತು ಶಿವಮೊಗ್ಗ ಜಿಲ್ಲೆಗಳ ಕಾರ್ಯಕರ್ತರ ಸಮಾವೇಶ ಮಂಗಳೂರಿನಲ್ಲಿ ನಡೆದಾಗ, ವಲಯ ಸಂಚಾಲಕರೆಂಬ ನಾತೆಯಲ್ಲಿ ಸಭಾಧ್ಯಕ್ಷರೂ ಆಗಿದ್ದ ಆರ್.ವಿ., ತಮ್ಮ ಹೊಣೆಯನ್ನು ಸರಿಯಾಗಿ ನಿರ್ವಹಿಸಲಾರದೆ ಹೋದರು. ನಾನು ಭಾಗವಹಿಸಬೇಕಾದರೆ ವೈಯಕ್ತಿಕ ವಿಷಯಗಳ ಚರ್ಚೆಯಾಗಬಾರದೆಂಬ ಶರ್ತ ವಿಧಿಸಿದ್ದೆ. ಹಾಗಾಗದಂತೆ ತಾನು ನೋಡಿಕೊಳ್ಳುವುದಾಗಿ ಭರವಸೆ ನೀಡಿದ್ದ ಆರ್.ವಿ., ವ್ಯಕ್ತಿವಾದಿ-ಅನುಕೂಲವಾದಿಗಳ ವ್ಯರ್ಥಾಲಾಪದ ವಿರುದ್ಧ ತನ್ನ ತೀರ್ಪು ನೀಡದೆ ಸುಮ್ಮನೆ ಕೂತಿದ್ದು ಆಕ್ಷೇಪಕಾರಿಯಾಗಿದೆ. ಎಡಪಂಥೀಯ ಸಂಘಟನೆಯೊಂದನ್ನು ಕಟ್ಟುವ ವೇಳೆ ಈ ಬಗೆಯ ದಾಕ್ಷಿಣ್ಯ, ಸ್ನೇಹ, ಮತ್ತಿತರ ವ್ಯಕ್ತಿಸಂಬಂಧದ ನೆಲೆಗಳನ್ನು ಮುಖ್ಯವಾಗಿ ಪರಿಗಣಿಸುವುದು ಸರಿಯಲ್ಲವೆಂದು ನನ್ನ ಭಾವನೆ. ಸಂಘಟನೆಯ ಇದುವರೆಗಿನ ಇತಿಹಾಸದಲ್ಲಿ ಇಂಥ ಪ್ರಮಾದಗಳು ನಡೆಯುತ್ತಲೇ ಬಂದಿವೆ. ನಾವು

ಹೊಸದೊಂದು ವ್ಯಕ್ತಿಸಂಬಂಧವನ್ನು ಅರ್ಥಪೂರ್ಣವಾಗಿ ರೂಪಿಸುವ ಹೊಣೆ ಹೊತ್ತವರು ತಾನೆ ?

ಇಡಿಯ ಸಂಘಟನೆಯನ್ನು ದುರಸ್ತಿ ಮಾಡುವುದು ನಮ್ಮ ಅಳವಿಗೆ ಮೀರಿದ್ದು ; ಪರ್ಯಾಯ ಸಂಘಟನೆ ಕಟ್ಟುವುದಕ್ಕಿಂತ ಕನಿಷ್ಠ ನಮ್ಮ ನಮ್ಮ ಜಿಲ್ಲೆಯಲ್ಲಾದರೂ ಸಂಘಟನೆಯ ಮೂಲೋದ್ದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಉಪಯುಕ್ತ ಕಾರ್ಯ ಕ್ರಮಗಳನ್ನು ಹಾಕಿಕೊಳ್ಳೋಣ ; ಆ ಮೂಲಕ ಇಡಿಯ ಸಂಘಟನೆ ಹಿಡಿಯಬೇಕಾದ ಗುರಿಯನ್ನು ನಿರ್ದೇಶಿಸೋಣ ಎಂಬುದು ನನ್ನ ನಿಲುವಾಗಿತ್ತು ; ಇದಕ್ಕೆ ಸಹಮತರಾಗಿಯೇ ಇದ್ದ ಆರ್.ವಿ.ಯವರು ನಡಕೊಂಡ ಬಗೆ ನನ್ನ ಪಾಲಿಗೆ ಕಳವಳಕಾರಿ ಎನಿಸಿದುದರಿಂದ ನಾನು 'ಅನ್ವೇಷಣೆ'ಯಲ್ಲಿ ಬರೆಯಬೇಕಾಯಿತು.

ಅವರು ರಾಜೀನಾಮೆ ಕೊಡುವ ಅರ್ಥದ ಮಾತುಗಳನ್ನು ಬರೆದಿದ್ದಾರೆ. ಬಂಡಾಯ ಸಾಹಿತ್ಯ ಸಂಘಟನೆ ನನಗಿಂತ, ಆರ್.ವಿ.ಗಿಂತ, ಕೇಂದ್ರ ಸಮಿತಿಗಿಂತ ಹೆಚ್ಚು ಮಹತ್ವದ್ದು ಎಂಬ ಅರಿವಿನಿಂದ ಕೆಲಸ ಮಾಡಹೊರಟಾಗ ಇಂಥ ಮಾತುಗಳನ್ನು ಆಡುವುದು ನಮ್ಮ ನಮ್ಮ ಸೈದ್ಧಾಂತಿಕ ನಿಷ್ಠೆಯ ಪರೀಕ್ಷಾ ಸಾಧನವಾಗುತ್ತದೆ.

ಕೊನೆಗೊಂದು ಮಾತು ಹೇಳಬೇಕಾಗಿದೆ. ವ್ಯಕ್ತಿಯಾಗಲಿ ಸಂಘಟನೆಯಾಗಲಿ ಅಗತ್ಯವಿಲ್ಲದಿದ್ದಾಗಲೂ ರಾಜಿ ಮಾಡಿಕೊಳ್ಳುತ್ತಲೇ ಹೋದರೆ ಘೋಷಿಸಿಕೊಂಡ ನಿಲುವುಗಳು ವಿಡಂಬನೆಗೊಳಗಾಗುತ್ತವೆ. ನಾನು, ಆರ್.ವಿ. ಮತ್ತು ನಮ್ಮಂಥವರು ಕೂಡಿ ಕಟ್ಟಿದ ಸಂಘಟನೆ ಹೀಗಾಗಿದೆ. ಹೀಗಾಗಿರುವುದು ಸ್ಪಷ್ಟವಾದ ಮೇಲೆ, ಸಂಘಟನೆಯನ್ನು ಇನ್ನು 'ಜನಪರ'ವೆಂದು ಕರೆದರೆ 'ಯಾವ ಜನ?' ಎಂದು ಪ್ರಶ್ನಿಸಬೇಕೆನಿಸುತ್ತದೆ. ಹೀಗೆ ಪ್ರಶ್ನಿಸುವ ಛಾತಿಯೇ ನಿಜವಾದ ಬಂಡಾಯವಷ್ಟೆ ?

—ಡಾ॥ ಆರ್ಕೆ, ಮಣಿಪಾಲ

ಹತ್ತು ವರ್ಷದ ಬಂಡಾಯದ ಸಾಧನೆ ಇತ್ಯಾದಿ

ಬಂಡಾಯ ಹತ್ತು ವರ್ಷದ ಸಾಧನೆಯ ಕುರಿತು ವಿವಿಧ ಲೇಖಕರ ಅಭಿಪ್ರಾಯ ಗಳನ್ನು ಪ್ರಕಟಿಸಿದ್ದ 'ಅನ್ವೇಷಣೆ' ಓದಿ ಈ ಅನಿಸಿಕೆ :

ಅಗದಿ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾದದ್ದು 'ಬಂಡಾಯ' ಉತ್ತಮ ಕಲಾ ಕೃತಿಯ ನಿರ್ಮಾಣದ ವಿಷಯದಲ್ಲಿ ಅಂತದ್ದೇನನ್ನೂ ಸಾಧಿಸಿಲ್ಲ ಎಂಬುದನ್ನು. ಬಹುಶಃ ಇದಕ್ಕೆ ಇರಬಹುದಾದ ಕಾರಣದಲ್ಲೆ ಇದರ ಮಹತ್ವ ಅಡಗಿದೆ. ಪ್ರಧಾನ ಕಾರಣ, 'ಬಂಡಾಯ'ದ ಉದ್ದೇಶವೇ ಕೇವಲ ಸುಂದರ ಕಲಾಕೃತಿಯನ್ನು ಕಟ್ಟುವುದರಲ್ಲಿ ಕೇಂದ್ರೀಕರಣಗೊಂಡಿಲ್ಲ. ಹಿಂದಿನ 'ನವ್ಯ' ಎಲ್ಲಿ ಸೋತಿತ್ತೊ ಅಲ್ಲಿ ಗೆಲುವನ್ನು ಸಾಧಿಸಿದೆ. ಇದೇನು ಸಾಮಾನ್ಯವಾದದ್ದಲ್ಲ. ವ್ಯಕ್ತಿಯ ಖಾಸಗಿ ಅನುಭವದ ಪದರ ಪದರವನ್ನು ಸಂಕೇತ ಪ್ರತಿಮೆಯಲ್ಲಿ ಕಂಡರಿಸುವುದು ಚಾಳಿಯಾಗಿತ್ತು. ಇವೆಲ್ಲವನ್ನು ಹರಿದುಕೊಂಡು ಬಂಡಾಯ ಬೆಳೆಯಿತು. ಜನ ಸಮೀಪವಾಯಿತು. ಎಂದರೆ ಜನ ಇದನ್ನು ಪ್ರೀತಿಯಿಂದ

ಎತ್ತಿಕೊಂಡರು ಎಂದಲ್ಲ. ಕನಿಷ್ಠ ಪಕ್ಷ ಅನೇಕರಿಗೆ ಡಂಬಾಯ-ಗಿಂಬಾಯ ಎಂದೆಲ್ಲ ಬಯ್ಯುವ ಹಾಗೆ ಮಾಡಿತು. ಎಂದರೆ ಅಷ್ಟರಮಟ್ಟಿಗೆ ಅವರನ್ನು ಚುಚ್ಚಿದೆಯೆಂದೆ ಅರ್ಥ!

ಇದರ ಜತೆಗೆ, ಇದು ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯವನ್ನು ಬಿಟ್ಟರೆ ಬಂಡಾಯವೇ ಈ ನೆಲದಲ್ಲಿ ಹುಟ್ಟಿದ್ದು. ನಮ್ಮ 'ನವೋದಯ' ಸಾಹಿತ್ಯ ಪಾಶ್ಚಾತ್ಯ ರೋಮ್ಯಾಂಟಿಕ್‌ದಿಂದ ಪ್ರಭಾವಿತವಾದದ್ದು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದೂ ಒಂದು ನಮೂನೆ ಸಾಮ್ರಾಜ್ಯಶಾಹಿಯ ವಿರುದ್ಧದ ಪ್ರತಿಭಟನಾ ರೂಪವಾಗಿ ಬೆಳೆದು ಬಂದದ್ದು. ಪಾಶ್ಚಾತ್ಯ ಸಾಹಿತ್ಯ-ಸಂಸ್ಕೃತಿ ಎದುರಿಗೆ ನಾವೇನು ಕಮ್ಮಿಯಲ್ಲ ಎಂದು ತೋರಿಸುವ ಉಮೇದಿಯಲ್ಲಿ ಪ್ರಾಚೀನ ಎಲ್ಲ ಮೌಲ್ಯವನ್ನೂ ಹಾಡಿ ಹೊಗಳಿದವು. ಹೀಗಾಗಿ ಬೇಂದ್ರೆಯಂತವರು ಜಾನಪದಕ್ಕೆ ನುಗ್ಗಿದರೆ, ಕುವೆಂಪು ಸಂಸ್ಕೃತ ಇತ್ಯಾದಿಗಳ ಕಡೆಗೆ ಧಾವಿಸಿದರು. ಕೆಲವೊನ್ಮೆ ಪಾಶ್ಚಾತ್ಯ ಕೃತಿಗಳ ಅನುವಾದ-ರೂಪಾಂತರ ಗೊಳಿಸಿದರೂ ಅವೆಲ್ಲ ಅಚ್ಚ ಭಾರತೀಯ ಛಾಪನ್ನು ಪಡೆಕೊಳ್ಳುತ್ತಿದ್ದವು. ಆದರೆ ಇವ ರೆಲ್ಲರಿಗೆ ಮಾದರಿ ಪಾಶ್ಚಾತ್ಯದಿಂದ ಬಂದದ್ದು ಎಂಬುದನ್ನು ಗಮನಿಸಬೇಕಾದದ್ದು.

[ಇದರ ಅತಿರೇಕವನ್ನು ವಿ. ಜಿ. ಭಟ್ಟರು ತಮ್ಮ ಕಾವ್ಯದಲ್ಲಿ ಲೇವಡಿ ಮಾಡುತ್ತಾರೆ. ಇವರು ನೇರವಾಗಿ ನವೋದಯದ ಮೇಜರ್ ಕವಿಗಳಾದ ಬೇಂದ್ರೆ, ಕುವೆಂಪು, ಪುತಿನ (?) ಇವರ ಕವಿತೆಗಳನ್ನು ತಮ್ಮ ಆರಂಭದ ಕವನಗಳಲ್ಲಿ ಮೃದುವಾದ ವ್ಯಂಗ್ಯದಿಂದ ಲೇವಡಿ ಮಾಡಿದ್ದಾರೆ.]

ಇದರ ನಂತರ ಬಂದ ಪ್ರಗತಿಶೀಲರು ಮಾರ್ಕ್ಸ್‌ವಾದ ಮುಂತಾದ ಸಮಾಜವಾದಿ ವಿಚಾರವನ್ನು ಕನ್ನಡದಲ್ಲಿ ಅನುವಾದಿಸಿದರು. ಪುನಃ ಸೃಷ್ಟಿಸಲಿಲ್ಲ. ಒಂದು ಅನುವಾದ ಕಾವ್ಯ ಮೂಲ ಕಾವ್ಯದ ಸತ್ವ ಹೇಗೆ ಕೊಡಲಾರದೊ ಹಾಗೆ ಇವರ ಒಟ್ಟೂ ಕಾವ್ಯ ಪರಂಪರೆಯಾಯಿತು.

ಹೀಗೆ ದಡದಡಿಯಲ್ಲಿ ಬಡಿದಾಡುವ ಈ ಪ್ರಗತಿಶೀಲರ ಕಂಡು 'ನವ್ಯ'ರು ಫರತ್ ಪಶ್ಚಿಮದ ಕಡೆ ತಲೆಹಾಕಿದರು. ಅಲ್ಲಿಯ ಉತ್ತಮ ಕಾವ್ಯವನ್ನು ಕುಡಿದು ಚೆನ್ನಾಗಿ ಇಲ್ಲಿ ಕೃತಿ ರಚಿಸಿದರು. ಇದು ಅಲ್ಲಿಯ ಒಳ್ಳೆಯ ಕಾವ್ಯದ ನೆರಳಲ್ಲಿ, ಹಿನ್ನೆಲೆಯಲ್ಲಿ ಮೂಡಿಬಂದ ಛಾಯೆಯಾದರೂ ಚಲೊ ಕೃತಿಯನ್ನೆ ನೀಡಿತು.

ಆದರೆ ಬಂಡಾಯದವರಿಗೆ ಅಂಥ ಯಾವ ಪೌರ್ವಾತ್ಯ, ಪಾಶ್ಚಾತ್ಯ ಕಾವ್ಯ ಚಳವಳಿಯ ಹಿನ್ನೆಲೆಯೂ ಇರಲಿಲ್ಲ. ಆಫ್ರಿಕಾದ್ದೊ, ದಲಿತ ಪ್ಯಾಂಥರ್ಸ್—ಇವೆಲ್ಲ ಇಲ್ಲಿ ಇದರ ಉತ್ಸಾಹ ಬೆಳೆದ ಮೇಲೆ ಗಮನಾರ್ಹ ಎನಿಸಿದವೆ ಹೊರತು ಅದೇ ಬೆನ್ನೆಲುಬಾಗಿ ನಿಲ್ಲಲಿಲ್ಲ. ಹೀಗಾಗಿ ಮಾದರಿ ಸೃಷ್ಟಿಸಿಕೊಳ್ಳಬೇಕಾದ ಅಥವಾ ಅವರವರಿಗೆ ಕಂಡ ರೀತಿಯಲ್ಲಿ ಬರೆಯುವ ಸಂದರ್ಭ ಬಂಡಾಯದ್ದಾಯಿತು. ಇದರ ಜೊತೆ ಆಗಲೆ ಹೇಳಿರುವ ಹಾಗೆ ಉತ್ತಮ ಸಾಹಿತ್ಯ ನಿರ್ಮಿಸುವುದೊಂದೇ ಇವರ ಉದ್ದೇಶವಾಗಿರಲಿಲ್ಲ. ಅಲ್ಲದಿದ್ದರೆ, ಚಂಪಾ, ಸಿದ್ದಲಿಂಗಯ್ಯ, ಬರಗೂರು ಮುಂತಾದವರು ಇದಕ್ಕಿಂತ ಉತ್ತಮ ಕಾವ್ಯ ಬರೆಯುವ ಪ್ರತಿಭಾವಂತರು. ಆದ್ದರಿಂದ ಬಂಡಾಯದ ಸಾಧನೆಯನ್ನು ಕೇವಲ ಕಲಾಕೃತಿ ಮೂಲಕ ಅಳೆಯುವುದಲ್ಲ.

—ರಾಜು ಹೆಗಡೆ

ಶ್ರೀರಾಮ, ಬಾಬರ್, ಮುಲಾಯಂ ಮತ್ತು ಇಂಗ್ಲಿಷ್

—ಬಿ. ಎಂ. ಹನೀಫ್

ಈ ದೇಶದ ಯುವಜನರಲ್ಲಿ ಅತ್ಯಂತ ಹೆಚ್ಚು ಕನಸುಗಳನ್ನು ಬಿತ್ತಿದ ರಾಜಕಾರಣಿ ಡಾ|| ರಾಮಮನೋಹರ ಲೋಹಿಯಾ. ಇವತ್ತು ಅತ್ಯಂತ ಹೆಚ್ಚು 'ರಾಜಕೀಯ ಹಾದರ' ನಡೆಯುತ್ತಿರುವುದೂ ಲೋಹಿಯಾರ ಹೆಸರಿನಲ್ಲೇ! ಇಂಡಿಯಾದ ಎಲ್ಲ ರಾಜಕೀಯ ಪಕ್ಷಗಳಲ್ಲೂ ಲೋಹಿಯಾರ ಕನಸಿನ 'ಕುಡಿ'ಗಳಿದ್ದಾರೆ. ಆದರೆ ಈ 'ಕುಡಿ'ಗಳು ಲೋಹಿಯಾರನ್ನು ಇಂದು ಮುಖವಾಡಗಳಿಗಷ್ಟೇ ಸೀಮಿತಗೊಳಿಸಿ, ಭ್ರಷ್ಟ ವ್ಯವ ವ್ಯವಸ್ಥೆಯ ಜತೆ ರಾಜಿ ಹೊಂದಿ 'ವಿಷವೃಕ್ಷ'ಗಳಾಗಿ ಬೆಳೆದಿದ್ದಾರೆ.

ಲೋಹಿಯಾ ಮೃತರಾಗಿ ಎರಡೂವರೆ ದಶಕಗಳು ಸಮೀಪಿಸುತ್ತಿವೆ. ಈ ದೇಶಕ್ಕೆ ಲೋಹಿಯಾರನ್ನು ಕೊಟ್ಟ ನಾಡು ಉತ್ತರ ಪ್ರದೇಶ ಈಗ ಜ್ವಾಲಾಮುಖಿಯ ಮೇಲೆ ನಿಂತಿದೆ. ಉತ್ತರಪ್ರದೇಶದ ಎರಡು ಮುಖ್ಯ ಸಮಸ್ಯೆಗಳು ಬಾಬ್ರಿ ಮಸೀದಿ ರಾಮಜನ್ಮಭೂಮಿ ವಿವಾದ ಮತ್ತು ಇಂಗ್ಲಿಷ್ ಮೇಲಿನ ನಿಷೇಧ. ಈ ಎರಡೂ ಸಮಸ್ಯೆಗಳು ಇಡೀ ದೇಶದ ಮೇಲೆ ಪರಿಣಾಮ ಬೀರುತ್ತಿದ್ದು, ದೇಶದ ಸಾಮಾಜಿಕ-ರಾಜಕೀಯ ವ್ಯವಸ್ಥೆಯನ್ನು ತಿರುವಿ ಹಾಕುವ ಸಾಮರ್ಥ್ಯ ಹೊಂದಿವೆ.

ಇಡೀ ದೇಶದ ಸ್ಥಿತಿಯನ್ನು, ರಾಜಕೀಯವನ್ನು ಉತ್ತರ ಪ್ರದೇಶ ನಿಯಂತ್ರಿಸುತ್ತಿರುವ ಮತ್ತು ಪ್ರತಿನಿಧಿಸುತ್ತಿರುವ ಈ ಹೊತ್ತಲ್ಲಿ ಅಲ್ಲಿಗೆ ಮುಲಾಯಂಸಿಂಗ್ ಯಾದವ್ ಎಂಬ ಹಳ್ಳಿಗ ಮುಖ್ಯಮಂತ್ರಿಯಾಗಿ ಬಂದಿದ್ದಾರೆ. ಎಲ್ಲ ಸಮಾಜವಾದಿಗಳಂತೆ ಲೋಹಿಯಾ ಹೆಸರು ಹೇಳುತ್ತಿರುವ ಮುಲಾಯಂಸಿಂಗ್ ಯಾದವ್ ಎರಡು ವಿಷಯಗಳಲ್ಲಿ ಮಾತ್ರ ಲೋಹಿಯಾ ಕೂಡಾ ಬೆನ್ನುತಟ್ಟುವಂತಹ ಕೆಲಸ ಮಾಡಿದ್ದಾರೆ ಒಂದು ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದಲ್ಲಿ ಮತಾಂಧರನ್ನು ಎದುರಿಸುತ್ತಿರುವ ರೀತಿ; ಇನ್ನೊಂದು ಈ ದೇಶಕ್ಕೆ ಪೀಡೆಯಾಗಿರುವ ಇಂಗ್ಲಿಷ್‌ನ್ನು ಒದ್ದೋಡಿಸಹೊರಟಿರುವ ಅವರ ಕ್ರಮ.

ಎರಡೂ ವಿಷಯಗಳು ಮುಲಾಯಂಗೆ ಅಪಕೀರ್ತಿಯನ್ನು ತರುವ ಸಾಧ್ಯತೆಯೇ ಹೆಚ್ಚು. ಯಾಕೆಂದರೆ 'ರಾಮಜನ್ಮಭೂಮಿ'ಯಲ್ಲಿ ರಾಮದೇವಾಲಯ ಶಿಲಾ

ನ್ಯಾಸ ಮಾಡಹೊರಟ ದ್ವಾರಕಾದ ಶಂಕರಾಚಾರ್ಯರನ್ನು ಬಂಧಿಸಿದ ಮುಲಾಯಂ ರನ್ನು ಈ ದೇಶದ ಪುರೋಹಿತ ಶಾಹಿ ಎಂದಿಗೂ ಕ್ಷಮಿಸಲು ಸಾಧ್ಯವಿಲ್ಲ. ಅದೇ ರೀತಿ ಇಂಗ್ಲಿಷನ್ನು ಒದ್ದೋಡಿಸಹೊರಟ ಮುಲಾಯಂರನ್ನು ಈ ದೇಶದ ಆಳುವ ವರ್ಗ ಮತ್ತು ಅಧಿಕಾರಶಾಹಿ ಎಂದಿಗೂ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಈ ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಹಿಡಿತ ಹೊಂದಿರುವ ಆಂಗ್ಲ ಅಧಿಕಾರಶಾಹಿ ಹಾಗೂ ಸಾಮಾಜಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಹೊಂದಿರುವ ಪುರೋಹಿತ ಶಾಹಿ ಎರಡೂ ಮುಲಾಯಂಸಿಂಗ್‌ರನ್ನು ಒದ್ದೋಡಿಸಲು ತಂತ್ರಗಳನ್ನು ರೂಪಿಸ ತೊಡಗಿವೆ. ಅದರ ಅಂಗವಾಗಿ ಆಂಗ್ಲಪತ್ರಿಕೆಗಳಲ್ಲಿ ಮುಲಾಯಂರ ವಿರುದ್ಧ ಆಪಾ ದನೆಗಳು, ಅವರ 'ಕ್ರಿಮಿನಲ್' ಸ್ನೇಹಿತರ ಬಗ್ಗೆ ಲೇಖನಗಳು ಆರಂಭವಾಗಿವೆ.

ಮುಲಾಯಂಸಿಂಗ್ ಒಳ್ಳೆಯ ಮನುಷ್ಯನೆಂಬ ಸರ್ಟಿಫಿಕೇಟ್ ಕೊಡುವುದು ಈ ಲೇಖನದ ಉದ್ದೇಶ ಅಲ್ಲ. ಮುಲಾಯಂ ಹೇಗೆ ಲೋಹಿಯಾರನ್ನು ಅರ್ಥೈಸಿ ಕೊಂಡಿದ್ದಾರೆ ಹಾಗೂ ತನ್ಮೂಲಕ ಲೋಹಿಯಾರ ಕನಸುಗಳಿಗೆ ಕ್ರಿಯಾರೂಪ ಕೊಡ ಹೊರಟಿದ್ದಾರೆ ಎಂಬುದನ್ನು ವಿವರಿಸುವುದಷ್ಟೇ ಉದ್ದೇಶ.

ಮೊದಲು 'ರಾಮಜನ್ಮಭೂಮಿ'ಗೆ ಬರೋಣ—ರಾಮನೊಬ್ಬ ಪೌರಾಣಿಕ ವ್ಯಕ್ತಿ. ಬಾಬರ್ ಒಬ್ಬ ಐತಿಹಾಸಿಕ ವ್ಯಕ್ತಿ. ಪುರಾಣ ಮತ್ತು ಇತಿಹಾಸದ ನಡುವಣ ವ್ಯತ್ಯಾಸ ಇಲ್ಲಿ ತುಂಬಾ ಮಹತ್ವದ್ದು.

ಇತಿಹಾಸದ ವಸ್ತುನಿಷ್ಠ ಅಧ್ಯಯನ ನಡೆಸುತ್ತಿರುವ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ "ಇತಿಹಾಸ ಅಧ್ಯಯನ ಕೇಂದ್ರ" ಬಹಿರಂಗಪಡಿಸಿರುವ ವಿವರಗಳು ಈ ಕೆಳಗಿನಂತಿವೆ.

ವಾಲ್ಮೀಕಿ ರಾಮಾಯಣದ ಪ್ರಕಾರ ಅಯೋಧ್ಯೆಯ ದೊರೆ ರಾಮ ಕಲಿಯುಗ ಕ್ಕಿಂತ ಸಾವಿರಾರು ವರ್ಷ ಮುಂಚಿನ ತ್ರೇತಾಯುಗದಲ್ಲಿ ಹುಟ್ಟಿದ. ಈ ಇಸವಿಯನ್ನು ಕ್ರಿ. ಪೂ. 3102 ಎಂದು ಅಂದಾಜಿಸಲಾಗಿದೆ.

ಈಗಿನ ಅಯೋಧ್ಯೆ ಹಾಗೂ ಅದರ ಸುತ್ತಲಿನ ಪ್ರದೇಶ ಇಷ್ಟು ಪುರಾತನ ಇತಿಹಾಸ ಹೊಂದಿದೆ ಎಂಬುದಕ್ಕೆ ಪ್ರಾಚ್ಯವಸ್ತು ದಾಖಲೆಗಳು ಲಭ್ಯವಿಲ್ಲ. ಈ ಪ್ರದೇಶದಲ್ಲಿ ಅತ್ಯಂತ ಪುರಾತನ ನಾಗರಿಕತೆ ಇದ್ದದ್ದು ಕ್ರಿ. ಪೂ. 800ರ ಆಸು ಪಾಸಿನಲ್ಲಿ. ವಾಲ್ಮೀಕಿ ರಾಮಾಯಣದಲ್ಲಿ ನೀಡಲಾದ ನಾಗರಿಕತೆ ವಿವರಗಳಿಗೂ ಕ್ರಿ. ಪೂ. 800ರ ಇಲ್ಲಿನ ನಾಗರಿಕತೆಗೂ ಯಾವುದೇ ಸಾಮ್ಯತೆ ಇಲ್ಲ.

'ಅಯೋಧ್ಯೆ' ಎಂಬ ಸ್ಥಳದ ಬಗ್ಗೆಯೂ ವಿವಾದ ಇದೆ. ಬೌದ್ಧ ಗ್ರಂಥಗಳ ಪ್ರಕಾರ ಕೋಶಲದ ರಾಜಧಾನಿಯಾಗಿ ಶ್ರಾವಸ್ತಿ ಮತ್ತು ಸಾಕೇತ ನಗರಗಳ ಪ್ರಸ್ತಾಪ

ಇದೆ ಅಯೋಧ್ಯೆಯದ್ದಲ್ಲ. ಜೈನರ ಗ್ರಂಥಗಳೂ ಕೋಶಲದ ರಾಜಧಾನಿ ಸಾಕೇತ ಎಂದಿವೆ. ಅಯೋಧ್ಯ ನಗರದ ಬಗ್ಗೆ ಇರುವ ಪ್ರಸ್ತಾಪಗಳೂ 'ಈ ನಗರ ಗಂಗಾನದಿ ತೀರದಲ್ಲಿದೆ' ಎಂದಿವೆ- ಈಗಿರುವಂತೆ ಸರಯೂ ನದಿ ತೀರದಲ್ಲಿ ಅಲ್ಲ. ಸಾಕೇತ ನಗರಕ್ಕೆ ಅಯೋಧ್ಯೆ ಎಂದು ಕ್ರಿಸ್ತಶಕ ಐದನೆ ಶತಮಾನದಲ್ಲಿ ಸ್ಕಂದ ಗುಪ್ತ ಮರುನಾಮಕರಣ ಮಾಡಿದ.

ಅಯೋಧ್ಯೆ ರಾಮ ಸಂಸ್ಕೃತಿಯ ಜತೆ ಗುರುತಿಸಿಕೊಂಡದ್ದು ತೀರಾ ಇತ್ತೀಚೆಗೆ. ಅದಕ್ಕೆ ಮುನ್ನ ಅದು ವಿವಿಧ ಧರ್ಮಗಳ ಪ್ರಮುಖ ಕೇಂದ್ರವಾಗಿತ್ತು.

ಕ್ರಿ. ಶ. ಐದರಿಂದ ಎಂಟನೆ ಶತಮಾನದವರೆಗಿನ ದಾಖಲೆಗಳು ಹಲವೆಡೆ ಅಯೋಧ್ಯೆಯ ಜನರ ಬಗ್ಗೆ ಪ್ರಸ್ತಾಪಿಸಿವೆ. ಆದರೂ ಅವರು ರಾಮನ ಪೂಜೆ ಮಾಡುತ್ತಿದ್ದ ಬಗ್ಗೆ ಪ್ರಸ್ತಾಪಿಸಿಲ್ಲ.

ಅಯೋಧ್ಯೆಯು ಹಲವಾರು ಸ್ತೂಪ ಹಾಗೂ ವಿಹಾರಗಳನ್ನು ಹೊಂದಿದ್ದು ಬೌದ್ಧರ ಪ್ರಮುಖ ಕೇಂದ್ರವಾಗಿತ್ತು ಎಂದು ಹ್ಯೂಯನ್‌ತ್ಸಾಂಗ್ ಬರೆದಿದ್ದಾನೆ. ಇಲ್ಲಿ ಬುದ್ಧ ಕೆಲಕಾಲ ವಾಸಿಸಿದ್ದು ಬೌದ್ಧರಿಗೆ ಇದು ಈಗಲೂ ಪವಿತ್ರಸ್ಥಳ ಎನ್ನಿಸಿದೆ.

ಜೈನರ ಪ್ರಕಾರ ಮೊದಲ ಹಾಗೂ ನಾಲ್ಕನೆ ಜೈನ ತೀರ್ಥಂಕರರ ಜನ್ಮಸ್ಥಳ. ಅಯೋಧ್ಯೆ ಕ್ರಿ. ಪೂ. 3 ಮತ್ತು 4ನೇ ಶತಮಾನಕ್ಕೆ ಸಂಬಂಧಿಸಿದ ಜೈನ್ಯ ವಿಗ್ರಹಗಳು ಈ ನಗರದಲ್ಲಿ ಪ್ರಾಚ್ಯವಸ್ತು ಶೋಧಕರಿಗೆ ದೊರೆತಿವೆ.

ರಾಮಾನಂದಿ ವರ್ಗದ ಬೆಳವಣಿಗೆ ಹಾಗೂ ಹಿಂದಿಯಲ್ಲಿ ರಾಮಕಥೆ ರಚನೆಯಾದ ಬಳಿಕ ಕ್ರಿಸ್ತಶಕ 13ನೇ ಶತಮಾನದ ಬಳಿಕ ರಾಮ ಸಂಸ್ಕೃತಿ ಇಲ್ಲಿ ಜನಪ್ರಿಯ ಆಗಿರಬೇಕು. 15-16ನೇ ಶತಮಾನದಲ್ಲೂ ಅಯೋಧ್ಯೆಯಲ್ಲಿ ರಾಮನಂದಿಗಳಿಗಿಂತ ಹೆಚ್ಚು ಶೈವ ಸಂಸ್ಕೃತಿಯ ಜನರು ವಾಸವಾಗಿದ್ದರು. 18ನೇ ಶತಮಾನದಿಂದ ಈಚೆಗೆ ಇಲ್ಲಿ ರಾಮನ ಸಂಸ್ಕೃತಿ ಹೆಚ್ಚು ಜನಪ್ರಿಯವಾಯಿತು.

ಬಾಬ್ರಿ ಮಸೀದಿಯನ್ನು ರಾಮಜನ್ಮಭೂಮಿಯ ಮೇಲೆ ಕಟ್ಟಲಾಗಿದೆ ಎಂಬ ವಾದಕ್ಕೆ ಯಾವುದೇ ಐತಿಹಾಸಿಕ ಅಥವಾ ಪ್ರಾಚ್ಯವಸ್ತು ದಾಖಲೆಗಳಿಲ್ಲ.

ಅದೇ ವೇಳೆ ಇಲ್ಲಿನ ಮಸೀದಿಯನ್ನು ಬಾಬರನೇ ಕಟ್ಟಿಸಿದ್ದಾನೆ ಎನ್ನುವುದಕ್ಕೂ ಸಾಕಷ್ಟು ದಾಖಲೆ ಪುರಾವೆ ಇಲ್ಲ. ಮಸೀದಿಯ ಬಾಗಿಲಿನ ಎರಡೂ ಬದಿಗಳಲ್ಲಿ ಇರುವ ಪರ್ಶಿಯನ್ ಸೂಕ್ತಿ ಮಾತ್ರ ಈ ಬಗ್ಗೆ ಇರುವ ದಾಖಲೆ. 'ಬಾಬರ್‌ನಾಮಾ'ವನ್ನ ಮೊದಲು ಅನುವಾದಿಸಿದ ಶ್ರೀಮತಿ ಬೆವರಿಡ್ಜ್ ಅವರ ಪ್ರಕಾರ ಈ ಸೂಕ್ತಿಯ ಅನು

ವಾದ "ಚಕ್ರವರ್ತಿ ಬಾಬರ್ ಆದೇಶದ ಮೇರೆಗೆ- ಚಕ್ರವರ್ತಿಯ ನ್ಯಾಯಪ್ರಜ್ಞೆ ಸ್ವರ್ಗದಷ್ಟು ಎತ್ತರಕ್ಕೂ ತಲುಪುತ್ತದೆ–ಸಹೃದಯಿ ಮೀರ್‌ಬಾಕಿ ಈ ದೇವದೂತರ ಜ್ಞಾನ ಪ್ರಕಾಶವ ಸ್ಥಳವನ್ನು ನಿರ್ಮಿಸಿದನು. ಆತನ ಸಹೃದಯತೆ ಚಿರಕಾಲ ಬಾಳಲಿ"

ಇದರ ಪ್ರಕಾರ, ಬಾಬರ್‌ನ ಅನುಯಾಯಿ ಮಿರ್‌ಬಾಕಿ ಮಸೀದಿ ನಿರ್ಮಿಸಿದನು. ಯಾವುದೇ ದೇವಾಲಯ ನಾಶ ಮಾಡಿದ ಬಗ್ಗೆ ಪ್ರಸ್ತಾಪ ಇಲ್ಲ.

"ಐನೆ-ಅಕ್ಬರಿ"ಯಲ್ಲಿ ಅಯೋಧ್ಯೆ ಬಗ್ಗೆ ಬರುವ ಪ್ರಸ್ತಾಪ–ತ್ರೇತಾಯುಗದಲ್ಲಿದ್ದ ರಾಮಚಂದ್ರ ಆಧ್ಯಾತ್ಮಿಕ ಮತ್ತು ಭೌತಿಕ ದೊರೆ ಆಗಿದ್ದ ಎಂದಷ್ಟೇ ಆಗಿದೆ. ಎಲ್ಲಿಯೂ ಅಕ್ಬರ್‌ನ ಅಜ್ಜ ಬಾಬರ್ ದೇವಾಲಯ ನಾಶಮಾಡಿ ಮಸೀದಿ ನಿರ್ಮಿಸಿದ ಪ್ರಸ್ತಾಪ ಇಲ್ಲ.

ಅಕ್ಬರನ ಸಮಕಾಲೀನನಾಗಿದ್ದ 'ಶ್ರೇಷ್ಠರಾಮಭಕ್ತ' ತುಲಸೀದಾಸ ಮ್ಲೇಚ್ಛರ ಉಚ್ಛ್ರಾಯ ಸ್ಥಿತಿಯಿಂದ ಆತಂಕಗೊಳಗಾಗಿದ್ದರೂ ಎಲ್ಲೂ ರಾಮಜನ್ಮಭೂಮಿಯಲ್ಲಿ ದೇವಾಲಯ ನಾಶ ಮಾಡಿದ ಬಗ್ಗೆ ಬರೆದಿಲ್ಲ.

19ನೇ ಶತಮಾನದಲ್ಲಷ್ಟೇ ಈ ದೇವಾಲಯದ ಬಗ್ಗೆ ಅವರಿವರ ಹೇಳಿಕೆಗಳ ದಾಖಲೆ ಆರಂಭವಾಯಿತು.

—ಇದಿಷ್ಟು ಈ ಸ್ಥಳದ ಬಗೆಗಿನ ಐತಿಹಾಸಿಕ ವಿಚಾರಗಳು.

ಇನ್ನು ಮುಸ್ಲಿಮರ ವಾದದ ಬಗ್ಗೆ—ಮುಸ್ಲಿಮರಿಗೆ ಧಾರ್ಮಿಕ ಗ್ರಂಥ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದರ ನಡವಳಿಕೆ (**ಹದೀಸ್**) ಅನುಸರಣಾರ್ಹ. ಇವೆರಡರ ಪ್ರಕಾರ ಯಾವುದೇ ವಿವಾದಾತ್ಮಕ ಸ್ಥಳದಲ್ಲಿ ಪ್ರಾರ್ಥನೆ ನಡೆಸಿದರೆ ಅದು ದೇವರಿಂದ ಸ್ವೀಕರಿಸಲ್ಪಡುವುದಿಲ್ಲ. ಜತೆಗೆ ಅಯೋಧ್ಯೆಯಲ್ಲಿರುವ ನಾಲ್ಕೂವರೆ ಸಾವಿರ ಮುಸ್ಲಿಮರಿಗೆ ಈಗಾಗಲೇ ಅಲ್ಲಿ ಗಣನೀಯ ಸಂಖ್ಯೆಯ ಮಸೀದಿಗಳಿವೆ. ಪ್ರಾರ್ಥನೆ ನಡೆಸಲು ಬಾಬ್ರಿ ಮಸೀದಿಯೇ ಬೇಕಾಗಿಲ್ಲ.

ಇಲ್ಲಿ ಇನ್ನೂ ಒಂದು ವಿಶಿಷ್ಟ ಅಂಶವೆಂದರೆ–ಅಯೋಧ್ಯೆಯ ಸ್ಥಳೀಯ ಹಿಂದೂ-ಮುಸ್ಲಿಮರಿಗೆ ಈ ಗದ್ದಲದಲ್ಲಿ ಆಸಕ್ತಿ ಇಲ್ಲ. ಎಲ್ಲ ಹೊರಗಿನವರದ್ದೇ ಕಾರುಬಾರು. ಇತ್ತೀಚೆಗೆ ನಡೆದ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆ ಎರಡರಲ್ಲೂ ಇಲ್ಲಿನ ಜನರು ಹಿಂದೂ ಪರ ಕಾಂಗ್ರೆ, ಬಿಜೆಪಿ ಹಾಗೂ ಮುಸ್ಲಿಮರ ಪರ ಜನತಾದಳಗಳನ್ನು ತಿರಸ್ಕರಿಸಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ!

ಲೋಹಿಯಾ ಹುಟ್ಟಿದ್ದು ಅಯೋಧ್ಯೆ ಪಕ್ಕದ ಅಕ್ಬರಪುರದಲ್ಲಿ. ಈಗ

ಲೋಹಿಯಾ ಶಿಷ್ಯ ಮುಲಾಯಂಸಿಂಗ್ ಈ ವಿವಾದವನ್ನು ನ್ಯಾಯಾಲಯದ ತೀರ್ಪಿನಂತೆ ಬಗೆಹರಿಸುವುದಾಗಿ ಹೇಳಿದ್ದಾರಲ್ಲ.ಇದಕ್ಕೆ ಅಡ್ಡಿ ಬಂದ ಎಲ್ಲರನ್ನೂ (ಹಿಂದೂಗಳ ಅತ್ಯುನ್ನತ ಧರ್ಮಪೀಠದ ಮುಖ್ಯಸ್ಥ ಶಂಕರಾಚಾರ್ಯರನ್ನೂ) ಎದುರು ಹಾಕಿಕೊಂಡು ನ್ಯಾಯಕ್ಕೆ ಅಂಟಿಕೊಂಡಿದ್ದು ಜಾತ್ಯತೀತ ವ್ಯಕ್ತಿಯೊಬ್ಬ ಮಾಡಿದ ಅತ್ಯಂತ ದಿಟ್ಟ ಕೆಲಸ. ಇದರಲ್ಲಿ ಅವರ 'ಧರ್ಮನಿರಪೇಕ್ಷ' ಗುಣ ಎದ್ದು ಕಾಣುತ್ತಿದೆ. ಮತಗಳ ಸಂಖ್ಯೆಯ ಮೇಲೆ ಜಾತಿ ರಾಜಕೀಯ ಮಾಡುವ ರಾಜಕಾರಣಿಗಳೇ ತುಂಬಿರುವ ಈ ದೇಶದಲ್ಲಿ ಮುಲಾಯಂ ನಿಜಕ್ಕೂ ಧೈರ್ಯವಂತರಾಗಿ ಕಾಣುತ್ತಾರೆ.

ಇಂಗ್ಲಿಷ್ ವಿರೋಧ

'ಇಂಗ್ಲಿಷ್ ವಿವಾದ' ಬಹಳ ಸರಳೀಕರಣಕ್ಕೊಳಗಾಗಿದೆ. ಮುಲಾಯಂಸಿಂಗ್ ಕ್ರಮದ ಬಗ್ಗೆ ಮಧ್ಯಮ ವರ್ಗದ ಅಕ್ಷರಸ್ಥರೂ ಮೂಗು ಮುರಿಯುತ್ತಿದ್ದಾರೆ. "ಇಂಗ್ಲಿಷನ್ನು ನಿಷೇಧಿಸುವುದೆಂದರೆ ಏನು ? ಅದು ಅಂತರರಾಷ್ಟ್ರೀಯ ಭಾಷೆ. ಅದಿಲ್ಲದೆ ನಾವು 21ನೇ ಶತಮಾನಕ್ಕೆ ತಲುಪುವುದು ಹೇಗೆ ?" ಎಂಬುದು ಸಾಮಾನ್ಯ ಪ್ರಶ್ನೆ.

ಇವರು ಯಾರೂ ಮುಲಾಯಂಸಿಂಗ್ ನಿಜಕ್ಕೂ ಮಾಡಿದ್ದು ಏನು ? ಉತ್ತರ ಪ್ರದೇಶದ ಸ್ಥಿತಿ ಹೇಗಿದೆ ಎಂದು ವಿಚಾರಿಸುವ ಗೊಡವೆಗೇ ಹೋಗಿಲ್ಲ. (ಉತ್ತರ ಪ್ರದೇಶದ ಸ್ಥಿತಿ ಭಾರತದ ಸ್ಥಿತಿಯನ್ನೇ ಸೂಚಿಸುತ್ತಿದೆ)

ಭಾರತದಲ್ಲಿ ಇವತ್ತು ಇರುವ ಶೈಕ್ಷಣಿಕ ಸಂಸ್ಥೆಗಳಲ್ಲಿ 1850 ಲಕ್ಷ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ 400 ಲಕ್ಷ ವಿದ್ಯಾರ್ಥಿಗಳ ಶಿಕ್ಷಣ ಮಾಧ್ಯಮ ಇಂಗ್ಲಿಷ್. ದೇಶದಲ್ಲಿನ 137 ಮೆಡಿಕಲ್ ಕಾಲೇಜು, ಐದು ಐಐಟಿಗಳು, ಎಂಟು ಕೇಂದ್ರ ವಿಶ್ವವಿದ್ಯಾಲಯಗಳು, 17 ಕೃಷಿ ವಿಶ್ವವಿದ್ಯಾಲಯಗಳು (ಒಟ್ಟು 22 ಇವೆ) 11 ಅನುದಾನಿತ ವಿ.ವಿ. (ಒಟ್ಟು 20 ಇವೆ)ಗಳಲ್ಲಿ ಎಲ್ಲ ಕಡೆಯೂ ಶಿಕ್ಷಣ ಮಾಧ್ಯಮ ಇಂಗ್ಲಿಷ್.

ದೇಶದಲ್ಲಿರುವ ವಾಣಿಜ್ಯ ನಾಮಫಲಕಗಳಲ್ಲಿ 85 ಶೇಕಡಾದಷ್ಟು ಇಂಗ್ಲಿಷ್‌ನಲ್ಲಿವೆ. ವೃತ್ತಪತ್ರಿಕೆಗಳ ರಿಜಿಸ್ಟ್ರಾರ್‌ನಲ್ಲಿ ನೋಂದಾವಣೆ ಆಗಿರುವ 32 ಸಾವಿರಕ್ಕೂ ಹೆಚ್ಚು ವಿವಿಧ ಪತ್ರಿಕೆಗಳಲ್ಲಿ ಏಳು ಸಾವಿರ ಇಂಗ್ಲಿಷ್ ಭಾಷಾ ಪತ್ರಿಕೆಗಳು.

ಲೋಹಿಯಾ ಪ್ರಕಾರ ಈ ದೇಶವನ್ನು ಬಾಧಿಸುತ್ತಿರುವ ಸಮಸ್ಯೆ ಮೂರು. ಮೇಲ್ಜಾತಿ, ಇಂಗ್ಲಿಷ್ ಭಾಷೆ ಮತ್ತು ಶ್ರೀಮಂತಿಕೆ. ಈ ಮೂರರಲ್ಲಿ ಯಾವುದಾದರೂ ಎರಡು ಅಂಶ ಇದ್ದ ವ್ಯಕ್ತಿ ಆಳುವ ವರ್ಗಕ್ಕೆ ಸೇರುತ್ತಾನೆ.

ಇಂಗ್ಲಿಷ್ ಮಾಧ್ಯಮಕ್ಕೆ ಮಕ್ಕಳನ್ನು ಸೇರಿಸಬೇಕೆಂದರೆ ಶ್ರೀಮಂತನೇ ಆಗಿರ

ಬೇಕು. ಬಡವರಿಗೆ ಇದು ಸಾಧ್ಯವಿಲ್ಲ. ಬಡವರು ಪ್ರದೇಶಿಕ ಭಾಷೆ (ಕನ್ನಡ, ಹಿಂದಿ) ಮಾಧ್ಯಮಕ್ಕೆ ಮಕ್ಕಳನ್ನು ಸೇರಿಸುತ್ತಾರೆ. ಈ ಮಕ್ಕಳು ಎಸ್.ಎಸ್.ಎಲ್.ಸಿ.ವರೆಗೆ ಪ್ರತಿಭಾವಂತರಿರುತ್ತಾರೆ. ಆ ಬಳಿಕ ಇಂಗ್ಲಿಷ್ ಮಾಧ್ಯಮದ ಹುಡುಗರ ಜತೆ ಸ್ಪರ್ಧಿಸಲಾರದೆ ಕಡಿಮೆ ಅಂಕ ಗಳಿಸುತ್ತಾರೆ. ಕೊನೆಗೆ ಎರಡನೆ ಅಥವಾ ಮೂರನೆ ದರ್ಜೆ ಪದವಿ ಪಡೆದು ಸರ್ಕಾರದಲ್ಲಿ ನಾಲ್ಕನೇ ದರ್ಜೆ ಗುಮಾಸ್ತರಾಗುತ್ತಾರೆ ಅಥವಾ ಛಪ್ರಾಸಿ ಸೇವೆಗೆ ಸೇರುತ್ತಾರೆ. ಅದೇ ಇಂಗ್ಲಿಷ್ ಮಾಧ್ಯಮದ ಹುಡುಗರು ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಐಐಟಿ ಮತ್ತಿತರ ಉನ್ನತ ಪರೀಕ್ಷೆಗೆ ಕೂತು ಐ.ಎ.ಎಸ್. ಐ.ಪಿ.ಎಸ್. ಆಗಿ ಆಳುವ ವರ್ಗಕ್ಕೆ ಸೇರುತ್ತಾರೆ. ಇಂಗ್ಲಿಷ್ ಬಾರದ ಹಳ್ಳಿಗ ಸರ್ಕಾರಿ ಕಚೇರಿಯಲ್ಲಿ ಕೆಲಸ ಆಗಬೇಕಾದರೆ ಲಂಚ ನೀಡಲೇಬೇಕಾಗುತ್ತದೆ. ಹೀಗೆ ಇಂಗ್ಲಿಷ್ ಉಳಿದ ಪ್ರಾದೇಶಿಕ ಭಾಷೆಗಳನ್ನು ಶೋಷಿಸಿ ಜನರನ್ನು ಅತಂತ್ರರನ್ನಾಗಿಸುತ್ತದೆ. ಬಡವ-ಶ್ರೀಮಂತರ ನಡುವಣ ಅಂತರ ಬೆಳೆಸುತ್ತದೆ.

ಯಾವುದೇ ಭಾಷೆಯನ್ನು ದ್ವೇಷಿಸುವುದು ಸಲ್ಲದ ಕ್ರಮ. ಮುಲಾಯಂ ಅವರ 'ಇಂಗ್ಲಿಷ್ ನಿಷೇಧ'ವನ್ನು ಅತ್ಯಂತ ಸರಳೀಕರಿಸಿ ಅರ್ಥಮಾಡಿಕೊಳ್ಳಲಾಗಿದೆ. ಇಂಗ್ಲಿಷ್ ನಿಷೇಧದ ಬಗ್ಗೆ ಸಂದರ್ಶನವೊಂದರಲ್ಲಿ ಮುಲಾಯಂ ಹೇಳಿದ ಮಾತುಗಳು ಈ ಕೆಳಗಿನವು–

"ಶಿಕ್ಷಣ ವ್ಯವಸ್ಥೆಯಲ್ಲಿ ದ್ವಂದ್ವ ಮಾನದಂಡವನ್ನು ನಾನು ವಿರೋಧಿಸುತ್ತೇನೆ. ಈ ದ್ವಂದ್ವ ಮಾನದಂಡ ಮುಂದುವರಿಯುವವರೆಗೆ ನಮ್ಮಲ್ಲಿ ಉಳ್ಳವರ ವರ್ಗವೊಂದು ಬೇರೆಯೇ ಇರುತ್ತದೆ ಸ್ವಾತಂತ್ರ್ಯ ಲಭಿಸಿ 43 ವರ್ಷಗಳಾದ ಬಳಿಕವೂ ಹಳ್ಳಿಗರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ಐ.ಎ.ಎಸ್.ನಲ್ಲಿ ಹಳ್ಳಿಗರ ಸಂಖ್ಯೆ ಕೈ ಬೆರಳೆಣಿಕೆಯಷ್ಟು. ಒಂದೆಡೆ ರಾಷ್ಟ್ರಪತಿ, ಪ್ರಧಾನಿ, ಮಂತ್ರಿಗಳು, ಉದ್ಯಮಪತಿಗಳ ಮಕ್ಕಳಿದ್ದಾರೆ. ಅವರಿಗೆ ಪ್ರತ್ಯೇಕ ಶಿಕ್ಷಣ ವ್ಯವಸ್ಥೆ. ಇನ್ನೊಂದೆಡೆ ಕೃಷಿ ಕಾರ್ಮಿಕರ ಕೂಲಿಯವರ ರೈತರ ಮಕ್ಕಳು. ಅವರಿಗೆ ಇನ್ನೊಂದು ತರಹದ ಶಿಕ್ಷಣ ವ್ಯವಸ್ಥೆ. ಉಳ್ಳವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಪ್ರತಿ ತಿಂಗಳು ಒಂದು ಸಾವಿರದಿಂದ ಒಂದೂವರೆ ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ಸರ್ಕಾರಿ ಶಾಲೆಯಲ್ಲಿ ಕಲಿಯುವ ಮಕ್ಕಳ ಮೇಲೆ ಪ್ರತಿ ತಿಂಗಳು ತಲಾ ಖರ್ಚು ಹೆಚ್ಚೆಂದರೆ ಹತ್ತು ರೂಪಾಯಿ."

"ಇವರಿಬ್ಬರ ಮಧ್ಯೆ ಹೋಲಿಕೆ ಸಾಧ್ಯವೆ? ಈ ತಾರತಮ್ಯ ಸರಿಯೆ ? ನನ್ನ ಪ್ರಕಾರ 14ನೇ ವರ್ಷದವರೆಗೆ ಎಲ್ಲರ ಮಕ್ಕಳಿಗೆ, ರಾಷ್ಟ್ರಪತಿ ಮಕ್ಕಳಾಗಿರಲಿ, ರೈತರ ಮಕ್ಕಳಾಗಿರಲಿ ಒಂದೇ ತೆರನಾದ ಶಿಕ್ಷಣ ಸಿಗಬೇಕು. ಇದು ಜಾರಿಯಾಗಲು ಕಷ್ಟಗಳಿವೆ, ಸರಿ, ಇದಕ್ಕೆ ಜನರ ಸಹಕಾರ ಬೇಕು."

"ಸರ್ಕಾರದ ಹಾಗೂ ಆಡಳಿತದ ಕೆಲಸಗಳಲ್ಲಿ ಇಂಗ್ಲಿಷ್ ಇರಕೂಡದು. ಸಾರ್ವಜನಿಕ ಜೀವನದಲ್ಲಿ ಯಾರೂ ಇಂಗ್ಲಿಷ್ ಬಳಸಬಾರದು. ನ್ಯಾಯಾಲಯಗಳಲ್ಲಿ ಸಚಿವಾಲಯದಲ್ಲಿ ಇಂಗ್ಲಿಷನ್ನು ನಿಷೇಧಿಸಬೇಕು. ನಾವು ಭಾರತೀಯ ಭಾಷೆಗಳನ್ನು ಉಪಯೋಗಿಸಬೇಕು. ಉತ್ತರ ಪ್ರದೇಶದಲ್ಲಿ ಹಿಂದಿ, ತಮಿಳುನಾಡಿನಲ್ಲಿ ತಮಿಳು ಬಳಸಲಿ. ಇಂಗ್ಲಿಷ್ ಇರುವವರೆಗೆ ಪ್ರಗತಿ ಸಾಧ್ಯವಿಲ್ಲ. ಇಂಗ್ಲಿಷ್ ಜನಸಾಮಾನ್ಯರಲ್ಲಿ ಕೀಳರಿಮೆ ಹುಟ್ಟಿಸುತ್ತದೆ. ಇಂಗ್ಲಿಷ್ ಬಲ್ಲವ ಬುದ್ಧಿವಂತನೆಂದೂ, ತಿಳಿಯದವನು ನಿಷ್ಪ್ರಯೋಜಕನೆಂದೂ ಗಣಿಸಲಾಗುತ್ತಿದೆ."

"ನಮ್ಮ ಶಾಸಕರೂ ದ್ವಂದ್ವ ಮಾನದಂಡ ಬಳಸುತ್ತಾರೆ. ತಮ್ಮ ಕ್ಷೇತ್ರದಲ್ಲಿ ಜನರ ಭಾಷೆ ಮಾತನಾಡುವ ಅವರು ಲೋಕಸಭೆಯಲ್ಲಿ ಶಾಸನಸಭೆಗಳಲ್ಲಿ ಇಂಗ್ಲಿಷ್ ಬಳಸುತ್ತಾರೆ. ಸರಕಾರದ ಕೆಲಸದಲ್ಲಿ ಇಂಗ್ಲಿಷಿನ ಬಳಕೆ. ಇದು ಕೇವಲ ಉತ್ತರ ಪ್ರದೇಶ ಅಲ್ಲ; ಇಡೀ ಭಾರತದ ಸಮಸ್ಯೆ.

"ಇಂಗ್ಲಿಷ್ ಕಲಿಯುವ ಜನರ ಬಗ್ಗೆ ನಾನು ಆಕ್ಷೇಪ ಎತ್ತುತ್ತಿಲ್ಲ. ಆದರೆ ಇಂಗ್ಲಿಷ್‌ನ್ನು ಕಡ್ಡಾಯಗೊಳಿಸುವ ಹಾಗೂ ಭಾಷಾ ಮಾಧ್ಯಮವಾಗಿಸುವುದಕ್ಕೆ ನನ್ನ ವಿರೋಧ ಇದೆ. ಸರಕಾರ ಇಂಗ್ಲೀಷ್‌ನಲ್ಲಿ ಯಾವುದೇ ಅರ್ಜಿಯನ್ನು ಸ್ವೀಕರಿಸಬಾರದು ಎಂದು ನಾನು ಆಜ್ಞೆ ಮಾಡಿದ್ದೇನೆ. ಹಿಂದಿಯಲ್ಲಿ ಅರ್ಜಿ ಕೊಟ್ಟರೆ ಅಗತ್ಯವಿದ್ದರೆ ಇಂಗ್ಲಿಷಿಗೆ ಅನುವಾದಿಸುತ್ತೇವೆ. ಆದರೆ ಇಂಗ್ಲಿಷ್‌ನಲ್ಲಿರುವ ಅರ್ಜಿಗಳನ್ನು ಅನುವಾದಿಸಲಾಗುವುದಿಲ್ಲ"

"ಇಂಗ್ಲಿಷ್ ಕಲಿಯಬಯಸುವವರು ಕಲಿಯಲಿ. ಯಾವ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಪಾಠ ಕಲಿಸ ಬಯಸಿದರೂ ಅವರು ಹಾಗೆಯೇ ಮಾಡಲು ಸರಕಾರ ಅವಕಾಶ ನೀಡುತ್ತದೆ. ಆದರೆ ಇಂಗ್ಲಿಷ್ ಕಡ್ಡಾಯ ಆಗಬಾರದು. ತಮಿಳುನಾಡು ಸರಕಾರ ಬಯಸಿದರೆ ನಾವು ಹಿಂದಿ ಫೈಲನ್ನು ತಮಿಳಿನಲ್ಲಿ ಭಾಷಾಂತರಿಸಿ ಕಳುಹಿಸುತ್ತೇವೆ. ಹಾಗೆಯೇ ಇತರ ರಾಜ್ಯಗಳಿಗೂ ಕೂಡಾ. ಆದರೆ ಇಂಗ್ಲಿಷ್‌ನಲ್ಲಿ ಯಾಕೆ ಕಳುಹಿಸಬೇಕು. ?"

"ಇಂಗ್ಲಿಷ್ ಪತ್ರಿಕೆಗಳನ್ನು, ಪುಸ್ತಕಗಳನ್ನು ಓದಿರಿ. ಬೇಡ ಎನ್ನುವುದಿಲ್ಲ. ಆದರೆ ಇಂಡಿಯಾದಲ್ಲಿ ಶುದ್ಧ ಇಂಗ್ಲಿಷ್ ಬಲ್ಲ ಒಬ್ಬನೇ ಒಬ್ಬ ವ್ಯಕ್ತಿಯನ್ನು ನನಗೆ ತೋರಿಸಿ. ರವೀಂದ್ರನಾಥ ಠಾಗೋರ್ ಒಬ್ಬರನ್ನು ಬಿಟ್ಟು. ಒಬ್ಬ ತನ್ನ ಸ್ವಂತ ತಾಯಿಯನ್ನ ಅಗೌರವಿಸಿ, ಇನ್ನೊಬ್ಬರ ತಾಯಿಯನ್ನ ಗೌರವಿಸುವುದು ಸರಿಯೆ ?"

—ಇದಿಷ್ಟು ಮುಲಾಯಂಸಿಂಗ್ ಹೇಳಿರುವ ಮಾತುಗಳು. ಲೋಹಿಯಾರ

ಭಾಷೆಯ ಬಗೆಗಿನ ವಾದವನ್ನು ಮುಲಾಯಂ ಈಗ ಅನುಷ್ಠಾನಕ್ಕೆ ತರುತ್ತಿದ್ದಾರೆ ಅನ್ನಲು ಅವರ ಈ ಮಾತುಗಳೇ ಪುರಾವೆಗಳಾಗಬಹುದಲ್ಲವೆ ?

ಇಲ್ಲಿ ಇನ್ನೂ ಒಂದು ವಿಷಯವಿದೆ. ಇತ್ತೀಚೆಗಿನ ಸರ್ವೇ ಪ್ರಕಾರ ಭಾರತದ 3200 ಶಾಸಕರು ಹಾಗೂ 800 ಸಂಸತ್ ಸದಸ್ಯರಲ್ಲಿ 76 ಶೇಕಡಾದಷ್ಟು ಜನರ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಸ್ವತಃ ಮುಲಾಯಂಸಿಂಗ್ ಅವರ ಮಗ ಕೂಡಾ ಧೋತಾಪುರದ ಮಿಲಿಟರಿ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿಯೇ ಕಲಿಯುತ್ತಿದ್ದಾನೆ !

ಇದರ ಬಗ್ಗೆ ನೀವು ಲೇವಡಿ ಮಾಡಿದರೂ ನನಗೆ ಲೇವಡಿ ಸರಿ ಅನ್ನಿಸುವುದಿಲ್ಲ. ಯಾಕೆಂದರೆ 'ಆಸ್ತಿ ಹಕ್ಕು ಇಲ್ಲವಾಗಿಸಿ' ಎಂದು ಒತ್ತಾಯಿಸುವವನು ಸ್ವತಃ ಆಸ್ತಿ ಹೊಂದಿರಬಾರದು ಎಂದು ವಾದಿಸಿದಂತೆ ನಿಮ್ಮ ಲೇವಡಿ ಅರ್ಥಹೀನವಾಗಿರುತ್ತದೆ. (ಉತ್ತರಪ್ರದೇಶದಲ್ಲಿ ಕನ್ನಡ ಸಹಿತ ದಕ್ಷಿಣದ ಆರು ಭಾಷೆಗಳನ್ನು ಐಚ್ಛಿಕ ಭಾಷೆಯಾಗಿ ಶಾಲೆಗಳಲ್ಲಿ ಈಗ ಕಲಿಯುವ ಅವಕಾಶ ನೀಡಲಾಗಿದೆ).

ಇಷ್ಟಾಗಿಯೂ, ಇಂಗ್ಲಿಷ್ ತೊಲಗಬಹುದೆ ? ಈ ವ್ಯವಸ್ಥೆ ಇರುವವರೆಗೆ ಖಂಡಿತಾ ತೊಲಗದೆಂಬ ಭಾವನೆ ನನ್ನದು. ಯಾಕೆಂದರೆ ಅಧಿಕಾರಶಾಹಿಗಳು ಮತ್ತು ಪುರೋಹಿತಶಾಹಿಗಳೇ ಇವತ್ತಿಗೂ ಈ ದೇಶದ ನಿಜವಾದ ಆಡಳಿತಗಾರರು. ಮುಲಾಯಂನಂತಹ ಹಲವರನ್ನು ಈ ವ್ಯವಸ್ಥೆ ನುಂಗಿ ನೀರು ಕುಡಿದಿದೆ. ಶಾಹಿ ಇಮಾಮ್‌ಗಳು, ಮಹಂತರುಗಳು ಕೇಂದ್ರ ಸರ್ಕಾರದ 'ಅಧಿಕೃತ ವಕ್ತಾರ'ರಾಗುತ್ತಿರುವ ಈ ದಿನಗಳಲ್ಲಿ ಇದು ಸಹಜ ಕೂಡಾ.

ಶ್ರೀರಾಮನನ್ನು ಹೃದಯದಲ್ಲಿಟ್ಟು ಪೂಜಿಸಲಾಗದ ಹಿಂದೂಗಳು ಮಾತ್ರ ಆತನಿಗಾಗಿ ಬೇಲಿಹಾಕಿದ ಒಂದು ಎಕರೆ ಜಾಗ ಕೇಳಬಲ್ಲರು. ಹಾಗೆಯೇ ಬಾಬರ್ ಒಬ್ಬ ಆಕ್ರಮಣಕೋರ ಎಂಬ ಸತ್ಯವನ್ನು ಆತ ಮಸೀದಿ ಕಟ್ಟಿಸಿದರೂ ಮುಚ್ಚಿಡಲಾಗುವುದಿಲ್ಲ.

ರಾಮ ಮತ್ತು ಬಾಬರ್ ಇಬ್ಬರ ಅನುಯಾಯಿಗಳಿಗೂ ಈಗ ಶಾಂತಿ ಬೇಕಾಗಿಲ್ಲ; ವಿವಾದ ಬೇಕು. ಯಾಕೆಂದರೆ ವಿವಾದ ಜೀವಂತವಾಗಿದ್ದರೆ ಮಾತ್ರ ಶಹಾಬುದ್ದೀನ್, ಮಹಂತ ಅವೈದ್ಯನಾಥ ಅಡ್ವಾಣಿ ಅವರಿಗೆ ಓಟು ಸಿಗುತ್ತದೆ. ವಿವಾದ ಜೀವಂತವಾಗಿದ್ದರೆ ಮಾತ್ರ ಬುಖಾರಿ, ಶಂಕರಾಚಾರ್ಯರಿಗೆ ಜನ ಬೆಂಬಲ ಸಿಗುತ್ತದೆ.

ಮುಲಾಯಸಿಂಗ್ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳಲ್ಲಿ ಅವರ ದೂರ

ದರ್ಶಿತ್ವ ಕಾಣಸಿಗುತ್ತದೆ. ಕೇವಲ ಅಧಿಕಾರಶಾಹಿಯ ಪೊಲೀಸರ ನೆರವಿನಿಂದ ಹಿಂದೂ ಮತಾಂಧರನ್ನು ಎದುರಿಸಲು ಸಾಧ್ಯವಿಲ್ಲ ಎಂಬುದರ ಸ್ಪಷ್ಟ ಅರಿವಿರುವ ಮುಲಾಯಂ, ಇದಕ್ಕಾಗಿ ಜಾತ್ಯತೀತ ಜನರ ಸಂಘಟನೆಗೆ ಹೊರಟಿದ್ದಾರೆ. ಉತ್ತರ ಪ್ರದೇಶದಾದ್ಯಂತ ಈಗಾಗಲೇ 20 ಕ್ಕೂ ಹೆಚ್ಚು ಕೋಮು ಸೌಹಾರ್ದ ರ್‍ಯಾಲಿಗಳನ್ನು ಅವರು ಏರ್ಪಡಿಸಿದ್ದಾರೆ. ಈ ರ್‍ಯಾಲಿಗಳಿಗೆ ಭಾರೀ ಸಂಖ್ಯೆಯ ಜನರೂ ಸೇರುತ್ತಿದ್ದಾರೆ; ಆಡಳಿತ ಯಂತ್ರವನ್ನು ಬಿಗಿಗೊಳಿಸುವುದು, ಕಾನೂನು ಶಿಸ್ತು ಪರಿಸ್ಥಿತಿ ನಿಯಂತ್ರಿಸಲು ಪೊಲೀಸರಿಗೆ ಮುಕ್ತ ಹಸ್ತ, ಜತೆಜತೆಗೇ ಕೋಮು ಸೌಹಾರ್ದದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವ ಬಹಿರಂಗ ಸಭೆ–ಹೀಗೆ ಎಲ್ಲ ವಿಧದಲ್ಲೂ ದೂರದರ್ಶಿತ್ವದಿಂದ ಪರಿಸ್ಥಿತಿ ನಿಭಾಯಿಸಲು ಮುಲಾಯಂಸಿಂಗ್ ಯತ್ನಿಸುತ್ತಿದ್ದಾರೆ.

ಮುಂಬಯಿಯಲ್ಲಿ ಇತ್ತೀಚೆಗೆ ಪ್ರವಾದಿ ಮುಹಮ್ಮದರ ಜನ್ಮದಿನ ಅಂಗವಾಗಿ ಖಿಲಾಫತ್ ಸಂಘಟನೆ ನಡೆಸಿದ ರ್‍ಯಾಲಿಯಲ್ಲಿ ಮುಲಾಯಂಸಿಂಗ್ ಹೇಳಿದ ಮಾತುಗಳು ಗಮನಾರ್ಹ–"ನನ್ನನ್ನು ಮುಸ್ಲಿಮರ ಪರ ಎಂದು ತಿಳಿದುಕೊಳ್ಳಬೇಡಿ; ನಾನು ಮುಸ್ಲಿಮರ ಪರವೂ ಅಲ್ಲ; ಹಿಂದೂಗಳ ವಿರೋಧಿಯೂ ಅಲ್ಲ. ನಾನೊಬ್ಬ ನಿಜವಾದ ರಾಮಭಕ್ತ. ಶ್ರೀರಾಮ ಕಲಿಸಿಕೊಟ್ಟ ಪರ ಮತ ಸೈರಣೆಯೇ ನನ್ನ ಧರ್ಮ. ಜಾತ್ಯತೀತ ಸ್ವರೂಪವನ್ನು ರಕ್ಷಿಸುವುದು ನನ್ನ ಕರ್ತವ್ಯ. ಅದನ್ನು ನಾನು ಮಾಡಿಯೇ ಸಿದ್ಧ."

ಒಂದೆಡೆ ಮಂಡಲ್ ವರದಿ ವಿರೋಧಿಗಳಾದ ಮೇಲ್ಜಾತಿಯ ಜನ ಮುಗ್ಧ ವಿದ್ಯಾರ್ಥಿಗಳನ್ನು ಮುಂದಿಟ್ಟುಕೊಂಡು ನಡೆಸುತ್ತಿರುವ ಹಿಂಸಾತ್ಮಕ ಹೋರಾಟ, ಇನ್ನೊಂದೆಡೆ ಅಡ್ವಾನಿಯವರ ರಾಜಕೀಯ ರಥಯಾತ್ರೆ–ಈ ದೇಶವನ್ನು ಅರಾಜಕತೆಯ ಅಗ್ನಿಕುಂಡದತ್ತ ತಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಒಬ್ಬ ಮುಲಾಯಂ ಏನು ಮಾಡಲಾದೀತು ?

'ಯಯಾತಿ' ನಾಟಕದಲ್ಲಿ ಒಂದೆಡೆ ಈ ಮಾತು ಬರುತ್ತದೆ–"ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು. ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಡೆಯುವುದಾದರೂ ಹೇಗೆ ?"

ಬಂಡಾಯ ಸಾಹಿತ್ಯ ವಿನ್ಯಾಸ

—ಡಾ|| ಕೆ. ಕೇಶವಶರ್ಮ

ಜಗತ್ತಿನ ಜ್ಞಾನ ವಲಯದಲ್ಲಿ ವಿನ್ಯಾಸದ ಕುರಿತ ಚರ್ಚೆ ಮಹತ್ತ್ವದ ಪಾತ್ರ ವಹಿಸಿದೆ. ಈಚಿನ ಸಾಹಿತ್ಯ ವಿಮರ್ಶೆಯಲ್ಲಿ ವಿನ್ಯಾಸದ ಕುರಿತ ಆಲೋಚನಾ ಕ್ರಮವನ್ನು ವಿಜ್ಞಾನವೆಂದು ಗ್ರಹಿಸಲಾಗಿದ್ದು ಇದು ತನ್ನದೇ ಆದ ಶಾಸ್ತ್ರ ಭಾಗವನ್ನು ಹೊಂದಿದೆ. ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯಲ್ಲಿ ವಿನ್ಯಾಸದ ಕುರಿತ ಚರ್ಚೆಯನ್ನು ಅರಿಸ್ಟಾಟಲ್ ಮೊದಲಿಗೆ ಎತ್ತಿದ ಎಂದು ಭಾವಿಸಲಾಗಿದ್ದರೂ ಅದಕ್ಕೊಂದು ಸೈದ್ಧಾಂತಿಕ ವಾದ, ವೈಜ್ಞಾನಿಕ ಎನ್ನಬಹುದಾದ ಆಯಾಮವು ಕಲ್ಪಿತವಾದುದು ಈಚಿನ ಶತಮಾನಗಳಲ್ಲಿ ಮಾತ್ರ. ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ ವಿಮರ್ಶೆಗಳಲ್ಲಿ ವಿನ್ಯಾಸದ ಕುರಿತಂತೆ ವಿಶೇಷ ಚರ್ಚೆ ನಡೆದಿದ್ದು ಈಗ ವಿನ್ಯಾಸದ ಚರ್ಚೆಯು ಕೇವಲ ಭಾವುಕವಾದ ಪ್ರತಿಕ್ರಿಯೆಯಾಗಿಲ್ಲ. ಇದನ್ನು ಹೊಸ ವಿಜ್ಞಾನವೆಂದು ಕರೆದ ಅಲ್ತೂಸರ್ 'ಸಾಮಾಜಿಕ ಐಕ್ಯತೆಯು ಪ್ರತೀಕವಾದ ವಿನ್ಯಾಸದಲ್ಲಿ ಆರ್ಥಿಕ, ರಾಜಕೀಯ, ತಾತ್ವಿಕ, ವೈಜ್ಞಾನಿಕ ಅಂಶಗಳು ಅಂತಸ್ಥವಾಗಿರುತ್ತವೆ' ಎಂದು ಪ್ರತಿಪಾದಿಸಿದ. (Aethusser 1969, 1970) ಸಾಮಾಜಿಕ ಸ್ವರೂಪದಲ್ಲಿ ಉಂಟಾಗುವ ಒಟ್ಟು ಬದಲಾವಣೆಯ ಹಿನ್ನೆಲೆಯಲ್ಲಿ ಸಮಾಜದ ಅನೇಕ ಅಭ್ಯಾಸಗಳು ಅಂತಸ್ಥವಾಗಿರುತ್ತವೆ. ಕೆಲವನ್ನು ನಾವು ಕಣ್ಣಿನಲ್ಲಿ ಕಾಣಲು ಸಾಧ್ಯ; ಇನ್ನು ಕೆಲವನ್ನು ಅಸಾಧ್ಯ. ಉತ್ಪಾದನಾ ಸಂಬಂಧಗಳಿಗೆ ಅನುಸಾರವಾಗಿ ಸಾಮಾಜಿಕ ಜೀವನ ಪದ್ಧತಿಯು ಬದಲಾಗುತ್ತದೆ. ಇವನ್ನೆಲ್ಲಾ ಕಣ್ಣಿನಲ್ಲಿ ನಾವು ಕಾಣಲು ಸಾಧ್ಯ.

ಉದಾಹರಣೆಗೆ, ಹೊಲದಲ್ಲಿ ಉಳಲು ಎತ್ತುಗಳ ಬದಲಾಗಿ ಟ್ರಾಕ್ಟರ್ ಬಂದಾಗ ಉಂಟಾಗುವ ಬದಲಾವಣೆಯು ಕೇವಲ ಆರ್ಥಿಕ ವ್ಯವಹಾರಕ್ಕೆ ಮಾತ್ರವೇ ಸಂಬಂಧಿಸಿದುದಲ್ಲ. ಅದರೊಂದಿಗೆ ರಾಜಕೀಯ, ತಾತ್ವಿಕ, ವೈಜ್ಞಾನಿಕ ಸಂಗತಿಗಳೂ ಸಂಬಂಧವನ್ನು ಪಡೆದುಕೊಂಡಿರುತ್ತವೆ. ಎತ್ತಿನ ಬದಲಿಗೆ ಟ್ರಾಕ್ಟರ್ ಬಂದಿರುವುದನ್ನು ನಾವು ದೃಶ್ಯದ ಮೂಲಕ ಕಾಣಲು ಸಾಧ್ಯವಾದರೂ, ಅದರ ಅಂತರಾಳದಲ್ಲಿ ಸಾಮಾಜಿಕ ತರ್ಕವೊಂದಿರುತ್ತದೆ. ಹೀಗಾಗಿ ವಿನ್ಯಾಸದ ಚರ್ಚೆಯು ಸಾಮಾಜಿಕ ಸಂದರ್ಭದಲ್ಲಿ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ. ದೃಶ್ಯದ ಚೌಕಟ್ಟಿಗೆ

ದಕ್ಕದ ಅನೇಕ ಸಂಗತಿಗಳು ಅಂತಸ್ಥವಾಗಿದ್ದುಕೊಂಡು ಸಾಮಾಜಿಕ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆ. ಜನ ಸಾಮಾನ್ಯರ ಜೀವನ ವಿಧಾನದಲ್ಲಿ ಈ ತರಹದ ಅನೇಕ ಸಂಗತಿಗಳನ್ನು ನಾವು ಕಾಣಬಹುದು. ಡೀಸೆಲ್ ದರ ಏರಿದಾಗ ಜನಸಾಮಾನ್ಯರು ಕೊಂಡುಕೊಳ್ಳುವ ತರಕಾರಿಯ ಬೆಲೆಯೂ ಏರುತ್ತದೆ. ದೃಶ್ಯದ ಚೌಕಟ್ಟಿನಲ್ಲಿ ತರಕಾರಿ ಅಂಗಡಿಯವನಿಗೂ ಜನಸಾಮಾನ್ಯರಿಗೂ ಮಾಮೂಲಿ ವ್ಯಾಪಾರ ನಡೆಯುತ್ತದೆ. ತರಕಾರಿಯ ಬೆಲೆಯಲ್ಲಿ ಹತ್ತು ಪೈಸೆ ಏರಿದಾಗ ಜನ ಸಾಮಾನ್ಯರು ತರಕಾರಿ ಅಂಗಡಿಯವನ ಜೊತೆ ಜಗಳವಾಡುವುದು ದೃಶ್ಯದ ಚೌಕಟ್ಟಿಗೆ ಲಭ್ಯವಾಗುತ್ತದೆ. ತೆರಿಗೆಯನ್ನು ಏರಿಸಿದ ಸರಕಾರವು ಅಲ್ಲಿ ಅದೃಶ್ಯದ ತುಂಬಾ ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕೆಂದಿದ್ದರೆ, ಇಲ್ಲಿ ಭೌತಿಕ ವಲಯ ಮತ್ತು ಬೌದ್ಧಿಕ ವಲಯದ ಸ್ವರೂಪಗಳಿರುತ್ತವೆ. ಭೌತಿಕ ಮತ್ತು ಬೌದ್ಧಿಕ ವಲಯದ ಒಳರೂಪವು ಕೈಗಳಿಗೆ ಅಷ್ಟು ಬೇಗನೆ ಲಭ್ಯವಾಗುವುದಿಲ್ಲ. ವಿನ್ಯಾಸದ ಬಗೆಗೆ ಮೊದಲ ಮಹತ್ತ್ವದ ಚರ್ಚೆಯೆತ್ತಿದ ಲಿವಿಸ್ಟ್ರಾಸ್ ಮಾರ್ಕ್ಸ್‌ನ ವಾದವನ್ನು ಈ ರೀತಿಯ ಲ್ಲಿಯೇ ಮಂಡಿಸುತ್ತಾನೆ. ಅವನಪ್ರಕಾರ, "ವಿನ್ಯಾಸವು ಕಣ್ಣಿಗೆ ಲಭ್ಯವಾಗುತ್ತದೆಯೆಂದು ಹೇಳುವಂತಿಲ್ಲ. ಅಥವಾ ವಾಸ್ತವದ ಜೊತೆಗೆ ಇದರ ನೇರ ಸಂಬಂಧವಿದೆಯೆಂದು ಹೇಳವಂತಿಲ್ಲ. ವಾಸ್ತವದ ನೇರ ಮಾನವೀಯ ಸಂಬಂಧಗಳ ಆಚೆಗೂ ಕೂಡಾ ಇದರ ಸ್ವರೂಪವಿರುತ್ತದೆ. ತೀರಾ ಆಳದಲ್ಲಿ ಅಂತಸ್ಥವಾಗಿರುವ ಸಾಮಾಜಿಕ ಕ್ರಮ ತಾರ್ಕಿಕ ನ್ಯಾಯವಾಗಿ ಸ್ವರೂಪವು ಪ್ರವರ್ತಿಸುತ್ತದೆ. ಮನುಷ್ಯನ ಸಂಬಂಧದ ಮೇಲೆ ಕ್ರಿಯಾತ್ಮಕವಾದ ಪ್ರಭಾವ ಬೀರುವ ಶಕ್ತಿಯು ಇದಕ್ಕಿರುತ್ತದೆ"

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಿನ್ಯಾಸದ ಕುರಿತ ಯೋಚನಾ ಕ್ರಮವು ಈ ಹೊತ್ತಿಗೆ ಒಂದು ಸೈದ್ಧಾಂತಿಕ ಮತ್ತು ವೈಜ್ಞಾನಿಕ ಆವಿಷ್ಕಾರವನ್ನು ಪಡೆದು ಕೊಂಡಿದೆ ಎಂದು ಹೇಳಬಹುದು.

ಮಾಮೂಲಿಯಾದ ಪರಿಭಾಷೆಯಲ್ಲಿ ವಿನ್ಯಾಸವನ್ನು ನಾವು ಬೇರೆ ಬೇರೆ ಸಂದರ್ಭಗಳಿಗೆ ಅನುಸಾರವಾಗಿ ಬಳಸುತ್ತಿರುತ್ತೇವೆ. ಸೀರೆಯ ವಿನ್ಯಾಸ, ಬಾಗಿಲಿನ ವಿನ್ಯಾಸ, ಮನೆಯ ವಿನ್ಯಾಸ ಇತ್ಯಾದಿ ಇಲ್ಲೆಲ್ಲಾ ವಿನ್ಯಾಸವು ಒಂದು ಸಮಗ್ರತೆಯ ಅನುಭವವನ್ನು ಸೂಚಿಸುತ್ತದೆ. ಮನೆಯ ವಿನ್ಯಾಸದಲ್ಲಿ ಬಾಗಿಲಿನ ವಿನ್ಯಾಸವೂ ಸೇರಿಕೊಳ್ಳುತ್ತದೆ. ಬರಿಯ ಬಾಗಿಲಿನ ವಿನ್ಯಾಸವನ್ನು ಮಾತ್ರ ಎತ್ತಿಕೊಂಡಾಗ ಹಲಗೆಯನ್ನು ಜೋಡಿಸಿದ ಕ್ರಮ ಮತ್ತು ಅದರ ಕುಸುರಿ ಕೆಲಸ ಮುಖ್ಯವಾಗುತ್ತದೆ. ಜನಸಾಮಾನ್ಯರು ಇದನ್ನು ನಕ್ಷೆ ಎನ್ನುವ ಅರ್ಥದಲ್ಲಿಯೂ ಕರೆದಿರುವುದು ಗಮನಾರ್ಹ. ಒಟ್ಟಾರೆಯಾಗಿ ಯಾವುದೇ ವಸ್ತು ನಮಗೆ ಕೊಡುವ ಅನುಭವವನ್ನು

ವಿನ್ಯಾಸ ಎನ್ನುವ ರೀತಿಯಲ್ಲಿ ಕರೆಯುವುದು ನಿಜವಾದರೂ, ಸಾಹಿತ್ಯದ ಪರಿಭಾಷೆಯಲ್ಲಿ ವಿನ್ಯಾಸವನ್ನು ಅದರ ವಿಶಿಷ್ಟತೆಯ ಹಿನ್ನೆಲೆಯಲ್ಲಿ ಗ್ರಹಿಸಲಾಗುತ್ತದೆ. ಶಬ್ದದ ವಿನ್ಯಾಸ, ವಾಕ್ಯದ ವಿನ್ಯಾಸ, ಕತೆಯ ವಿನ್ಯಾಸ. ಪುಸ್ತಕದ ವಿನ್ಯಾಸ ಇತ್ಯಾದಿಗಳನ್ನು ಉಲ್ಲೇಖಿಸುವ ಹೊತ್ತಿನಲ್ಲಿ ಅದು ಕೊಡುವ ಸಮಗ್ರ ಅನುಭವ ಮತ್ತು ಬಿಗಿಯಾದ ಅದರ ಭಾಗಗಳನ್ನು ಲಕ್ಷಿಸಲಾಗುತ್ತದೆ. ಪುಸ್ತಕದ ವಿನ್ಯಾಸವೆಂದಾಗ ನಾವು ಕೇವಲ ಅದರ ಮುದ್ರಿತ ರೂಪವನ್ನು ಮಾತ್ರವೇ ಲಕ್ಷಿಸುವುದಿಲ್ಲ. ಅದರೊಂದಿಗೆ ಅದು ಮುದ್ರಣಗೊಂಡ ರೀತಿ, ಅದರ ಮುಖಪುಟದಲ್ಲಿರುವ ಬಣ್ಣದ ಸಾದೃಶ್ಯ, ಅದರಲ್ಲಿ ಬಳಕೆಯಾಗಿರುವ ಹಾಳೆ ಇತ್ಯಾದಿ ಅಂಶಗಳು ಕೂಡಾ ಮುಖ್ಯವಾಗುತ್ತವೆ. ಹೀಗಾಗಿ ಸಾಹಿತ್ಯದಲ್ಲಿ ವಿನ್ಯಾಸದ ಪ್ರಶ್ನೆಯು ಬೇರೆ ಬೇರೆ ಸಂದರ್ಭಗಳ ವಿಶಿಷ್ಟತೆಯನ್ನು ಒಳಗೊಂಡಿರುತ್ತದೆ.

ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯಲ್ಲಿ ವಿನ್ಯಾಸದ ಕುರಿತ ಚರ್ಚೆಗೆ ಒಂದು ನಿರ್ದಿಷ್ಟ ಸನ್ನಿವೇಶವಿರುವಂತೆಯೇ ಭಾರತೀಯ ಸಾಹಿತ್ಯದ ಪರಿಭಾಷೆಯಲ್ಲಿಯೂ ವಿನ್ಯಾಸದ ಕುರಿತ ಚರ್ಚೆಗೂ ಒಂದು ಸನ್ನಿವೇಶವನ್ನು ಕಲ್ಪಿಸುವುದು ಸಾಧ್ಯ.

1:2 ಅರಿಸ್ಟಾಟಲ್ ವಿನ್ಯಾಸವನ್ನು ಗುರುತಿಸುವಾಗ ಅದರಲ್ಲಿ ಬರುವ ಕ್ರಿಯಾತ್ಮಕ ಅಂಶಗಳನ್ನು ಅದರಲ್ಲಿಯ ನಾಯಕನ ಸಂಗತಿಗಳನ್ನು, ಕಾಲವನ್ನು ಗಮನಕ್ಕೆ ತಂದುಕೊಳ್ಳುತ್ತಾನೆ.

ಭಾಷೆಯ ವಿನ್ಯಾಸದ ಕುರಿತು ಚರ್ಚಿಸಿದ ಸಸೂರ ಸಮಗ್ರತೆಯನ್ನು, ಭಾಷೆಯ ಧ್ವನಿಶಕ್ತಿಯನ್ನು, ಅದು ಧ್ವನಿಸುವ ಸೂಚನೆಯನ್ನು ಲಕ್ಷಿಸಿ ಭಾಷೆಯ ವಿನ್ಯಾಸದ ಚರ್ಚೆಯೆಂದರೆ ಸಾಮಾಜಿಕ ಉತ್ಪನ್ನ ಎನ್ನುವ ನಿರ್ಧಾರಕ್ಕೆ ಬರುತ್ತಾನೆ.

ಪ್ರಾಪ್ ವಿನ್ಯಾಸದ ಚರ್ಚೆಯಲ್ಲಿ ಕತೆಯಲ್ಲಿ ಬರುವ ಕ್ರಿಯೆಗಳನ್ನು ಮುಖ್ಯವಾಗಿ ಲಕ್ಷಿಸುತ್ತಾನೆ. ಅಷ್ಟೆ ಅಲ್ಲದೆ ವಿನ್ಯಾಸದ ಚರ್ಚೆಗೆ ಪೂರಕವಾಗಿ ಅದರಲ್ಲಿ ಬರುವ ಪಾತ್ರ ಗುಣ ಸ್ವಭಾವವನ್ನು ಗಮನಕ್ಕೆ ತಂದುಕೊಳ್ಳುತ್ತಾನೆ: 1) ಖಳನಾಯಕ 2) ಸಹಾಯಕ 3) ನಾಯಕ 4) ನಾಯಕಿ–ನಾಯಕರ ತಂದೆ–ತಾಯಿ ಇತ್ಯಾದಿ.

ಗೆರಾರ್ಡ್‌ಗೆನೆಟ್ಟೆಯು ಸಾಹಿತ್ಯದ ಅಭಿವ್ಯಕ್ತಿಯ ಕ್ರಮಕ್ಕೂ ಸ್ವರೂಪಕ್ಕೂ ಇರುವ ಸಂಬಂಧವನ್ನು ನಿರ್ಣಯಿಸಿ.ವಿನ್ಯಾಸದ ಚರ್ಚೆಯು ಸಾಹಿತ್ಯದ ಸಾಂಕೇತಿಕತೆಯ ಚರ್ಚೆಯನ್ನು ಲಕ್ಷಿಸಬೇಕೆಂದು ವಾದಿಸುತ್ತಾನೆ. ಹೊಸ ವಿನ್ಯಾಸವು ಯಾವಾಗಲೂ

ಪಳೆಯ ವಿನ್ಯಾಸವನ್ನು ಛೇದಿಸುತ್ತದೆಯೆಂದು ಈತ ತಿಳಿಯುತ್ತಾನೆ. (ಅವೇ ಪುಟ. 63 ·67)

ಪಾಶ್ಚಿಮಾತ್ಯ ವಿಮರ್ಶೆಯಲ್ಲಿ ವಿನ್ಯಾಸಕ್ಕೆ ಒಂದು ಕೇಂದ್ರವಿದೆಯೆಂದು ಭಾವಿಸಿದ ಲೆವಿಸ್ಟ್ರಾಸ್, ಸಸೂರ್, ಗೋಲ್ಡ್‌ಮನ್, ಟಿಡೋರೋವ್, ವಾದಗಳನ್ನು ತಳ್ಳಿ ಹಾಕಿದ ಜೇಕೂಸ್ ಡೆರಿಡಾ ಆಲೋಚನೆಯೇ ವಿನ್ಯಾಸದ ಕೇಂದ್ರವೆಂದು ಭಾವಿಸುತ್ತಾನೆ. (ಅದೇ ಪು. 108) ವಿನ್ಯಾಸವ ಕುರಿತ ಈ ವಿಷಯುಗಳನ್ನು ಕೇವಲ ಆನುಷಂಗಿಕವಾಗಿ ಮಾತ್ರ ಗಮನಿಸಲಾಗಿದೆ.

1:3. ಬಂಡಾಯ ಸಾಹಿತ್ಯದ ವಿನ್ಯಾಸವನ್ನು ನಾಲ್ಕು ವಿಭಾಗಗಳ ಮೂಲಕ ಲಕ್ಷಿಸಬಹುದು :

1. ದೇಶೀಯ ಮೂಲದ ವಿನ್ಯಾಸ.
2. ಅನುಕರಣೀಯ ವಿನ್ಯಾಸ.
3. ವ್ಯೈತ್ರಿಯ ವಿನ್ಯಾಸ.
4. ಬೌದ್ಧಿಕ ವಿನ್ಯಾಸ.

ಈ ರೀತಿಯ ನಾಲ್ಕು ವಿನ್ಯಾಸಗಳು ಮುಖ್ಯವಾಗಿ ಬಂಡಾಯದ ಕವಿತೆಗಳಲ್ಲಿ, ಕತೆಗಳಲ್ಲಿ, ಕಾದಂಬರಿಗಳಲ್ಲಿ ಕಾಣಿಸಿವೆ. ಆದರೆ, ಈ ರೀತಿಯ ವಿನ್ಯಾಸಗಳ ಹಿಂದೆ ಸ್ಪಷ್ಟವಾಗಿ ಸಾಮಾಜಿಕ ಚರಿತ್ರೆಯ ಅಂತರಂಗಿಕ ಸ್ವರೂಪವೊಂದಿದೆ. ವಿನ್ಯಾಸದ ಬದಲಾವಣೆಗೆ ಅನುಕೂಲ ಕಲ್ಪಿಸುವ ಸಾಮಾಜದ ಬೇರುಗಳು ಉತ್ಪಾದನಾ ಸಂಬಂಧದ ಬದಲಾವಣೆಯನ್ನು ಅವಲಂಬಿಸಿಕೊಂಡಿರುತ್ತವೆ ಎಂಬುದು ಸ್ಪಷ್ಟ.

ವಸಾಹತುಶಾಹಿ ಅನುಭವದ ನೇರ ತೆಕ್ಕೆಗೆ ಒಗ್ಗಿಕೊಂಡಿರುವ ಕರ್ನಾಟಕದ ಸಾಹಿತ್ಯ ವಲಯವು ವಿಕಾಸವನ್ನು ಛೇದಿಸಿಕೊಂಡು ಹುಟ್ಟಿಕೊಂಡಿದ್ದರಿಂದ ಸಹಜವಾಗಿ ಮಾಮೂಲಿ ಉಪಕ್ರಮವು ತಪ್ಪಿಹೋಗಿದೆ. ಮೂರನೆಯ ಜಗತ್ತಿನ ಒಟ್ಟು ಸಾಮಾಜಿಕ ಪರಿವರ್ತನೆಯನ್ನು, ಆರ್ಥಿಕ ಸಿದ್ಧಾಂತ, ನೈತಿಕ ಸಿದ್ಧಾಂತ, ಅನುಕ್ರಮದ ಸಿದ್ಧಾಂತಗಳ ಮೂಲಕ ಪರಿಶೋಧಿಸುವ ವಿನಯ ಕೈಪಾಲ್ ಕೆಲವು ಮುಖ್ಯವಾದ ಕಾರಣಗಳನ್ನು ಕೊಡುತ್ತಾರೆ.

ಅಧಿಕಾರ ಮತ್ತು ಸ್ಥಾನದ ಆಸಕ್ತಿಯಿಂದ ವಸಾಹತು ಅನುಭವಕ್ಕೆ ಬಾಗಿಕೊಂಡ ದೇಶದಲ್ಲಿ ಈಗ ಭಾರೀ ಮಟ್ಟದ ಕೈಗಾರಿಕೆಗಳು ನಿರ್ಮಾಣವಾಗುತ್ತಿವೆ. ಜಗತ್ತಿನಾದ್ಯಂತ ಕೈಗಾರಿಕೀಕರಣ ನಡೆಯುತ್ತಿರುವ ಈ ಹೊತ್ತಿನಲ್ಲಿ ವಸಾಹತುಶಾಹಿ ಅನುಭವಕ್ಕೆ ತೆರೆದುಕೊಂಡ ದೇಶಗಳು ಕೂಡಾ ಕೈಗಾರಿಕೀಕರಣದ ಕಡೆಗೆ ತಮ್ಮ

ಒಲವನ್ನು ಸೂಚಿಸುತ್ತವೆ. ಆರ್ಥಿಕ ಸಾಮರಸ್ಯವೇ ಇದಕ್ಕೆ ಮೂಲ ಕಾರಣವಲ್ಲ. ಅದಕ್ಕಿಂತ ಹೆಚ್ಚಾಗಿ ಸ್ವರಕ್ಷಣೆಯ, ಸ್ಥಾನ ಸೂಚನೆಯ ಪರಿಕಲ್ಪನೆಗಳು ಈ ರೀತಿಯ ದೇಶಗಳಲ್ಲಿ ಕಾಣಿಸಿಕೊಂಡಿವೆ. ಇದರ ಪರಿಣಾಮವಾಗಿ, ಮೂರನೆಯ ಜಗತ್ತು ತನ್ನದೇ ಸ್ವಂತ ಚಹರೆಯನ್ನು ಪಡೆದುಕೊಂಡಿದೆ. ಈ ಚಹರೆ ವಿಶಾಲವಾದ ಅರ್ಥದಲ್ಲಿ ಭಾರತೀಯ ಪರಿಸರದಲ್ಲಿ ಕಾಣಿಸಿಕೊಂಡಿದ್ದರೆ, ವಿಶಿಷ್ಟವಾದ ಅರ್ಥದಲ್ಲಿ ಕರ್ನಾಟಕದ ಸಾಂಸ್ಕೃತಿಕ ಸನ್ನಿವೇಶದ ಮೇಲೆ ಪ್ರಭಾವ ಬೀರಿದೆ.

ಎರಡನೆಯದು ನೈತಿಕ ಸಿದ್ಧಾಂತದ ಹಿನ್ನೆಲೆಯಲ್ಲಿರುವ ಸಾಂಸ್ಕೃತಿಕ ಸ್ವರೂಪ. ಮುಖ್ಯವಾಗಿ ವಸಾಹತುಶಾಹಿ ಸಂಸ್ಕೃತಿ ಬಿತ್ತಿಹೋದ ಅನೇಕ ಅಂಶಗಳನ್ನು ತಾತ್ತ್ವಿಕವಾಗಿಯೇ ವಿರೋಧಿಸಲು ನೈತಿಕ ಪ್ರಯತ್ನ ಬೇಕೆಂದು ತಿಳಿಯುವ ಪ್ರಯತ್ನವಿದು. ಇಂಗ್ಲಿಷಿನ ಸಂಸ್ಕೃತಿಯನ್ನು ಮಹತ್ತ್ವವೆಂದು ಪರಿಭಾವಿಸುವ ಚಿಂತಕರು ಇಂಗ್ಲಿಷಿನ ಮುಖಾಂತರ ಪರ್ಯಾಯವನ್ನು ಯೋಚಿಸಿದರೆ, ಇನ್ನು ಅನೇಕರು ಅದನ್ನು ಬಿಟ್ಟು ಬಿಡಲು ಪ್ರಯತ್ನಿಸುತ್ತಾರೆ. ಕೆಲವರಿಗೆ ಬ್ರಿಟೀಷ್ ರಾಜಸತ್ತೆಯು ಬಿತ್ತಿ ಹೋದ ವಿನ್ಯಾಸವೇ ಒಂದು ನೈತಿಕ ತೀರ್ಮಾನವಾಗಿ ಕಾಣಿಸುತ್ತದೆ.

ಭಾರತೀಯ ಸಂದರ್ಭದಲ್ಲಿ ಅನುಕ್ರಮತೆಯ ಕುರಿತು ಸ್ಪಷ್ಟವಾಗಿ ಪ್ರತಿಪಾದಿಸಿದ ಗಾಂಧಿ "ಹಿಂದೂ ಸ್ವರಾಜ್ಯ"ದ ಕಲ್ಪನೆಯನ್ನು ಮಂಡಿಸಿದ್ದು ಈ ಹಿನ್ನೆಲೆಯಿಂದ ಗಾಂಧಿ ಇದರೊಂದಿಗೆ ವಿಚಾರಧಾರೆಯ ಮುಖ್ಯ ನಿಲುವು ಆದರ್ಶ ಮಾನವನ ಕಡೆಗೆ ಮುಖಮಾಡಿದೆ. ಭಾರತೀಯ ಚರಿತ್ರೆಯ ವಿನ್ಯಾಸವು ಆದರ್ಶ ಮನುಷ್ಯನನ್ನು ನಿರ್ಮಿಸುತ್ತದೆ ಎಂದು ಭಾವಿಸುವ ಗಾಂಧಿ ಪಶ್ಚಿಮದ ಆಧುನಿಕ ನಾಗರಿಕತೆಯನ್ನು ನಿರಾಕರಿಸಿರುವುದು ಗಮನಾರ್ಹ (ಕೆ. ರಾಘವೇಂದ್ರರಾವ್). ಈ ಮೂರು ಅಂಶಗಳು ಕರ್ನಾಟಕದ ಸಾಂಸ್ಕೃತಿಕ ಸನ್ನಿವೇಶವನ್ನು ಸ್ಥೂಲವಾಗಿ ವಿವರಿಸುತ್ತವೆ. ಕರ್ನಾಟಕ ಸಾಂಸ್ಕೃತಿಕ ವಲಯದಲ್ಲಿ ಈಗಲೂ ಈ ಮೂರು ಅಂಶಗಳು ಅಂತಸ್ಥವಾಗಿವೆ. ಈ ಅಂಶಗಳನ್ನು ಈಗಾಗಲೇ ಕನ್ನಡದ ಸಾಹಿತ್ಯ ವಲಯದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಚರ್ಚಿಸಲಾಗಿದೆ ಕೂಡಾ. ಸದ್ಯ ನಮ್ಮೆದುರು ಇರುವ ನೆಲೆಗಟ್ಟು ಮತ್ತು ಸಾಂಸ್ಕೃತಿಕ ವಲಯವು ಇದರಿಂದ ಪ್ರಣೀತವಾಗಿರುವುದರಿಂದ ಬಂಡಾಯ ಸಾಹಿತ್ಯದ ವಿನ್ಯಾಸಕ್ಕೆ ಸಹಜವಾಗಿಯೇ ಕೆಲವು ವಿಶಿಷ್ಟತೆಯು ಸಂಪ್ರಾಪ್ತವಾಗಿದೆ.

ಬೇರೆ ಬೇರೆ ಸನ್ನಿವೇಶಗಳಲ್ಲಿ ಬರೆಯುತ್ತಿರುವ ಬಂಡಾಯ ಬರಹಗಾರರು ಬೇರೆ ಬೇರೆ ತಾತ್ತ್ವಿಕ ವಲಯವನ್ನು ಕೂಡಾ ಒಳಗೊಂಡಿರುವುದರಿಂದ ಸಹಜವಾಗಿಯೇ ಬೇರೆ ಬೇರೆ ಬಗೆಯ ಸಾಹಿತ್ಯ ವಿನ್ಯಾಸಗಳು ನಮಗೆ ದೊರೆಯುತ್ತವೆ. ಸಾಹಿತ್ಯ ವಿನ್ಯಾಸವು ಕೂಡಾ ಅಂತಿಮವಾಗಿ ಬರಹಗಾರನ ಗ್ರಹಿಕೆಯನ್ನು ಅವಲಂಬಿಸಿ

ಕೊಂಡಿರುವುದರಿಂದ ಇದು ಸಹಜ ಕೂಡಾ. ವಿನ್ಯಾಸವನ್ನು ಕುರಿತು ಚರ್ಚಿಸುವಾಗ ಗೋಲ್ಡ್‌ಮನ್ ಪ್ರತಿಪಾದಿಸುವುದು ಕೂಡಾ ಇದುವೆ. ಆತನ ಪ್ರಕಾರ, ಸಾಹಿತ್ಯದ ಸ್ವರೂಪವು ಆಯಾ ಕಾಲದ ಬೌದ್ಧಿಕ, ರಾಜಕೀಯ, ಸಾಮಾಜಿಕ ಸ್ವರೂಪವು ವ್ಯಕ್ತಿಯ ಚರ್ಚೆಯ ಕಡೆಗೆ ಬದಲಾಗುವ ರೀತಿಯದು.

ಹೀಗಾಗಿ ಬಂಡಾಯ ಸಾಹಿತ್ಯದ ವಿನ್ಯಾಸದ ಕುರಿತ ಚರ್ಚೆಯು ಅಂತಿಮವಾಗಿ ಕರ್ನಾಟಕದ ಸನ್ನಿವೇಶದ ಚರ್ಚೆಯು ಆಗುತ್ತದೆ.

ಬಂಡಾಯ ಚಳುವಳಿಯು ಪ್ರಾರಂಭವಾದಾಗಲೇ ದೇಶೀಯ ಮೂಲದ ವಿನ್ಯಾಸದ ಕಡೆಗೆ ಬರಹಗಾರರ ಗಮನವು ಹರಿದಿರುವುದು ಆಕಸ್ಮಿಕವಲ್ಲ. ಅದೊಂದು ಅನಿವಾರ್ಯವಾದ ಪ್ರತಿಕ್ರಿಯೆ. ಕಳೆದ ಕೆಲವು ವರ್ಷಗಳಲ್ಲಿಯಂತೂ ಈ ಕುರಿತಂತೆ ಕನ್ನಡದ ಸೃಜನಶೀಲ ಬರಹಗಾರರು ರೂಪಿಸಲು ಪ್ರಯತ್ನಿಸುತ್ತಿದ್ದಾರೆ ಕೂಡಾ. ಈ ಪ್ರಯತ್ನ ಮಾತ್ರ ಬೇರೇ ಬೇರೆ ರೂಪಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಡೆಯುತ್ತಿದೆ. ಕೆಳವರ್ಗದ ಅನುಭವದಿಂದ ಬಂದ ಅನೇಕ ಬರಹಗಾರರು ನಡೆಸಿರುವ ಪ್ರಯತ್ನವನ್ನು ದೇಶೀಯ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದು. ಇದಕ್ಕೊಂದು ತಾತ್ತ್ವಿಕವಾದ ಆಯಾಮವಿದೆ. ವಿದೇಶಿ ಸಂಸ್ಕೃತಿಯನ್ನು ಮತ್ತು ವಿದೇಶಿ ಆಲೋಚನೆಯನ್ನು ಹೃದಯದ ಆಳದಿಂದಲೇ ನಿರಾಕರಿಸುವ ಬರಹಗಾರರು ತಮ್ಮದೇ ವಿನ್ಯಾಸವನ್ನು ದೇಶೀಯ ನಮೂನೆಯ ಮೂಲಕ ಕಂಡುಕೊಳ್ಳಲು ಯತ್ನಿಸಿದ್ದು ಇಲ್ಲಿ ಉಲ್ಲೇಖನೀಯ. ಇದನ್ನು ಸಾಹಿತ್ಯ ಕೃತಿಯಲ್ಲಿ ಗಮನಿಸುವಾಗ ನೇರವಾಗಿ ಉದ್ದೇಶಿತವಾದುದು ಎಂದರ್ಥವಲ್ಲ. ನಿರ್ದಿಷ್ಟ ಸಾಮಾಜಿಕ ವರ್ಗದ ಮತ್ತು ಆಲೋಚನಾ ಕ್ರಮದ ಜೊತೆಗೆ ಸಂಬಂಧ ಕಲ್ಪಿಸಲು ಸಾಧ್ಯವಾಗದೇ ಹೋದಾಗ ಹೊಸ ರೀತಿಯ ಉತ್ಪಾದನಾ ಕ್ರಮ ಉಂಟಾಗುತ್ತದೆಯೆಂದು ಮಾರ್ಕ್ಸ್ ಹೇಳುತ್ತಾನೆ. ಏಕಾಂತವಾದಿಗಳ ಕನಸು, ವಿಚಿತ್ರ ನರಳಾಟ, ಚೀರು-ಕೇಕೆಗಳ ನಡುವೆ ಸ್ಪಂದಿಸಲಾಗದ ಬರಹಗಾರರು ಬೇರೆ ರೀತಿಯ ವಿನ್ಯಾಸವನ್ನು ಕಂಡುಕೊಳ್ಳುವುದು ಅನಿವಾರ್ಯವಾಯಿತು. ಈ ರೀತಿಯ ವಿನ್ಯಾಸವನ್ನು ಶೋಧಿಸುವಾಗ, ಆಧುನಿಕ ಬರಹಗಾರರು ನೇರವಾಗಿ ಮತ್ತು ಪ್ರಜ್ಞಾಪೂರ್ವಕವಾಗಿಯೇ ಈ ನಕ್ಷೆಯನ್ನು ಸಂಯೋಜಿಸಿದರು ಎಂದು ಹೇಳಲಾಗುವುದಿಲ್ಲ. ಸಾಹಿತ್ಯ ಸಾರ್ವಜನಿಕ ಆಚರಣೆಯ ರೂಪವನ್ನು ತಳೆಯುವಂತೆ ಪಡೆದುಕೊಂಡ ಅರ್ಥವಂತಿಕೆ ಸಾಹಿತ್ಯದ ಒಟ್ಟು ಉಪಯೋಗವನ್ನು ಯೋಚಿಸುವಂತೆ ಮಾಡಿರುವುದು ಇದಕ್ಕೆ ಕಾರಣವಾಗಿರಬೇಕು. ಅಂದರೆ ಇಪ್ಪತ್ತನೆಯ ಶತಮಾನದ ಈ ಕಾಲಘಟ್ಟದಲ್ಲಿ ಧರ್ಮದ ಬದಲಿಗೆ ಸಾಹಿತ್ಯ ಬಂದುದು ಬಹಳ ಮುಖ್ಯ ಪ್ರಯತ್ನವೂ ಹೌದು. (ಈ ರೀತಿಯ ಪರಿಭಾಷೆ

ಯನ್ನು ಜಾನ್ ಮುಕರವ್ಸೋಸ್ಕಿಯು ಬಳಸಿದ್ದಾನೆ) ಧರ್ಮವು ಅರ್ಥಶೂನ್ಯವಾದ ಪರಿಸರದಲ್ಲಿ ಹೊಸ ತಗಾದೆಯನ್ನು ಪ್ರಾರಂಭಿಸಿದ ನವ್ಯ ಬರಹಗಾರರು ಅಂತರಂಗದ ಸಂಕೀರ್ಣನೆಯಲ್ಲಿ ತೊಡಗಿದರೆ ಬಂಡಾಯ ಸಾಹಿತಿಗಳು ಅದನ್ನು ಬಹಿರಂಗಕ್ಕೆ ತಂದರು.

ದೇಶೀಯ ನಮೂನೆಯೆಂದರೆ ಸಮಗ್ರ ಭಾರತೀಯತೆಯ ಹುಡುಕಾಟವೂ ಹೌದು. ಒಂದು ಸಾಮಾಜಿಕ ವರ್ಗದ ಅಂತರಾತ್ಮದಲ್ಲಿಯೇ ಈ ರೀತಿಯ ಪ್ರಯತ್ನ ವಿದೆ. ಬರಹಗಾರನ ಗ್ರಹಿಕೆಗೆ ಅನುಸಾರವಾಗಿ ವಸ್ತುವು ತನಗೆ ಬೇಕಾದ ವೈಚಾರಿಕ ಆಕೃತಿಯನ್ನು ಪಡೆದುಕೊಂಡಿರುವುದರ ಸ್ಪಷ್ಟ ನಿದರ್ಶನವಿದು. ದೇಶೀಯ ನಮೂನೆಯ ವಿನ್ಯಾಸವನ್ನು ಕವಿತೆಯ ದೃಷ್ಟಿಯಿಂದ ಮಾತ್ರ ಕೆಲವು ವಿಭಾಗ ಮಾಡಬಹುದು :

1. ಕಥನ ಕಾವ್ಯದ ವಿನ್ಯಾಸ
2. ಇತರ ಕವಿತೆಗಳು.

ಬಂಡಾಯದ ಚಳುವಳಿಯ ಜೊತೆಯಲ್ಲಿ ನಿಕಟವಾದ ಸಂಬಂಧವನ್ನು ಪಡೆದು ಕೊಂಡು ಕಥನ ಕಾವ್ಯದ ಮಾದರಿಗಳು ಜಮೀನುದಾರಿ ಪದ್ಧತಿಯ ಕ್ರೂರತೆಯನ್ನು ಪ್ರಶ್ನಿಸತೊಡಗಿದವು. ಕವಿತೆಯಲ್ಲಿ ಕತೆಯನ್ನು ಹೇಳುವ ಪರಿಕ್ರಮವನ್ನು ನಿರಾಕರಿ ಸಿದ ನವ್ಯ ಸಾಹಿತ್ಯ ಕೇಂದ್ರ ಕಾಳಜಿಯನ್ನೇ ಕವಿತೆಗಳಲ್ಲಿ ಹೇಳಿದರೆ ಬಂಡಾಯದ ಕಥನ ಕವಿತೆಗಳು ಕ್ರಿಯಾಶಕ್ತಿವುಳ್ಳವುಗಳು. ಈ ರೀತಿಯ ಕಥನ ಕಾವ್ಯಗಳು ನಿರೂಪಣೆಗೆ ದೇಶಿ ಶೈಲಿಯನ್ನು ಬಳಸಿಕೊಂಡವು. ಕ್ರಿಯೆಯ ವೇಗ, ನಿರೂಪಣೆಗೆ ತಕ್ಕ ಪಾತ್ರ, ಸಂಘರ್ಷ, ಮತ್ತು ನಿರ್ದಿಷ್ಟ ಅಂತ್ಯವುಳ್ಳ ಈ ರೀತಿಯ ಕಥನ ಕಾವ್ಯಗಳ ವಿನ್ಯಾಸ ದೇಶಿಯವೇ ಆಗಿದೆ. ಈ ರೀತಿಯ ಕಥನ ಕಾವ್ಯದ ವಿನ್ಯಾಸವನ್ನು ಈ ರೀತಿ ಸಂಯೋಜಿಸಬಹುದು:

1. ಕಥನ ಕಾವ್ಯಗಳಲ್ಲಿ ಆಯ್ಕೆ ಮಾಡಿಕೊಂಡಿರುವ ವಿಷಯ : ಹಳ್ಳಿಯದು.
2. ಕಥನ ಕಾವ್ಯಗಳಲ್ಲಿ ಬಳಕೆಯಾಗಿರುವ ಪಾತ್ರಗಳು-ಸಾಮಾನ್ಯರು. ಉದಾ : ಆಗಸ (ಕತ್ತೆ ಮತ್ತು ಧರ್ಮ ಕವನ)
3. ವಸ್ತು-ವರ್ಗರಾಹಿತ್ಯ ಸಮಾಜದ ಕನಸು.
4. ಈ ಕಥನ ಕಾವ್ಯವನ್ನು ಸ್ವೀಕರಿಸುವವರು-ಓದುಗ ವರ್ಗ ಮತ್ತು ಕೇಳುಗ ವರ್ಗ.

5. ಈ ರೀತಿಯ ಕಥನ ಕಾವ್ಯ ವಿರೋಧಿಸುವುದು– ಮೇಲು ವರ್ಗದ ಸಂಸ್ಕೃತಿಯನ್ನು.

6. ಈ ರೀತಿಯ ಕಥನ ಕಾವ್ಯಕ್ಕೆ ಸಹಾಯ ಒದಗಿಸುವವರು–ದುಡಿಯುವ ವರ್ಗ.

ಈ ರೀತಿಯ ಕಥನ ಕಾವ್ಯಗಳು ಸಾಮಾನ್ಯ ಜನತೆಯ ಜೊತೆಗೆ ಸಂವಾದಕ್ಕೆ ಪ್ರಯತ್ನಿಸಿದ್ದರಿಂದ ಬರವಣಿಗೆಯ ರೂಪವೂ ಕೂಡಾ ಅದಕ್ಕೆ ಪಕ್ಕಾಗಿದೆ. ಸಾಹಿತ್ಯ ಕೃತಿಯ ಸಂವಾದವು ಬರವಣಿಗೆಯ ರೂಪವನ್ನು ಹೊಂದಿರುವುದಷ್ಟೇ ಅಲ್ಲದೆ ಈ ರೀತಿಯ ಕೃತಿಗಳು ಒಳಮುಖಕ್ಕೆ ಮಡಿಸಿಕೊಳ್ಳದೆ ಇರುವುದು ಗಮನಾರ್ಹ. ಒಂದು ನಿರ್ದಿಷ್ಟತೆಯಿಂದ ಪ್ರಾರಂಭವಾಗುವ ಕಥನ ಕವಿತೆಗಳು ಬೇರೆ ಬೇರೆ ರೀತಿಯ ಚಟುವಟಿಕೆಯನ್ನು ಒಳಗೊಂಡು ಪರ್ಯಾವಸಾನ ಹೊಂದುತ್ತದೆ. ಸರಳವಾದ ಚೌಕಟ್ಟಿನ್ನುಳ್ಳ ಬಂಡಾಯದ ಕಥನ ಕಾವ್ಯಗಳು ಸರಳ ರೇಖೆಯ ಮಾದರಿಯವು. ಸಾಮಾಜಿಕ ವಸ್ತುವಿನ ಪ್ರಾತಿನಿಧಿಕ ರೂಪವಾಗಿ ಆಕೃತಿಯನ್ನು ಪಡೆಯುವ ಈ ಮಾದರಿಗಳು ಹಾಡುವುದಕ್ಕೆ ಅನುಕೂಲ ಆಗುವಂತಹುದು ಕೂಡಾ. ಶೇಕಡಾ ಎಪ್ಪತ್ತಕ್ಕಿಂತಲೂ ಅಧಿಕವಾಗಿ ಅನಕ್ಷರಸ್ಥರಿರುವ ಈ ನಾಡಿನಲ್ಲಿ ಓದುವ ಜನತೆಗಿಂತ ಕೇಳುವ ಜನತೆಯೇ ಈ ಕಥನ ಕವಿತೆಗಳಿಗೆ ಮುಖ್ಯವಾದವು. ಈ ರೀತಿಯ ವಿನ್ಯಾಸವು ಸಾಹಿತ್ಯದಲ್ಲಿ ಮರು ಹುಟ್ಟನ್ನು ಪಡೆಯಲು ಇದ್ದ ಕಾರಣವನ್ನು ಮತ್ತೆ ಯೋಚಿಸಬಹುದು:

1. ಹಳ್ಳಿಯಿಂದ ನಗರಕ್ಕೆ ಬಂದ ಬರಹಗಾರರು ತಮ್ಮ ಸಂವೇದನೆಗೆ ಜಾನಪದದ ನಿರೂಪಣಾ ಕ್ರಮವನ್ನು ಬಳಸಿಕೊಂಡಿರುವುದು ಒಂದು ಕಾರಣ. ಇಲ್ಲಿ ನಗರ ಮತ್ತು ಹಳ್ಳಿಯ ಜೀವನದ ದ್ವಂದ್ವವಿದೆ. ಕೈಗಾರೀಕರಣದ ವಿರುದ್ಧ ಸೆಣಸಿದ ರೊಮ್ಯಾಂಟಿಕ್ ಕವಿಗಳು ನಿಸರ್ಗಕ್ಕೆ ತೆರಳಿದ ಡಯಲೆಕ್ಟಿಕ್ಸ್‌ನ್ನು ನೆನಪಿಗೆ ತಂದುಕೊಳ್ಳಬಹುದು.

2. ಆಧುನಿಕತೆಯ ಜೊತೆಗೆ ಬಂದ ವಿಚಿತ್ರಗಳನ್ನು ನಿರಾಕರಿಸಲು ಕನಸಿನಂತಿರುವ, ಆದರ್ಶದಂತಿರುವ ಸಹಾಯಕಾರಿಯಾಯಿತು.

3. ಇಲೈಟಿಸ್ಟ್‌ಗಳ ಜೊತೆಗೆ ಸಾಮರಸ್ಯ ಸಾಧಿಸಲಾಗದ ಕೆಳವರ್ಗದ ಈ ಬರಹಗಾರರಿಗೆ ಸಹಜ ಮಾತಿನ ಕ್ರಮದ ಕವಿತೆಯು ಅಭಿವ್ಯಕ್ತಿಯ ಕ್ರಮವಾಯಿತು. ಪರ್ಯಾಯವಾಗಿ ಇದು ವಸಾಹತುಶಾಹಿ ಅನುಭವದ ಜೊತೆಗೆ ಬಂದ ಆಲೋಚನಾ ಕ್ರಮದ ವಿರುದ್ಧ ಹುಟ್ಟಿಕೊಂಡ ಪ್ರತಿಭಟನೆ ಕೂಡಾ ಹೌದು.

4. ವಿನ್ಯಾಸದ ಕುರಿತು ಮಾತಾಡುವಾಗ ಮುಕರವ್ಹೋಸ್ಕಿಯು ಆಧುನಿಕ ಶಿಲ್ಪಕಲೆಗೂ ಕಲೆಯ ವಿನ್ಯಾಸಕ್ಕೂ ಇರುವ ಸಂಬಂಧ ಕುರಿತು ಹೇಳುತ್ತಾ,

ನಗರಗಳಲ್ಲಿ ಈ ಹೊತ್ತಿಗೆ ಇರುವ ಕಟ್ಟಡದ ವಿನ್ಯಾಸವೆಲ್ಲಾ ಬೇಕಿ ಪೆಟ್ಟಿಗೆ ಯಂತೆ. ಆಸ್ಪತ್ರೆ, ಶಾಲೆ, ತಾಲ್ಲೂಕು ಆಫೀಸಿನ ಕಚೇರಿ ಎಲ್ಲಾ ಒಂದೇ ರೀತಿಯಲ್ಲಿವೆ. ಹಳ್ಳಿಯ ಗುಡಿಸಲು, ಮನೆ ಇತ್ಯಾದಿಗಳ ವಿನ್ಯಾಸ ಇದಕ್ಕಿಂತ ಬೇರೆಯಾದುದು. ಗುಡಿಸಲಲ್ಲಿ ಅಡುಗೆಯ ಕೋಣೆ, ಊಟದ ಕೋಣೆ, ಮಲಗುವ ಕೋಣೆ ಎಲ್ಲಾ ಒಂದೆ. ಒಂದೇ ಕೋಣೆ ಅವರ ಉಪಯೋಗವನ್ನು ಅನುಸರಿಸಿ ಬೇರೆಯಾಗುತ್ತಾ ಹೋಗುತ್ತದೆ. ಗುಡಿಸಲ ಪ್ರವೇಶ ಮಾಡಿದರೆ ಸಾಕು ಎಲ್ಲವೂ ದೃಶ್ಯಕ್ಕೆ ಲಭ್ಯವಾಗುತ್ತದೆ. ಬಂಡಾಯದ ಕಥನ ಕವಿತೆಗಳು ಈ ಮಾದರಿಯವು. ಇವುಗಳಲ್ಲಿ ತಾಂತ್ರಿಕ ಕಸರತ್ತುಗಳಿಲ್ಲ. ಭಾವನೆಗಳನ್ನು ಉದ್ರೇಕಗೊಳಿಸಬೇಕೆಂಬ ಹಟವಿಲ್ಲ. ಮುಚ್ಚುಮರೆಯ ಸೋಗಲಾಡಿತನವಿಲ್ಲ. ಕವಿತೆಯನ್ನು ಹೇಳುವಾಗ ವಿವರಣಾತ್ಮಕವಾದ ಮಾದರಿಯ ಸರಳತೆಯನ್ನೇ ಮುಖ್ಯ ಉದ್ದೇಶವಾಗಿರಿಸಿದೆ. ದೇಶಿ ಕಥನ ಕ್ರಮದ ಮುಖ್ಯ ಗುಣವಿದು.

2. ಮತ್ತೊಂದು ರೀತಿಯ ಕವಿತೆಗಳ ವಿನ್ಯಾಸವನ್ನು ಕೂಡಾ ಈ ಹಿನ್ನೆಲೆಯಲ್ಲಿಯೇ ಗಮನಿಸಬಹುದು. ಕವಿತೆಯೆಂದರೇನೆ ವಿಶೇಷ ರೀತಿಯ ಆಲೋಚನಾ ಕ್ರಮದ ವಿನ್ಯಾಸ ಮತ್ತು ಕವಿತೆಯ ಕಲ್ಪನೆಯು ವಿಶೇಷ ರೀತಿಯಲ್ಲಿ ತನ್ನ ಭಾಷಷನ್ನು ಪಡೆದುಕೊಳ್ಳುತ್ತದೆಯೆಂದು ಭಾವಿಸಲಾಗಿದೆ. ಕವಿತೆಯ ಸ್ವರೂಪದ ಬಗೆಗೆ ಮಾತಾಡುತ್ತಾ, ಕವಿತೆಯಲ್ಲಿ ಶಬ್ದಗಳ ಸಂಯೋಜನೆಯು ವಿಶೇಷ ರೀತಿಯದು ಎಂದು ಶೋಲೋವಸ್ಕಿಯು ಹೇಳುತ್ತಾನೆ.

ಕಥನ ಕಾವ್ಯದಲ್ಲಿ ಬರುವ ದೇಶಿಯ ಆಕೃತಿಗೂ ಈ ರೀತಿಯ ಕವಿತೆಗಳಲ್ಲಿ ಬರುವ ಆಕೃತಿಗೂ ಒಂದಷ್ಟು ವ್ಯತ್ಯಾಸವಿದೆ. ಈ ವ್ಯತ್ಯಾಸವು ರೂಪದಿಂದ ಜನ್ಯವಾದುವೇ ಹೊರತು ತಾತ್ವಿಕ ಅಭಿವ್ಯಕ್ತಿಯ ದೆಸೆಯಿಂದಲ್ಲ.

ಚಿತ್ರದ ಸ್ವರೂಪವನ್ನು ಬಣ್ಣಗಳಿಂದ ಅರ್ಥೈಸುವ ಹಾಗೆ ಕವಿತೆಯ ಸ್ವರೂಪವನ್ನು ಅದರ ಶಾಬ್ದಿಕ ಸಂಯೋಜನೆಯಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯ. ಕವಿತೆಯ ಕ್ರಿಯಾ ಸ್ವಭಾವವನ್ನು ಅನುಸರಿಸಿ ನಾವು ಕವಿತೆಯ ವಿನ್ಯಾಸವನ್ನು ವಿಭಜಿಸಿದರೂ ಅದರಲ್ಲಿ ಅನೇಕ ಸಂಗತಿಗಳು ನಿರ್ಣೀತಗೊಂಡಿರುತ್ತವೆ. ಕಥನ ಕಾವ್ಯಗಳಲ್ಲಿ 'ಅಂತರ' (ಈ ಅಂತರ ಕವಿಗೆ ಮತ್ತು ಪಾತ್ರಕ್ಕೆ)ಮುಖ್ಯವಾಗಿದ್ದು ಭಾಷೆಯು ಮೇಲು ನೋಟದ ವಿವರಣಾತ್ಮಕ ಸಂಗತಿಯನ್ನು ಪ್ರಚೋದಿಸುವಂತಿದ್ದರೆ ಭಾವಗೀತೆಯ ನಮೂನೆಯ ಕವಿತೆಗಳಲ್ಲಿ ಭಾವನಾತ್ಮಕ ಅಂಶವೇ ಮುಖ್ಯವಾಗಿರುತ್ತದೆ. ಇಲ್ಲಿ ಭಾಷೆಯ ಬಳಕೆಯೂ ಅದಕ್ಕನುಗುಣವಾಗಿ ರೂಪಿತವಾಗಿರುತ್ತದೆ. ಇಲ್ಲಿ ಭಾಷೆಯು ಆಯ್ಕೆ ಮತ್ತು ಸಹಯೋಗದ ಪ್ರತಿಕ್ರಿಯೆಯನ್ನು ಒಳಗೊಂಡಿರುತ್ತದೆ. ಸಾಲು-ಸಾಲುಗಳ

ನಡುವಿನ ಸಹಯೋಗ, ಪದ-ಪದಗಳ ನಡುವಿನ ಸಹಯೋಗದ ಬಗೆಗೆ ಬರಹಗಾರನ ಆಯ್ಕೆಯೇ ಮುಖ್ಯವಾದುದು. ಕವಿತೆಯು ಧ್ವನಿಯಿಂದ ಧ್ವನಿಗೆ ಕೊಡುವ ಒತ್ತು ಸನ್ನಿವೇಶವನ್ನು ಮತ್ತು ಬರಹಗಾರನ ಗ್ರಹಿಕೆಯನ್ನು ಅವಲಂಬಿಸಿಕೊಂಡಿರುವುದು ಗಮನಾರ್ಹ. ಕವಿತೆಯು ಗದ್ಯದಂತೆ ಅಲ್ಲ. ಚಿಕ್ಕ ಚಿಕ್ಕ ಆಯ್ಕೆಯೆ ಈ ರೀತಿಯ ಕವಿತೆಗಳಲ್ಲಿ ಮುಖ್ಯ. ಶಬ್ದದ ಅನ್ವಯವೇ ಈ ಕವಿತೆಗಳ ಮುಖ್ಯ ಗುಣವಾದ್ದರಿಂದ ಮತ್ತೆ ಬಹುತೇಕ ಬರಹಗಾರರು ದೇಸಿ ಬಳಕೆಯ ಶಬ್ದಗಳನ್ನೇ ಈ ಸಹಯೋಗಕ್ಕೆ ಆಯ್ಕೆ ಮಾಡಿಕೊಂಡರು. ಇದರರ್ಥ ಈ ರೀತಿಯ ದೇಸಿ ಬಳಕೆಯು ಬಂಡಾಯ ಸಾಹಿತ್ಯದಲ್ಲಿಯೇ ಪ್ರಾರಂಭವಾಯಿತು ಎಂದಲ್ಲ. ಹೊಸಗನ್ನಡ ಸಾಹಿತ್ಯದಲ್ಲಿ ಈ ರೀತಿಯ ನೆಲೆಯೊಂದಿದೆ. ಬೇಂದ್ರೆ, ಕಂಬಾರ, ವಾಲೀಕಾರ, ಚಂಪಾರ ಕೆಲ ಕವಿತೆಗಳ ಅಂತಃಸ್ಸತ್ವ ಇರುವುದು ಇಲ್ಲ. ಗದ್ಯ ಮುಖಲಯದ ಧ್ವನಿಯನ್ನು ತ್ಯಜಿಸಿದ ಬಹುತೇಕ ಕವಿಗಳು ಈ ರೀತಿಯ ರಚನೆಯನ್ನು ಪ್ರಾರಂಭಿಸಿದಾಗ ಅಲ್ಲೊಂದು ಸ್ವ-ಚಹರೆಯ ಸಮಸ್ಯೆಯೂ ಇದೆ ಎನ್ನುವುದನ್ನು ಅಲ್ಲಗಳೆಯಲಾಗದು. ಆಧುನಿಕ ಕರ್ನಾಟಕದ ಒಟ್ಟು ಸಾಂಸ್ಕೃತಿಕ ವಲಯದಲ್ಲಿ ಸ್ವತಂತ್ರವಾಗಿ ಮತ್ತು ಸ್ವಂತ ಚಹರೆಯನ್ನು ಬೆಳೆಸುವ ಸಲುವಾಗಿ ಈ ರೀತಿಯ ಕಾವ್ಯ ರಚನೆಯು ಸಾಧ್ಯವಾಯಿತು. ದೇಸಿ ಕಡೆಗೆ ನಡೆಯುವ ಯತ್ನ ಸ್ವಾಭಿವ್ಯಕ್ತ ಕ್ರಮದ ಕೂಸು ಕೂಡಾ ಹೌದು. ತಾತ್ವಿಕ ಆದರ್ಶವನ್ನು ಪುನರ್ ರೂಪಿಸುವ ಸಲುವಾಗಿ ಬಂದ ಈ ರೀತಿಯ ಕವಿತೆಗಳು ಒಂದು ವಾಸ್ತವದಿಂದ ಮತ್ತೊಂದು ಜಗತ್ತಿಗೆ ಲಂಘಿಸುತ್ತವೆ.

ಶುದ್ಧ ಭಾಷೆಯಿಂದ ಅಶುದ್ಧ ಭಾಷೆಯ ಕಡೆಗೆ ತುಡಿದ ಈ ಪ್ರಯತ್ನ ಹೊಸದೊಂದು ಸಂವಾದವನ್ನು ಏರ್ಪಡಿಸಿದೆಯೆಂದಷ್ಟೇ ಗುರುತಿಸಬಹುದು. ಹಳ್ಳಿಯಲ್ಲಿ ಸಾಮಾನ್ಯವಾಗಿ ಮಾತಾಡುವ ರೀತಿಯನ್ನು ಅವಲಂಬಿಸಿಕೊಂಡು ಈ ರೀತಿಯ ಕವಿತೆಗಳು ಸಿದ್ಧಿಯಾಗಿವೆ. ಈ ರೀತಿಯ ವಿನ್ಯಾಸದಲ್ಲಿ ಕಂಡು ಬರುವ ಇನ್ನಿತರ ಅಂಶಗಳನ್ನು ಹೀಗೆ ಕ್ರೋಢೀಕರಿಸಿಕೊಂಡು ಹೇಳಬಹುದು ;

ಈ ರೀತಿಯ ಬಂಡಾಯ ಕವಿತೆಗಳು ಲಯಬದ್ಧ ಸ್ವರೂಪಗಳು. ಹೆಚ್ಚಾಗಿ ಜಾನಪದ ಮಟ್ಟುಗಳನ್ನು ಜೊತೆಗೆ ಅನುಸಂಧಾನ ನಡೆಸಿದವುಗಳು.

2. ಈ ರೀತಿಯ ಕವಿತೆಗಳನ್ನು ಹಾಡಲು ಸಾಧ್ಯ.
3. ಈ ರೀತಿಯ ಕವಿತೆಗಳಿಗೆ ಎರಡು ಗುಣಗಳಿವೆ.

ಅ. ಕವಿತೆಗಳಲ್ಲಿ ರೂಪಿತವಾಗಿರುವ ವಸ್ತುವನ್ನು ಜನಮನಕ್ಕೆ ಮುಟ್ಟಿಸುವ ಉದ್ದೇಶ;

ಆ. ತಾತ್ಕಾಲಿಕ ಪರಿಹಾರ ಮಾರ್ಗವಾಗಿಯೂ, ಗುಂಪಿನ ನಡುವೆ

ರೂಪುಗೊಂಡಿರುವ ಈ ರೀತಿಯ ಕಾವ್ಯ ಹೋರಾಟ ಸಂದರ್ಭದಲ್ಲಿ ಹೆಚ್ಚು ರಚನೆಗೊಂಡಿವೆ.

3. ಜನಪದ ವಾದ್ಯ ಪ್ರಕಾರಗಳನ್ನು ಬಳಸಿಕೊಂಡು ಈ ರೀತಿಯ ಕವಿತೆಗಳನ್ನು ಹಾಡಲು ಸಾಧ್ಯವಾಗುವುದರಿಂದ ಈ ರೀತಿಯ ಕವಿತೆಗಳ ವಿನ್ಯಾಸವು ಅದಕ್ಕೆ ತಕ್ಕಂತೆ ಹೊಂದಿಕೊಂಡಿವೆ.

ಕತೆ ಮತ್ತು ಕಾದಂಬರಿಗಳಲ್ಲಿ ದೇಸಿಯ ವಿನ್ಯಾಸವೇ ಹೆಚ್ಚು ಕಾಣಿಸಿಕೊಂಡಿದೆ. ವಿಕೇಂದ್ರಿತ ಆಕೃತಿ ಇದರ ಮುಖ್ಯ ಲಕ್ಷಣ. ಸಂಘಟನೆಗೆ ಬದ್ಧರಾದ ಬರಹಗಾರರು ಮಾತ್ರವೇ ಅಲ್ಲ: ಬಂಡಾಯಕ್ಕಿಂತ ಹೊರಗಿನ ಬರಹಗಾರರು ಈ ರೀತಿಯಲ್ಲಿಯೇ ಬರೆಯತೊಡಗಿದ್ದು ಬಂಡಾಯ ಚಳುವಳಿಯ ಧನಾತ್ಮಕ ಅಂಶ. 1974ರ ಅನಂತರದ ಅನೇಕ ಕತೆ, ಕಾದಂಬರಿಗಳನ್ನು ಈ ರೀತಿಯು ಪರಿವರ್ತನೆಯನ್ನು ಸೂಚಿಸಿದೆ. ಸ್ಥಳದಿಂದ ಪ್ರಾರಂಭಿಸಿ, ಕಾಲದವರೆಗೆ ಪ್ರತಿಯೊಂದು ಅನುಕ್ರಮ ಜೋಡಿಸುವ ವಿಶೇಷ ಪ್ರಯತ್ನ ನಡೆದಿದೆ. ಕಾದಂಬರಿಯಲ್ಲಿ ಕತೆಯಲ್ಲಿ ಅವರ ಅವಶ್ಯಕತೆಗೆ ತಕ್ಕಂತೆ ಪಾತ್ರಗಳು ಪ್ರವೇಶಿಸುತ್ತವೆ. ಈ ಪಾತ್ರಗಳಿಗೆಚರಿತ್ರೆಗಳಿರುತ್ತದೆ. ಇವನ್ನು ಕತೆಯ ಒಳಗಡೆಗೆ ರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಬಿಡಿಯಾದ ಘಟನೆಗಳು ಕೂಡಾ ತನ್ನದೇ ಅಸ್ತಿತ್ವವನ್ನು ಪಡೆದುಕೊಳ್ಳುತ್ತಾ ಹೊಸದೊಂದು ಶಿಲ್ಪವನ್ನು ನಿರ್ಮಿಸುವ ಕ್ರಮ ಗಮನಾರ್ಹ.

ಕತೆಗಳನ್ನು ಹೆಣೆಯುವಾಗ ಬಂಡಾಯದ ಕತೆಗಾರರು ವಾಸ್ತವದ ರೀತಿಯನ್ನು ಭಾವುಕ ರೀತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕತೆಯನ್ನು ಹೆಣೆಯುವಾಗ ಕತೆಗಳಲ್ಲಿ ಕೆಲವಕ್ಕೆ ಕೇಂದ್ರಸ್ಥ ಗುಣವಿರುತ್ತವೆ. ಇನ್ನು ಕೆಲವಕ್ಕೆ ಬಿಡಿಯಾದ ಅಂಶಗಳಿರುತ್ತವೆ. ಕಾಳೇಗೌಡರ ಕೆಲವು ಕತೆಗಳು, ದೇವನೂರು ಮಹಾದೇವರ ಕತೆಗಳು ಮೊದಲನೆಯದಕ್ಕೆ ಉದಾಹರಣೆಗಳಾದರೆ ಬಿಡಿ ಬಿಡಿಯಾದ ಅಂಶಗಳೆಲ್ಲಾ ಸೇರಿಕೊಂಡು ಒಂದರ್ಥವನ್ನು ಧ್ವನಿಸುವ ಕತೆಗಳಿಗೆ ಬೆಸಗರಹಳ್ಳಿ ರಾಮಣ್ಣನವರ ಕೆಲವು ಕತೆಗಳು ಉದಾಹರಣೆಗಳಾಗಬಹುದು. ಅಂತ್ಯದಲ್ಲಿ ಕಾಣುವ ಸುಖದ ಕಲ್ಪನೆಯೇ ಕತೆಗಳ ಒಟ್ಟು ವಿನ್ಯಾಸದ ನಿರ್ಣಾಯಕ ಅಂಶವೂ ಆಗಿರುತ್ತದೆ. ಸಾಮಾನ್ಯವಾಗಿ ಜಮೀನುದಾರಿ ಆಶಯದ ವಿರುದ್ಧ ಕ್ರಾಂತಿಯೇಳುವುದು. ಅಥವಾ ಪ್ರತಿಭಟಿಸುವುದು ಕತೆಗಳಲ್ಲಿ, ಕಾದಂಬರಿಗಳಲ್ಲಿ ಕಂಡು ಬರುವ ಅಂಶಗಳಲ್ಲಿ ಒಂದಾಗಿದೆ. ಇದರಿಂದಾಗಿ ಈ ರೀತಿಯ ರಚನೆಗಳು ಸಾಮಾಜಿಕ ಅಂತರಂಗವನ್ನು ತನ್ನದೇ ಮಟ್ಟಗಳಲ್ಲಿ ಶೋಧಿಸತೊಡಗಿವೆ. ಈ ದೃಷ್ಟಿಯಿಂದ ಮಹಾ ವಾಸ್ತವವಾದಿ ಪರಂಪರೆಯನ್ನು ಬಂದಿಲ್ಲವೆನ್ನುವ ಕೊರಗು ಅಪ್ರಸ್ತುತವಾಗಬಹುದೇನೋ? ಸಾಂಸ್ಕೃತಿಕ

ಚರಿತ್ರೆಯನ್ನು ತನ್ನದೇ ಶೋಧದಲ್ಲಿ ತೊಡಗಿರುವ ಸನ್ನಿವೇಶವಿದು.

ಎರಡನೆಯದಾಗಿ, ಐತಿಹ್ಯ, ಪುರಾಣಗಳನ್ನು ತನ್ನ ಸಮಕಾಲೀನ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲೆತ್ನಿಸುವ ಕತೆ-ಕಾದಂಬರಿಗಳ ಉಗಮ ಕಾಣತೊಡಗಿದೆ. ದೇಸಿಯ ಪುರಾಣಗಳನ್ನು ಪುನರ್ ಕಟ್ಟುವ ಪ್ರಯತ್ನದ ಮೂಲಕ ಬಂಡಾಯದ ಬರಹಗಾರರು ಮತ್ತೆ ಹೊಸ ಶೋಧಕ್ಕೆ ತೊಡಗಿದ್ದಾರೆ. ಈ ಕುರಿತಂತೆ ಇನ್ನಷ್ಟು ಚರ್ಚೆಯು ಸಾಧ್ಯವೆಂದು ತೋರುತ್ತದೆ. ಆದರೆ ಒಟ್ಟಾರೆಯಾಗಿ ಜಾನಪದ ಕತೆಯ ರೀತಿಯ ವಿನ್ಯಾಸಗಳು ಕಾಣತೊಡಗಿವೆ ಎನ್ನುವುದನ್ನು ಮರೆಯಲಾಗದು.

ಅನುಕರಣೆಯ ವಿನ್ಯಾಸವನ್ನು ಬಂಡಾಯ ಚಳುವಳಿಯ ಸಂದರ್ಭದಲ್ಲಿ ಎರಡು ವಿಭಾಗಗಳ ಮೂಲಕ ಚರ್ಚಿಸಲು ಸಾಧ್ಯ:

(1) ಪಶ್ಚಿಮದ ಅನುಕರಣೆಯ ರೀತಿಯಲ್ಲಿ ಹುಟ್ಟಿರುವ ಕತೆ, ಕಾವ್ಯ, ಕಾದಂಬರಿಗಳ ವಿನ್ಯಾಸ.

(2) ಇನ್ನೊಂದು ಕನ್ನಡದ ಹಳೆಯ ಕವಿಗಳ ಮತ್ತು ನವ್ಯಕವಿಗಳ ಅನುಕರಣೆಯಿಂದ ಹುಟ್ಟಿಕೊಂಡಿರುವ ರಚನಾ ವಿನ್ಯಾಸ.

ಅನುಕರಣೆ ಎನ್ನುವುದು ಈ ಹೊತ್ತಿಗೆ ಒಂದು ಸೈದ್ಧಾಂತಿಕ, ತಾತ್ತ್ವಿಕ, ಮಾನಸಿಕ ಮತ್ತು ರಾಜಕೀಯ ಪ್ರಶ್ನೆ. ಅನುಕರಣೆಯ ವೈಚಾರಿಕ ಕೃತಿಯು ಈ ಮೇಲಿನ ಯಾವ ವಿಧಾನದಿಂದಲೂ ಸಂಜನಿಸಬಹುದು. ಈ ರೀತಿಯ ಅನುಕರಣೆಯಿಂದಾಗಿ ರಚನೆಯ ವಿನ್ಯಾಸವು ನಮ್ಮದಾಗದೆಯೂ ಹೋಗಬಹುದು. ನಮ್ಮಲ್ಲಿಯ ಬರಹಗಾರರು ಈ ವಿನ್ಯಾಸಗಳನ್ನು ಯಾವ ರೀತಿಯಲ್ಲಿ ಅನುಕರಿಸುತ್ತಾರೆ ಎಂಬುದನ್ನು ಹೊಂದಿಕೊಂಡಿದೆ. ಉದಾಹರಣೆಗೆ ಮಾರ್ಕ್ವೇಯುನನ್ನು ಅನುಕರಿಸುವಾಗ ನಮ್ಮ ದೇಶೀಯ ಸ್ಥಿತಿಯ ರಚನಾಕ್ರಮದ ಹಿನ್ನೆಲೆಯಲ್ಲಿಯೂ ಅನುಕರಿಸಿದಾಗ ಅದು ಪೂರ್ತಿಯಾಗಿ ಪರಕೀಯ ಆಗಿರುವುದಿಲ್ಲ. ಮೂಲ ಮಾತೃಕೆಯು ಪರಕೀಯ ಸಂಸ್ಕೃತಿಯದು ಆಗಿದ್ದು, ಕತೆ ಹೇಳುವ ಕ್ರಮ ನಮ್ಮ ನಾಡಿನ ಒಳಸೆಲೆಗಳನ್ನು ಪಡೆದುಕೊಂಡಿರುತ್ತದೆ. ಈ ರೀತಿಯ ವಿನ್ಯಾಸ ಕ್ರಮ ನಮ್ಮದೆನ್ನಿಸುವ ಮಟ್ಟಿಗೆ ಆತ್ಮೀಯವೂ ಆಗುತ್ತದೆ. ವಿಶಿಷ್ಟ ವಿನ್ಯಾಸಗಳು ಸಂಭವಿಸುವುದು ಹೀಗೆ. ಬೆಸಗರಹಳ್ಳಿ ರಾಮಣ್ಣನವರ ಕೆಲವು ಕತೆಗಳು, ಕುಂ. ವೀರಭದ್ರಪ್ಪ ಅವರ ಕತೆಗಳು ಹೊಸ ರಚನಾ ವಿನ್ಯಾಸವನ್ನು ಒಳಗೊಂಡಿದ್ದರೂ ಅವುಗಳಲ್ಲಿ ಈ ರೀತಿಯ ಹೊಸ ಸಾಧ್ಯತೆಯು ಹೊಳಹುಗಳಿವೆ.

ಹಳೆಯ ಕವಿಗಳನ್ನು ಮತ್ತು ಕತೆಗಾರರನ್ನು ಅನುಸರಿಸಿ, ಅದಕ್ಕೆ

ಹೊಸ ವೈಚಾರಿಕ ಹಿನ್ನೆಲೆಯನ್ನು ಪರಿಶೋಧಿಸಿದ ಬಂಡಾಯ ಬರಹಗಾರರು ಚರಿತ್ರೆಯಲ್ಲಿ ಅರ್ಥಗಳನ್ನು ಹುಡುಕಲು ಹೊರಟಿದ್ದು ಗಮನಾರ್ಹ. ವಚನ ಮತ್ತು ತ್ರಿಪದಿಯ ವಿನ್ಯಾಸಗಳನ್ನು ಕವಿತೆಗಳಲ್ಲಿ ಕಂಡರೆ, ಕತೆ, ಕತೆಯೊಳಗೊಂದು ಉಪಕತೆಯನ್ನು ಹೆಣೆಯುತ್ತಾ ಬರೆಯುವ ಕತೆಗಾರರು ಭಾರತೀಯ ಸಾಂಸ್ಕೃತಿಕ ಚೌಕಟ್ಟನ್ನು ಈ ಮೂಲಕ ಶೋಧಿಸತೊಡಗಿದ್ದಾರೆ. ಇಲ್ಲಿಯ ಅನುಕರಣೆ ವಿನ್ಯಾಸದ ಬಗೆಗೆ ಮಾತ್ರವೇ ಹೊರತು ಆಶಯದ ಅನುಕರಣೆಯಲ್ಲ. ಮರಳಿ ಭಾರತೀಯತೆಯನ್ನು ವೈಚಾರಿಕ ಹಂತದಲ್ಲಿ ಪರಿಶೋಧಿಸುವ ಈ ರೀತಿಯ ವಿನ್ಯಾಸ ಈ ಬೀಜರೂಪದಲ್ಲಿದೆ. ಮೊಳಕೆಯೊಡೆಯಬೇಕಾಗಿದೆ. ಮೂರನೆಯ ಜಗತ್ತು ಈ ಹೊತ್ತಿಗೆ ತ್ವರಿತ ಚಹರೆಯನ್ನು ರೂಢಿಸಿಕೊಳ್ಳುವ ಪ್ರಯತ್ನದಲ್ಲಿರುವುದರಿಂದ ಈ ರೀತಿಯ ವಿನ್ಯಾಸಗಳಿಗೆ ಸಹಜವಾಗಿ ಅನೇಕ ಅರ್ಥಗಳು ಒಡಮೂಡುತ್ತವೆ. ತಾತ್ವಿಕ, ಸಾಂಸ್ಕೃತಿಕ, ಸಾಮಾಜಿಕ ಸ್ವರೂಪದಲ್ಲಿ ಇದು ರೂಪು ಪಡೆಯುತೊಡಗಿದೆಯಷ್ಟೆ: ಕನ್ನಡದ ಪ್ರಾಚೀನ ಕೃತಿಕಾರರು ಲೌಕಿಕ-ಅಲೌಕಿಕವನ್ನು ಏಕಕಾಲಕ್ಕೆ ರಚನೆಯ ವಿನ್ಯಾಸದಲ್ಲಿ ಸಂಧಿರುವುದನ್ನು ಗಮನಕ್ಕೆ ತಂದುಕೊಳ್ಳಬಹುದು. ಕೇವಲ ಕಣ್ಣೆದುರು ಇರುವ ಸತ್ಯದ ಜೊತೆಗೇನೆ ಅವರಾಚೆಗೆ ಇರುವ ಆದರ್ಶವನ್ನು ಕತೆಯ ನಿರೂಪಣಾತ್ಮಕವಾದ ಒಳಗಡೆಗೆ ಸಂದಿರುವ ಕನ್ನಡದ ಪ್ರಾಚೀನ ಕೃತಿಕಾರರು ಸರಳವಾದದ್ದನ್ನು ಹೇಳುತ್ತಲೇ ಆದರ್ಶವನ್ನು ರೂಪಿಸಿರುವುದು ಪರಿಶೀಲನಾರ್ಹ. ಕತೆಯೊಂದು ಗದ್ಯದ ಮುಖೇನ ಹೇಳುವ ತರ್ಕವನ್ನು ಬಿಟ್ಟು, ಕವಿತೆಯ ಸಂಕೋಚವನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಹೊತ್ತಿದು. ಬಹುಶಃ ಇದನ್ನು ಎಚ್ಚರದಿಂದ ಕಾಯಬೇಕಾಗಬಹುದು. ಶುದ್ಧಾಂಗವಾಗಿ ವಿಶ್ವವಿದ್ಯಾನಿಲಯದ ಬುದ್ಧಿಜೀವಿ ವಲಯವನ್ನು ದೂರವಿಟ್ಟು ಬರೆಯತೊಡಗಿದ ತೇಜಸ್ವಿ, ಗದ್ಯ-ಪದ್ಯದ ಸಾಧ್ಯತೆಯನ್ನು ತೋರಿಸಲು ಯತ್ನಿಸುತ್ತಿರುವ ದೇವನೂರು, ಕೆ. ಸತ್ಯನಾರಾಯಣ ಅವರ ಕೃತಿಗಳ ರಚನ ವಿನ್ಯಾಸ ಈ ರೀತಿಯಲ್ಲಿ ವಸಾಹತು ಸಂಸ್ಕೃತಿಯ ಒಡಲನ್ನು ಬೇಧಿಸತೊಡಗಿವೆ ಎಂದು ಸೂಚಿಸಬಹುದು. ಈ ಮಾತನ್ನು ಕೇವಲ ಪ್ರಮೇಯವಾಗಿ ಮಾತ್ರವೇ ಸೂಚಿಸಲಾಗಿದೆ. ಆದರೆ ನಿಜವಾದ ಅರ್ಥದಲ್ಲಿ ಕನ್ನಡದ ಸಾಂಸ್ಕೃತಿಕ ಚರಿತ್ರೆಯ ಜೊತೆ ಅನುಸಂಧಾನ ನಡೆಯುತ್ತಿರುವುದರಿಂದ ವಿನ್ಯಾಸವೂ ಅದಕ್ಕನುಗುಣವಾಗಿ ರೂಪುಗೊಳ್ಳತೊಡಗಿದೆ.

ಮೈತ್ರಿಯ ವಿನ್ಯಾಸ ಆಸಕ್ತಿ ಕೆರಳಿಸುವ ವಿನ್ಯಾಸವೂ ಹೌದು. ಈ ಮೈತ್ರಿಯ ರೂಪಕ್ಕೆ ಅನುಸಾರವಾಗಿಯೇ ಕತೆ, ಕಾದಂಬರಿ, ಕಾವ್ಯಗಳ ವಿನ್ಯಾಸಗಳಿವೆ. ಮೈತ್ರಿಯು ಓದುಗ ವರ್ಗಕ್ಕೂ ಕೃತಿಯ ರೂಪಗಳಿಗೂ ಮಧ್ಯೆ ಸೇತುವೆಯಾಗಿರುತ್ತದೆ. ಮೈತ್ರಿಯ ವಿಧಾನವು ಬೇರೆ ಬೇರೆ ತೆರನಾಗಿರುತ್ತದೆ. ಆಧುನಿಕ ಪರಿಸರದಲ್ಲಿ ಈ ರೀತಿಯ ಮೈತ್ರಿಯನ್ನು ಒದಗಿಸುವ ಮಾಧ್ಯಮಗಳು ಹಲವು. ಸಮೂಹ ಮಾಧ್ಯಮಗಳಾದ

ರೇಡಿಯೋ, ಟಿ.ವಿ., ದಿನಪತ್ರಿಕೆಗಳು ಬರಹಗಾರರಿಗೆ ಮತ್ತು ಸಾಹಿತ್ಯವನ್ನು ಸ್ವೀಕರಿಸುವವರಿಗೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿವೆ. ಇಲ್ಲಿ ಮೈತ್ರಿಯು ಬರಹಗಾರರಿಗೆ ಮತ್ತು ಮಾಧ್ಯಮಕ್ಕೆ, ಮಾಧ್ಯಮಕ್ಕೆ ಮತ್ತು ಸ್ವೀಕರಿಸುವವರ ನಡುವೆ ಸಹಜವಾಗಿರುತ್ತದೆ. ಅಷ್ಟೇ ಅಲ್ಲ ಅನೇಂದು ಸಾಂದರ್ಭಿಕ ಸನ್ನಿವೇಶಗಳಿಂದ ಪ್ರೇರಿತವಾಗಿರುತ್ತವೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾಹಿತ್ಯವು ಈ ತರಹದ ಒಪ್ಪಂದ ಮಾಡದೆ ಗತ್ಯಂತರವೂ ಇಲ್ಲ. ವಾರಪತ್ರಿಕೆಯಲ್ಲಿ ಬರುವ ಧಾರವಾಹಿ, ವಿಧವಿಧವಾದ ಮ್ಯಾಗಸಿನ ವಿಭಾಗದಲ್ಲಿ ಬರುವ ಕತೆಗಳು ಈ ರೀತಿಯ ವ್ಯಾವಹಾರಿಕ ಒಪ್ಪಂದ ಮಾಡಿಕೊಂಡವುಗಳು. ನಮ್ಮ ಸಾಹಿತ್ಯದ ಸನ್ನಿವೇಶದಲ್ಲಿ ಧಾರವಾಹಿ ಕಾದಂಬರಿಗಳನ್ನು ಬರೆಯುವುದೇ ರೇಜಿಗೆ ಹುಟ್ಟಿಸುವ ಕೆಲಸವೆಂದು ಭಾವಿಸಿಕೊಂಡಿದ್ದರೂ, ಈಗ ಆ ರೀತಿಯ ಭಾವನೆ ನಮ್ಮ ಬರಹಗಾರರಿಗಿಲ್ಲ. ಯಾವ ಪತ್ರಿಕೆಯಲ್ಲಿ ನಾವು ಯಾವ ರೀತಿಯ ಬರಹಗಳನ್ನು ಕೊಡುತ್ತೇವೆ ಎನ್ನುವುದರಿಂದಲೇ ತಾತ್ವಿಕ ಪ್ರಶ್ನೆಯು ಉದ್ಭವಿಸುತ್ತದೆಯಾದರೂ ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ಈ ರೀತಿಯ ಮೈತ್ರಿ ಅನಿವಾರ್ಯ ಕೂಡಾ. ಬಹುಸಂಖ್ಯಾತ ಕನ್ನಡದ ಓದುಗ ವರ್ಗಕ್ಕೆ ಕಾದಂಬರಿಕಾರರೆಂದರೆ ಯಂಡಮೂರಿಯೆಂತಲೇ ಪರಿಚಯವಾಗಿರುವ ಸಂದರ್ಭದಲ್ಲಿ ನಮ್ಮ ಸಾಹಿತ್ಯ ರಚನೆಯಾಗುತ್ತಿದೆ. ಇಲ್ಲಿ ಓದುಗ ವರ್ಗ ಸಾಹಿತ್ಯವನ್ನು ಸ್ವೀಕರಿಸುವ ಹಿನ್ನೆಲೆ ಮುಖ್ಯವಾಗುತ್ತದೆ. ಬಹುತೇಕ ಮಧ್ಯಮವರ್ಗ ಮಾನಸಿಕ ಹಿನ್ನೆಲೆಯುಳ್ಳ ಓದುಗ ವರ್ಗಕ್ಕೆ ಸಾಹಿತ್ಯ ಮನೋರಂಜನೆಯ ಸಾಧನ ಮಾತ್ರ, ಸಿನಿಮಾದ ಬದಲು ಸಾಹಿತ್ಯ, ದೈನಂದಿನ ಸಂಕಟದ ಬದಲು ಸಾಹಿತ್ಯ ಹೀಗೆಯೇ ಇದು ಮುಂದುವರಿಯುತ್ತದೆ. ಈ ಸಮಸ್ಯೆಯನ್ನು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಹಜವಾಗಿಯೇ ಗುರುತಿಸಬಹುದು. ಸಮಯ ಕಳೆಯಲು, ಸಂಕಟ ಮರೆಯಲು ಸಾಹಿತ್ಯ ಬಂದಾಗ ಅದರಲ್ಲಿ ಭ್ರಮೆಯ ಉದ್ಯಾನವನವಿರುತ್ತದೆ. ಈ ಕಾರಣದಿಂದ ಸಾಹಿತ್ಯದ ವಿನ್ಯಾಸವು ಅದಕ್ಕನುಗುಣವಾದ ರಂಜನೀಯ ಗುಣವನ್ನು ಹೊಂದಿಕೊಂಡು ಮುಂದುವರಿಯುತ್ತದೆ. ಕಚಗುಳಿಯಿಡುವ ಕವಿತೆಗಳು: ಸಿನಿಮಾ ಮಾದರಿಯ ಕತೆ ಕಾದಂಬರಿಗಳು ಇದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ಇಲ್ಲಿ ನಿರೂಪಣೆಯ ಕ್ರಮವು ಅದಕ್ಕನುಸಾರವಾದ ವಾತಾವರಣವನ್ನು ನಿರ್ಮಿಸುತ್ತವೆ. ಈ ವರ್ಗಕ್ಕೆ ಸೇರುವ ಕಾದಂಬರಿಗಳಲ್ಲಿ ಎರಡು ಪ್ರಭೇದಗಳಿವೆ. ಒಂದು ಮಾದರಿಯ ಕಥನ ಕ್ರಮದಲ್ಲಿ ಗಂಭೀರವಾದ ವಾಸ್ತವದ ಅನುಕರಣೆಯಿದೆ. ಇದು ದೃಶ್ಯದ ಮಾಧ್ಯಮದಲ್ಲಾಗಲೀ; ವಾರಪತ್ರಿಕೆಗಳ ಭ್ರಮೆಗಳಲ್ಲಾಗಲೀ ಮಾಮೂಲಿ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ. ಲಿಖಿತ ಪಠ್ಯವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುವ ಇದು, ದೃಶ್ಯದ ಚೌಕಟ್ಟಿಗೆ ಅನಂತರ ಒಗ್ಗಿಕೊಳ್ಳುತ್ತದೆ. ಈ ಹೊತ್ತಿಗೆ ದೃಶ್ಯದ ಚೌಕಟ್ಟು ಅತ್ಯಂತ ಪ್ರಬಲವಾದ ಮಾಧ್ಯಮ

ಮಾಡುವರಿಂದ ದೃಶ್ಯದ ಮಾಧ್ಯಮವನ್ನು ಉಪೇಕ್ಷೆಯಿಂದ ಕಾಣುವಂತೆಯೂ ಇಲ್ಲ. ಗಂಭೀರ ಅನುಕರಣೆಯ ಕಥನ ಕ್ರಮವುಳ್ಳ ಈ ಕತೆ, ಕಾದಂಬರಿಗಳು ನಿರೂಪಣೆಯ ರೀತಿಯಲ್ಲಿ ಸಹಜತೆಯನ್ನು ಮುಖ್ಯ ಆಧಾರವಾಗಿ ಇಟ್ಟುಕೊಂಡಿರುತ್ತವೆ.

ಇನ್ನೊಂದು ಮಾದರಿಯ ವರ್ಗವು ವಿನ್ಯಾಸವನ್ನು ಪಡೆದುಕೊಳ್ಳುವುದು ಒಪ್ಪಂದದ ರೀತಿಯಲ್ಲಿಯೇ. ಈ ಒಪ್ಪಂದವನ್ನು ಸಮೀಕರಿಸಲು ಸಾಧ್ಯವಾಗುವುದು ವ್ಯಾಪಾರಿ ಕಲೆಯೊಂದಿಗೆ ಮಾತ್ರ. ಮಾರುಕಟ್ಟೆಯ ಸಾಹಿತ್ಯರಂಜನೆಯ ಉದ್ದೇಶವನ್ನು ಮಾತ್ರ ಒಳಗೊಂಡಿರುತ್ತದೆ. ಮುಖ್ಯವಾಗಿ ನಗೆಹನಿಯ ಬದಲಿಗೆ ಬಂದ ಪುಟ್ಟಕವಿತೆಗಳು ಇದಕ್ಕೊಂದು ಒಳ್ಳೆಯ ಉದಾಹರಣೆ ಮಾತ್ರ. ಬರೀ ಗಿಮಿಕ್ ಮಾತ್ರವೇ ಉದ್ದೇಶವಾಗುಳ್ಳ ಈ ರೀತಿಯ ಕವಿತೆಗಳ ಘನವಾದ ಅನುಕರಣೆ ಇರುವುದಿಲ್ಲ. ಈ ಕವಿತೆಗಳಲ್ಲಿ ಕಂಡುಬರುವ ಅನೇಕ ಸೂಚನೆಗಳು ಇವುಗಳಲ್ಲಿ ಗೈರು ಹಾಜರಿಯಾಗಿರುತ್ತವೆ. ಸಾಮಾಜಿಕವಾಗಿ ಉಂಟಾಗಿರುವ ಗಾಢ ವಿಷಾದ, ಮನುಷ್ಯ-ಮನುಷ್ಯರ ನಡುವೆ ಇರುವ ತಲ್ಲಣವೆ ಈ ಕವಿತೆಯ ರಚನೆಯ ಹಿನ್ನೆಲೆಯಲ್ಲಿರುವ ಮುಖ್ಯ ಸಂಗತಿಗಳಾಗಿವೆ.

ಬೌದ್ಧಿಕ ವಿನ್ಯಾಸವು ಹುಟ್ಟಿಕೊಳ್ಳುವುದು ಉದ್ದೇಶಿತ ರಚನೆಯ ಸಾಧ್ಯತೆಯಿಂದ. ತಾಂತ್ರಿಕ ಕುಶಲತೆಯನ್ನು ಉದ್ದೇಶಪೂರ್ವಕವಾಗಿ ಸಂಯೋಜಿಸುವುದರ ಮುಖಾಂತರ ಅರ್ಥಗಳನ್ನು ಕಂಡುಕೊಳ್ಳುವ ಈ ರೀತಿಯ ರಚನೆಯ ಕೌಶಲವನ್ನು ಮುಖ್ಯ ಉದ್ದೇಶವನ್ನಾಗಿರಿಸಿವೆ. ಅಭಿವ್ಯಕ್ತಿಯ ಸ್ವರೂಪವು ವ್ಯಕ್ತಿ ಗ್ರಹಿಕೆಯ ಉದ್ದೇಶ ತಕ್ಕಂತೆ ಆಕಾರವನ್ನು ಪಡೆದುಕೊಳ್ಳುವ ಈ ರೀತಿಯ ರಚನೆಗಳು ಬೌದ್ಧಿಕ ಸಂಪರ್ಕವನ್ನು ಪಡೆದುಕೊಳ್ಳುತ್ತವೆ. ಈ ರೀತಿಯ ಬೌದ್ಧಿಕ ರೂಪದ ವಿನ್ಯಾಸವು ಭಾವನೆಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡದೆ ಜ್ಞಾನದ ವಿಸ್ತಾರವನ್ನು ಬಯಸುತ್ತವೆ. ಕಾವ್ಯದ ಆಕೃತಿಯೊಳಗೆ ಇರುವ ಸಾಮ್ಯತೆ ಮತ್ತು ವೈಷಮ್ಯಗಳನ್ನು ಸ್ಪಷ್ಟವಾಗಿಯೇ ಇವು ಪ್ರಚೋದಿಸುತ್ತವೆ. ತಾಂತ್ರಿಕತೆ, ಭಾಷಿಕ ಸಾಧ್ಯತೆಯನ್ನು ಒಳಗೊಂಡು ಈ ರೀತಿಯ ವಲಯ ನಿರ್ಮಾಣಗೊಳ್ಳುತ್ತದೆ.

ಅಂತಿಮವಾಗಿ, ಸಾಹಿತ್ಯದ ವಿನ್ಯಾಸವು ಕಣ್ಣಪಟ್ಟಿಯನ್ನು ಕಟ್ಟಿದ ಓದಿನ ಹಾಗೆ ನವ್ಯ ವಿಮರ್ಶಕರಿಗೆ ಕಂಡರೆ, ಬಂಡಾಯದ ವಿಮರ್ಶೆಯಲ್ಲಿ ಅದು ಆಂತರಿಕ ಮತ್ತು ಬಹಿರಂಗದ ಒಂದು ವ್ಯಾಪಾರವಾಗಿ ಕಾಣಿಸಿದೆ. ಬರಹಗಾರನ ಪ್ರಜ್ಞೆಯನ್ನು ಸಾಹಿತ್ಯದ ವಿನ್ಯಾಸವು ಅನುಭವಕ್ಕೆ ತಂದ ಹಾಗೆ, ವಿಮರ್ಶಕನ ಪ್ರಜ್ಞೆಯನ್ನು ಕೂಡಾ ಅದು ಸೂಚಿಸುತ್ತದೆ.

(ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇದರ ಆಶ್ರಯದಲ್ಲಿ ಜರುಗಿದ ಬಂಡಾಯ ಸಾಹಿತ್ಯ ಗೋಷ್ಠಿ (1.7.90) ಯಲ್ಲಿ ಓದಿದ ಪ್ರಬಂಧ)

ಗಲ್ಲುಗಂಭಗಳಲಿ ಗುಲಾಬಿಯರಳುವುದು

–ಪ್ರಹ್ಲಾದ ಅಗಸನಕಟ್ಟೆ

[ಎರಡನೇ ಮಹಾ ಯುದ್ಧದಲ್ಲಿ ಹಿಟ್ಲರನ ಕಪಿಮುಷ್ಟಿಗೆ ಸಿಕ್ಕಿ ನರಳಿದ ಹಲವು ರಾಷ್ಟ್ರಗಳಲ್ಲಿ ಜೆಕೊಸ್ಲಾವಾಕಿಯು ಒಂದು. ಜೆಕೊಸ್ಲಾವಾಕಿಯಾದ ಬಿಡುಗಡೆಗೆ ಹೋರಾಡಿದ ಹಲವರಲ್ಲಿ ಕಮ್ಯುನಿಸ್ಟ್ ಪತ್ರಿಕೆಯ ಸಂಪಾದಕರಾಗಿದ್ದ ಜ್ಯೂಲಿಯಸ್ ಫ್ಯೂಚಿಕ್ ಒಬ್ಬರು.

1942 ಏಪ್ರಿಲ್ 24 ರಂದು ಹಿಟ್ಲರನ ಗೆಸ್ಟ್ರೆಪೋ ದಳ ಅವರನ್ನು ಬಂಧಿಸಿ ಪಾಂಕ್ರ್ಯಾಟ್ಸ್ ಸೆರೆ ಮನೆಯಲ್ಲಿ ನರಕ ಸಮಾನ ಚಿತ್ರಹಿಂಸೆಗೆ ಈಡುಮಾಡಿತು. ನಾಜಿಗಳು ಅವರನ್ನು 1943ರ ಸೆಪ್ಟೆಂಬರ್ 8 ರಂದು ಗಲ್ಲಿಗೇರಿಸಿದರು. ಸುಮಾರು 411 ದಿನಗಳನ್ನು ಸೆರೆಮನೆಯ ಕತ್ತಲಲ್ಲಿ, ತಮ್ಮ ಸಂಗಾತಿಗಳು ನಿತ್ಯ ನೇಣುಗಂಬದ ಕಡೆ ನಡೆವುದನ್ನು ಕಣ್ಣಾರೆ ಕಂಡ ಫ್ಯೂಚಿಕ್ ಅವರ ಪ್ರಜ್ಞಾವಲಯ ಪ್ರವೇಶಿಸಿ...]

೧

ಪ್ರಾಗ್ ನಗರವ ನರನರ ನಡುಗಿಸೋ
ಮಂಜು ಮುಸುಕಿ
ಪಕ್ಕೆಲವುಗಳ ಕತ್ತರಿಸಿ ಚಳಿ ಎರಚಿದೆ
ಬೀದಿ ಭಯ ತಲ್ಲಣಗಳ ತಂದಿಲ್ಲಿ–ತಿನ್ನೆಂದು,
ನಿರ್ಜನ ಬೀದಿಗಳಲಿ ನಿಶ್ಯಬ್ದದ ಗಸ್ತು.
ನಿಮಿಷದಂಕಿಗಳ ನುಂಗುವವು ಸೆರೆಮನೆಯ
ಕತ್ತಲು ಬೆಳಕಿನ ಸರಳು
ಪ್ಲೇಗ್ ರೋಗದ ಹಾಗೆ
ಪ್ರಾಗ್ ಪಟ್ಟಣದ ಕರುಳ ನಾಜಿಗಳ ಮಂಚನೆ ತಪ್ಪಿದೆ.
ಕಾಮ್ರೇಡ್, ಮುಗಿಯಿತೇ —
ಮುಗಿದಿದೆ ಎನಿಸುವುದೇ ಪ್ರಾರಂಭ
ಹಸಮಣೆಗೆ ಕ್ರಾಂತಿಕನ್ಯೆ ಕೂರುವ ಸಂಭ್ರಮ.

೨

ಮುಗಿಯದ ಹಗಲು

ನೇಯುತಿದೆ ಮುಗಿಲೊಳಗೆ ಹದ್ದಿನ ನೆರಳ ನೂಲು:
ಸುರಿವ ಮಂಜಲ್ಲಿ ತೂಕಡಿಸುತಿದೆ ಗಳಿಗೆ ಬಟ್ಟಲು.
ಸಮವಸ್ತ್ರಧಾರಿ ಯಮದೂತರು
ತುಕ್ಕು ಹಿಡಿದ ಹಗಲ ಉಜ್ಜುತ್ತಾರೆ ಬಂದೂಕ ಹೊತ್ತು;
ಹೊತ್ತು ಯಾರ ಸ್ವತ್ತು:
ಗೊತ್ತು;
ಅವರಿಗೆ ಅಥವ ನಮಗೆ
ಈ ಹಗಲು ಒಂದು ದಿನ ಕದ ತೆಗೆಯುವುದೇ ಇಲ್ಲ
ಈ ಇರುಳು ಒಂದು ದಿನ ಕದ ಮುಚ್ಚುವುದೇ ಇಲ್ಲ
ಸದ್ದು;
"ಹೇಳಿ ಇನ್ನು ಯಾರ ಸರದಿ
ನೇಣು ಕರೆಯುತಿದೆ ಬಾಯಾರಿ"
ಸರ್ವತ್ರ
ಸಾವಿನ ಗಾಳಿ ಸೂಸಿ
ತಣ್ಣಗುರಿವ ಎದೆಗೂಡ ಜ್ಯೋತಿಯು ನೀಲಿ ನಡನಡುಗಿ
ಕರ ಕರಗಿ ನೀರಾಗಿ ಸರ್‍ರನೆ ಬೆಚ್ಚಿ ಕೇಳುವುದು;
ಗಲ್ಲಿನ ಮುಂದೆ ಬದುಕು
ಬರಿಯ ಗರಿಕೆ ಹುಲ್ಲೆ–?
—ನೆಗೆವ ಹುಲಿ !
ಜೆಕೊಸ್ಲಾವಾಕಿಯಾ
ನೀ ಶಿಲುಬೆಗೇರುವುದ ನೋಡಲಾಗದೆ
ಈ ಹುಣ್ಣಿನ ಹಣ್ಣುಗಳ ಮೊಲ ಬಂದೆ;
ಗೆಸ್ತೆಪ್ರೋ ದಳ ನೀರೆರೆದ ಈ ಗಾಯದ ಕಾಯಿಗಳ
ಮಾಗಿಸಿ ನಾಳಿನ ಫಸಲಿಗೆ ಬೀಜ ತೆಗೆವೆ.
ನಿನಗಾಗಿ
ಸಾವಿರ ಸೆರೆಮನೆಗಳಲಿ ಸಾವಿರ ಬಾರಿ ಇರುವೆ
ಸಾವು ಬರುವವರೆಗೆ.

೩

ಮದ್ಯ ಹೀರಿದ ಕುಡುಕ
ಈ ಮಧ್ಯ ರಾತ್ರಿ.

ಮಿನಗುವ ಮುಗಿಲ ಚುಕ್ಕಿಗೆ ಮಂಕು
ಟ್ರೈನ್‌ಇಗರ್ಜಿಯ ಶಿಖರಾಗ್ರದಲಿ ಗೂಬೆ ಬಿಕ್ಕಿ
ಕಟ್ಟಕಡೆಯ ಟ್ರಾಮುಗಳು ನಿಟ್ಟುಸಿರ ಇಕ್ಕಿ
ನಗುತಿದೆ ಇರುಳಿಸುರಲು ತಾರೆಗಳ ಮುಕ್ಕಿ.
ಇರುಳ ಬರ್ಬರ ಬೆರಳು
ಖಾಲಿ ಗೋಡೆಗಳ ಮೇಲೆ ನಿಗೂಢ ಇತಿಹಾಸದ ರೇಖೆಗಳ ಕೊರೆದು
ನುಸುಳಿ ಬರುವ ಗಾಳಿ
ಆರ್ತನಾದದ ಮೊರೆಗಳನ್ನು ಕರ್ಣಗಳಲಿ ಉಲಿದು
ಧುಮುದುಮಿಸುತಿದೆ–ಎಲ್ಲೊ ರಕ್ತ ಜಲಪಾತ !
ಬೀಷಣ ಬೀಜದೊಡಲಿಂದ
ಧಗೆ ತಿಂದ ಧರಣಿ ಎದೆಯಿಂದ
ನಾಳೆ ಅರಳುವ ನವ ಪುಷ್ಪಗಳ ಕನಸು ನನಗೆ.
ನೋವು–ಯಾತನೆ
ಕಂಬನಿಗಳ ಯಾತದಲಿ ಸುರಿಯುತ್ತಿವೆ
ದಿನಗಳು ಇರದಂತೆ ಒಂದು ಕೊನೆ.
ಇಲ್ಲ–ಇದೆ ಎಲ್ಲಕ್ಕೂ ಒಂದು ವಿರಾಮ
ಅಲೆಮಾರಿಗೂ ದಕ್ಕಲಿದೆ ಹೊಸ ಆಯಾಮ !

೪

ಕೆಂಭೂತಗಳೇ ಕೇಳಿ
ತೊಟ್ಟ ಅಂಗಿ ಕೆಂಬಾವುಟ
ನಡೆವ ತೊಡರು ನಡಿಗೆ–ಪಥ ಸಂಚಲನ.
ಹತ್ತಿಕ್ಕಲೆತ್ನಿಸುವ ಹಂದಿಗಳು
ನಗೆ ಮಿಂಚಲ್ಲಿ ಮೂಡುವವು
ಸುತ್ತಿಗೆ ಕತ್ತಿ
ದಿಗ್ಗನೆ ಹತ್ತಿ ಒಡಲೊಳಗಣ ಕಾಡ್ಗಿಚ್ಚು
ಸುಡುವುದು ನಿಮ್ಮ ಸುತ್ತಿ.
ಜಂಬದ ಕೋಳಿಗಳೇ
ನೀವೆಸೆದ ಬಾಂಬು ಗಾಳಿಯಲ್ಲಿ ತೇಲುವ ಅರಳೆ
ಮೈಯೊಡ್ಡಿದವರಿಗೆ ಬರಿಯ ವಸ್ತ್ರ–ನಿಮ್ಮ ಅಸ್ತ್ರ.
ಹೆದರದಿರಿ ಕಾಮ್ರೇಡ್‌ಗಳೇ

ಛುಸುಗುಡುವ ಹಿಟ್ಲರ್ ಸರ್ಪಕ್ಕೆ-
ಉರುಳುವ ಪ್ರತಿ ಇರುಳು ನೇಯುವುದು ಬೆಳಕ ಬಳ್ಳಿ
ಬಳಲದಿರಿ ಗಲ್ಲುಗಂಭಗಳಲಿ ಗುಲಾಬಿಯರಳುವುದು.
ಗೆಳೆಯರೇ ನೆನಪಿರಲಿ
ವಧಾ ಸ್ಥಾನದಲ್ಲಿಯೇ ಪಾರಿವಾಳದ ಗೂಡು
ನನ್ನ ಪ್ರಾಣ ಪಕ್ಷಿ
ಸಾಕಿಕೊಳ್ಳಿ ಕಣ್ಣಲ್ಲಿ ಕಣ್ಣಿಟ್ಟು ನಿಮ್ಮ ಮನೆ ಮನಗಳಲ್ಲಿ
ನನ್ನ ನಾಡಲ್ಲಿ.

ಎರಡು ಕವನಗಳು

---

೧. ಆ ಹುಡುಗ

—ಪ್ರತಿಭಾ ನಂದಕುಮಾರ

ನಾಯಿಯ ಬಗ್ಗೆ ಬರೆಯುವುದರೆಂದರೆ
ಬೊಗಳುವಂತೆ ಅನ್ನುತ್ತಿದ್ದ ಆ ಹುಡುಗ
ಮೈಗೆಲ್ಲ ಕಜ್ಜಿ ತುರಿಕೆ ಉಣ್ಣೆ ಹತ್ತಿಕೊಳ್ಳುತ್ತವೆನ್ನುತ್ತಿದ್ದ.
ಸೂತ್ರ ಕಿತ್ತ ಗಾಳಿಪಟದ ಹಿಂದೆ ದೌಡಾಯಿಸಿದ ಆ ಹುಡುಗ
ಜೇನು ನೊಣ ಹಿಂಬಾಲಿಸಿ ಹುಟ್ಟಿಗೆ ಕೈ ಹಾಕಿದ
ನೀಲಿ ಸೂರ್ಯನ ಜಡೆಯೇ ಬೆಳದಿಂಗಳ ರಾತ್ರಿ ಎಂದು ಹಠಹಿಡಿದ
ಕಿಟಕಿಯಲ್ಲಿ ಕಂಡ ಮುಖಕ್ಕೆ ಮೂಗುಬೊಟ್ಟಿತ್ತೇ ಎಂದು ಕನವರಿಸಿದ.
ರಾತ್ರಿ ಕಳೆದು ಬೆಳಗಾಗುವಾಗ
ಬರೆದದ್ದೆಲ್ಲ ಬೊಗಳೇ ಬೊಗಳೇ
ಹರಿದು ಚಿಂದಿಯಾಗುವಂತೆ ಕಚ್ಚಿ ತಿಂದು
ನಿಮಿಷದಲ್ಲಿ ಜೀರ್ಣವಾದ ಆ ಹುಡುಗ.

೨. ಆ ಹುಡುಗಿ

ದಿಗಂತದಲ್ಲಿ ಕೂಡುತ್ತವಂತೆ ಆಕಾಶ ಭೂಮಿ
ಈ ನೆಲದ ಹಸಿರು ಪ್ರತಿಫಲಿಸಿ
ಸೂರ್ಯನ ಬಣ್ಣ ಬದಲಾದಾಗ.

ತೇಲಿ ಹೋಗುತ್ತ ವಂತೆ ಕನಸುಗಳು
ಪುಟ್ಟ ಹಕ್ಕಿಯು ಸೀಲಿಯಲ್ಲಿ
ಕಲಸಿ ರಾಡಿಯಾಗುವ ಸುರಿವ ಮಳೆಯಲ್ಲಿ.

ಚಿಗುರೊಡೆಯುತ್ತದಂತೆ ಪುಳಕದ ಕುಡಿ
ಹೊಳೆಯ ತೆರೆಯಲ್ಲಿ ಮೀನುಗಳು
ಪುಳಕ್ಕನೆ ಹೊರ ಬಂದ ಗಳಿಗೆಯಲ್ಲಿ.

ಹೂ ಮಂಚದ ತೆಪ್ಪದಲ್ಲಿ ಪಾತಾಳಕ್ಕೆ ಪ್ರಯಾಣ
ಕುಂಚದ ಗೆರೆಯ ಇಂದ್ರ ಚಾಪದಲ್ಲಿ
ಕರಗಿ ಒಂದಾಗುವ ಆ ಹುಡುಗಿ.

ಹರಿದು ಹೋದಳು ಹೊಳೆಯಲ್ಲಿ ಮೀನಾಗಿ
ಹರಡಿಕೊಂಡಳು ಸಾಕ್ಷಿಯ ಬಾನಾಗಿ
ತುಂಬಿಕೊಂಡಳು ಎದೆಯಲ್ಲಿ ಅಮೃತವಾಗಿ.

ಮೋಡಗಳ ಹಿಡಿಯೋಣ ಬನ್ನಿ

—ಜಿ. ಪಿ. ಬಸವರಾಜು

೧

ಮೋಡಗಳ ಹಿಡಿಯೋಣ ಬನ್ನಿ
ಹಾಡುಗಳ ಕಟ್ಟೋಣ ಬನ್ನಿ

ಬಿಳಿಯ ಮೋಡಗಳಲ್ಲಿ
ಹಗುರಾಗಿ ಹಾರೋಣ;

ಹಳೆಯ ರಾಗಗಳಲ್ಲಿ
ಮೈಮರೆತು ಹಾಡೋಣ;

ಮೋಡಗಳ ಗೂಡುಗಳಲ್ಲಿ
ಮನೆಮಾಡಿ ಕುಳಿತ
ನೀರ ಹಕ್ಕಿಯ ಹೊತ್ತು ತರೋಣ;

ಬಿರಿದ ನೆಲದಲ್ಲಿ
ಜೀವರಸ ಹರಿದು
ಹಸಿರು ಹಾಡಾಗುವುದ ನೋಡೋಣ.

೨

ಗಾಳಿ ಕುದುರೆ ಸವಾರಿ
ಗುಟ್ಟ ಮಟ್ಟೆಗಳ ಏರಿ
ಬೆಟ್ಟಗಳ ನೆತ್ತಿಯ ಮೆಟ್ಟಿ
ಅನಂತ ನೀಲಿಯಲಿ ಅರಳುವ
ಬಿಳಿ ಬಿಳಿ ಹೂವುಗಳ
ಗೊಂಚಲು ಗೊಂಚಲು ಕೊಯ್ಯೋಣ
ಭೂಮಿ ಕಣ್ಣ ಅಳತೆಯಲ್ಲಿ
ಬಾಹು ತೆರೆದು ಬಾನಿನಲ್ಲಿ
ತೇಲೆ ತೇಲುವ
ತೇಲುಂಗಣ್ಣನ ಹಾಡುಗಳ
ಚಂದ ಚಂದ ಮೋಡಗಳ
ಹಿಡಿಯೋಣ ಬನ್ನಿ.
ರೆಕ್ಕೆ ಬಿಚ್ಚಿದ ಕನಸುಗಳು
ಕೊಳೆ ತೊಳೆದ ಸ್ವಚ್ಛ ಜೀವಗಳು
ನೆಲ ಬಿಟ್ಟೆದ್ದು ಮತ್ತೆ ಬಿದ್ದು
ಎದೆಗಂಟಿ ಜೀವ ಬೆರೆಸಿ
ಅಂಟಿದ ನಂಟಿನ ನೆನಪಲ್ಲೆ
ಮೇಲೆ ಮೇಲೆ ತೇಲುವ
ಕರುಳ ಬಳ್ಳಿಗಳು ;
ಆಕಾರವಿಲ್ಲದ ಅಂಬರಕ್ಕೆ
ಆಕಾರ ಬರೆಯುತ್ತ
ತಿಳಿನೀಲಿ ಮುಖದಲ್ಲಿ
ಬಿಳಿಹಲ್ಲು ತೋರುತ್ತ
ಎಲ್ಲೂ ನಿಲ್ಲದೆ
ಮನೆಯನೆಂದೂ ಕಟ್ಟದೆ
ಸಾಗಿ ಸಾಗಿ ಹೋಗುವ ಮೋಡಗಳೇ

ಹಂಬಲಿಸಿ ಕೈಚಾಚಿದ ಹಾಡುಗಳೇ
ನಮ್ಮ ಕೈಗೂಡದ ಕನಸುಗಳೇ...
ಬನ್ನಿ
ಮೋಡಗಳ ಹಿಡಿಯೋಣ
ಹಾಡುಗಳ ಕಟ್ಟೋಣ.

ಗುಟ್ಟುಗಳು

—ದುರ್ಗಾಸುತೆ

ವರ್ತಮಾನಕ್ಕೆ ಕೊಂಡಿ ಹಾಕುತ್ತಲೇ
ಭವಿಷ್ಯತ್ತಿಗೆ ಲಗ್ಗೆ ಹ ಕುವ ಗುಟ್ಟುಗಳೇ
ನಿಮ್ಮನ್ನು ಎಲ್ಲಿಡಲಿ ಹೇಳಿ ? ಕಣ್ಣುಗಳಲ್ಲೇ ?
ಹೊಳೆಹೊಳೆದು ನರ್ತಿಸಿ ರಟ್ಟಾಗಿಸುವಿರಿ ನೀವು
ಹೃದಯದಲ್ಲೇ ?
ಅದನು ಚೂರು ಚೂರಾಗಿಸುವಿರಿ ನೀವು
ಹೊತ್ತಿಗೆಯಲ್ಲೆ ? ದಾಖಲಾಗುವಿರಿ ನೀವು
ವಿರಹಿ ಎದೆಯಲ್ಲಿ ಕೂತು ಕಾಡುವಿರಿ ನೀವು
ಜೀವನ ಕಡಲಲ್ಲಿ ಈಜು ಕಲಿಯದಾದಾಗ
ಬಿರುಗಾಳಿ, ಅಪ್ಪಳಿಸುವ ತೆರೆ
ಒಂಟಿತನದ ಸುಳಿ, ಭಾವಗಳಿಗೆಲ್ಲ
ಬಿಡದ ಕಲಿಸುವಿರಿ ಪಾಠವನ್ನು ಗುಟ್ಟಾಗಿ
ಹೆಪ್ಪಿಟ್ಟ ಭಾವಗಳು ಸಡಿಲಾಗಿ, ಸಿಡಿಲಾಗಿ
ಹೊರಹೊಮ್ಮಲು, ಗುಟ್ಟುಗಳೇ ನೀವಿನ್ನು ನಿಲ್ಲುವುದುಂಟೇನು ?
ಸಾಗರದಾಳದಲ್ಲಿನ ಅಗೋಚರ
ಅಸಂಖ್ಯಾತ ಜಲಬಿಂದುಗಳಂತೆ
ಎಲ್ಲಿ ಹುಟ್ಟುವಿರಿ ? ಎಲ್ಲಿ ಕರಗುವಿರಿ ?
ಯಾಕಿಂತು ಕಾಡುವಿರಿ ಹೇಳಿ ?

ಗಾಳಿಪಟ

–ಕೆ. ಎಂ. ಮುನಿಕೃಷ್ಣಪ್ಪ

ನಾನೊಂದು ಗಾಳಿಪಟ ನನಗೊಂದು ಬಾಲಂಗೋಚಿ
ಇದೆ ಹಾರುತ್ತೇನೆ, ಹಾರಾಡುತ್ತೇನೆ ವೈಯ್ಯಾರವಾಗಿ
ಹಕ್ಕಿಗಳ ನೋಡಿ ಕಿಲಕಿಲ ನಗುತ್ತೇನೆ ಅವೋ
ನನ್ನತ್ತ ನೋಡಿ ಮುಂದುವರಿಯುತ್ತವೆ.
ನೆಲದ ಮೇಲೆ ನಿಂತವರು ಮರ ಹತ್ತಿ ಕೂತವರು
ಹಕ್ಕಿಗಳ ರೆಕ್ಕೆಗಳೊಳಗೇ ಹುದುಗಿಕೊಂಡವರು
ಉಪಾಯವಾಗಿ ನನ್ನ ಕರೆದು ಹೊಗಳುತ್ತಾರೆ
ಹಾರಾಟ ಚೆಂದವೆಂದು ಏನೇನೊ ಉಸುರುತ್ತಾರೆ
ನಾನು ಉಬ್ಬಿಬಿಡುತ್ತೇನೆ ; ಹಗುರಾಗಿಬಿಡುತ್ತೇನೆ.
ಅವರು ನನಗೆ ಟಾಟಾ ಮಾಡುತ್ತಾರೆ ಹಲ್ಕಿರಿದು
ಬೀಳ್ಕೊಡುತ್ತೇನೆ ಎಷ್ಟು ಒಳ್ಳೆಯ ಜನ
ಹಾರಾಟ ಗಮನಿಸಿ ಹೊಗಳುವ ಹೃದಯ ವೈಶಾಲ್ಯ
ಎಷ್ಟು ಜನರಿಗಿದ್ದೀತು? ಸಿಹಿ ಹಂಚಬೇಕು ಆ ಬಾಯಿಗಳಿಗೆ
ಸಿಹಿ ತರಿಸುವೆ ಬೇಗ ವಿತರಿಸಬೇಕು.
ಅಯ್ಯೋ...ಹಾರಲಾಗುತ್ತಿಲ್ಲ ನನ್ನ ಬಾಲಂಗೋಚಿ
ಕಳವಾಗಿದೆ ಯಾರೋ ಕದ್ದು ತಮ್ಮ ಚೆಡ್ಡಿಜೇಬಿಗಿಳಿಸಿದ್ದಾರೆ
ಆ ದೊಡ್ಡ ಮನುಷ್ಯರದೇ ಇರಬೇಕು ಈ ಕೆಲಸ.
ಮೇಲೆ ನೋಡುತ್ತೇನೆ ಹಕ್ಕಿಗಳು ಸರಾಗ ಹಾರುತ್ತಿವೆ
ನನ್ನತ್ತ ಒಂದು ನೋಟ ಒಗೆದು ಕಣ್ಣು ಹೊಡೆಯುತ್ತಿವೆ
ಎದೆ ಭಾರವೆನಿಸಿ ಮುದುಡಿಕೊಳ್ಳುತ್ತೇನೆ.
ಕಣ್ಣ ಕಿತ್ತು ನೆಲದ ಮೇಲಿಟ್ಟು ಸಿಹಿ ಪೊಟ್ಟಣದತ್ತ
ಹೊರಳಿಸುತ್ತೇನೆ. ಕೆಲವು ನೊಣಗಳು ಹಾಗು
ಅಸಂಖ್ಯಾತ ಇರುವೆಗಳು ಅಲ್ಲಿ ಆವರಿಕೊಂಡಿವೆ.
ನಿಲ್ಲುತ್ತೇನೆ ಎದೆ ಸೆಟೆಸಿ
ಈಗ ಬಾಲಂಗೋಚಿ ಇಲ್ಲ
ಆದರೂ
ನಾನೊಂದು ಗಾಳಿಪಟ,

ಓದುಗನ ಸಾವು

ಬಂಗಾಲಿ ಮೂಲ: **ಬನ್ ಫೂಲ್**
ಬಂಗಾಳಿಯಿಂದ ಅನುವಾದ: **ಜಿ. ಕುಮಾರಪ್ಪ**

ಬಹುಶಃ ಹತ್ತು ವರ್ಷಗಳ ಹಿಂದಿನ ಮಾತು.

ಅಸನ್‌ಸೋಲ್ ಸ್ಟೇಷನ್ನಿನಲ್ಲಿ ರೈಲಿಗಾಗಿ ಕಾಯುತ್ತಾ ಕುಳಿತಿದ್ದೆನು. ನನ್ನ ಪಕ್ಕದಲ್ಲೇ ಮತ್ತೊಬ್ಬರು ಕುಳಿತಿದ್ದರು. ಅವರ ಕೈಯಲ್ಲಿ ಒಂದು ಪುಸ್ತಕ. ದಪ್ಪನೆಯ ಕಾದಂಬರಿ. ಪರಿಚಯದ ಮಾತಿನ ನಂತರ ಅದೂ ಇದೂ ಮಾತನಾಡುತ್ತಾ ಕುಳಿತಂತೆ, ರೈಲಿಗಾಗಿ ಇಡೀ ದಿನ ಅವರು ಕಾಯಬೇಕಾಗಿದೆ ಎಂದು ತಿಳಿಯಿತು.

ನಾನು ಕಾಯುತ್ತಿದ್ದ ರೈಲು ಮೂರು ಗಂಟೆ ತಡ. ನಾವಿಬ್ಬರೂ ಬಂಗಾಲಿ.

ಐದು ನಿಮಿಷಗಳ ನಂತರ ನಾನು ಅವರನ್ನು ಕೇಳಿದೆ, "ನಿಮ್ಮಲ್ಲಿರೋ ಪುಸ್ತಕಾನ ಒಮ್ಮೆ ನೋಡಬಹುದೇ ?"

"ಓಹೋ, ಅದಕ್ಕೇನಂತೆ ನೋಡಿ."

ನಾನೂ ಇದೇ ಉತ್ತರವನ್ನು ನಿರೀಕ್ಷಿಸಿದ್ದೆ. ಕೂಡಲೇ ಪುಸ್ತಕವನ್ನು ಹಿಡಿದು ಕೊಂಡು ಕುಳಿತೆ. ಬೇಸಿಗೆಯ ಬಿರು ಬಿಸಿಲು. ಅಸನ್‌ಸೋಲ್ ರೈಲ್ವೇ ನಿಲ್ದಾಣದ ತಗಡಿನ ಸೂರು. ಪುಸ್ತಕದ ಮಾಲಿಕ ಒಮ್ಮೆ ಕಿರುಗಣ್ಣಿನಲ್ಲಿ ನನ್ನನ್ನು ನೋಡಿ, ಹುಬ್ಬುಗಳನ್ನು ಸಂಕುಚಿಸಿ, ರೈಲ್ವೇ ಟೈಂ ಟೇಬಲ್ ತೆಗೆದು ಗಮನಿಸಲಾರಂಭಿಸಿದ. ಕಾದಂಬರಿ ಅದ್ಭುತವಾಗಿದ್ದಿತು. ನಾನೂ ಆತುರಾತುರವಾಗಿ ಓದಲಾರಂಭಿಸಿದೆ ಅದ್ಭುತವಾದ ಕಾದಂಬರಿ.

ನಾನು ಈ ಮೊದಲು ಇಷ್ಟು ಒಳ್ಳೆಯ ಕಾದಂಬರಿಯನ್ನು ಓದಿರಲೇ ಇಲ್ಲ. ಲೇಖಕ ತುಂಬಾ ಸೊಗಸಾಗಿ ಬರೆದಿದ್ದಾನೆ. ಎರಡು ಗಂಟೆಯಾಯಿತು.

ಪಕ್ಕದಲ್ಲಿ ಕುಳಿತಿದ್ದ ಪುಸ್ತಕದ ಮಾಲಿಕ ಟೈಂ ಟೇಬಲನ್ನು ಮೇಲೆ ಕೆಳಗೆ ಹಿಡಿದು ನೋಡುತ್ತಾ, ಸಾಕಾಗಿ, ಕೊನೆಗೆ ನನ್ನ ಕಡೆ ತಿರುಗಿ ಹೇಳಿದರು–"ಇನ್ನು ನಿಮ್ಮ ರೈಲು ಹೆಚ್ಚು ತಡವಾಗುವುದಿಲ್ಲ...." ಮುಂದೇನನ್ನೂ ಹೇಳದೆ ಗಂಟಲಲ್ಲೇ ಗೊರ ಗೊರ ಸದ್ದು ಮಾಡಿದರು. ಆಗಲೂ ನಾನು ಪುಸ್ತಕದಲ್ಲಿ ತನ್ಮಯನಾಗಿದ್ದೆನು.

ಚಕಿತನಾಗಿ ಕೈಗಡಿಯಾರದ ಕಡೆ ನೋಡಿದೆ. ಇನ್ನೂ ಒಂದು ಗಂಟೆಯಷ್ಟು ಸಮಯವಿದೆ. ಆದರೆ ಪುಸ್ತಕದಲ್ಲಿ ಇನ್ನೂ ಅರ್ಧಕ್ಕೂ ಹೆಚ್ಚು ಮುಗಿಸಬೇಕಾಗಿದೆ. ಮಾತನಾಡುತ್ತಾ ಸಮಯ ಕಳೆಯಲು ಇಷ್ಟಪಡಲಿಲ್ಲ. ಬೇಗ ಬೇಗನೆ ಓದಲಾರಂಭಿಸಿದೆ. ಅದ್ಭುತವಾದ ಪುಸ್ತಕ. ಬಾಕಿ ಒಂದು ಗಂಟೆಯೂ ಕಳೆಯಿತು. ನಾನು ಕಾಯುತ್ತಿದ್ದ ರೈಲಿಗಾಗಿ ಗಂಟೆಯ ಸದ್ದೂ ಆಯಿತು. ಇನ್ನೂ ಪುಸ್ತಕ ಬಹಳಷ್ಟು ಬಾಕಿ. ಕುತೂಹಲ ನನ್ನಲ್ಲಿ ಇನ್ನೂ ಹೆಚ್ಚಾಗುತ್ತಲೇ ಇತ್ತು.

"ಮುಂದಿನ ಗಾಡಿಯಲ್ಲಿ ಹೋಗುತ್ತೇನೆ. ಈ ಪುಸ್ತಕ ಮುಗಿಸದೆ ಏಳಲಾರೆ" ಎಂದೆ.

ಪುಸ್ತಕದ ಮಾಲಿಕ ಅವಾಕ್ಕಾಗಿ ನನ್ನನ್ನೇ ನೋಡಿದ. ರೈಲು ಹೊರಟೇ ಹೋಯಿತು. ಪುಸ್ತಕ 'ಓದುವುದ'ರಲ್ಲೇ ಮಗ್ನನಾಗಿದ್ದೆನು. ಆದರೆ, ಕಾದಂಬರಿಯನ್ನು ಮುಗಿಸಲಾಗಲೇ ಇಲ್ಲ. ಪುಸ್ತಕದಲ್ಲಿ ಕೊನೆಯ ಎಷ್ಟೋ ಹಾಳೆಗಳು ಇರಲೇ ಇಲ್ಲ. ಪುಸ್ತಕದ ಒಡೆಯನ ಕಡೆ ತಿರುಗಿ ಕೇಳಿದೆ.

"ಅಲ್ರಿ, ಪುಸ್ತಕದ ಕೊನೆಯ ಎಷ್ಟೋ ಹಾಳೆಗಳೇ ಇಲ್ಲ. ಮೊದಲೇ ಯಾಕ್ರಿ ಹೇಳಲಿಲ್ಲ. ಛೆ, ಛೇ."

ಇದಕ್ಕೆ ಉತ್ತರವೆನ್ನುವಂತೆ ಆ ಮಹಾಶಯ ಏನನ್ನೂ ಮಾತನಾಡದೆ ನನ್ನನ್ನೇ ನೋಡಲಾರಂಭಿಸಿದ. ಹಣೆಯ ಪಕ್ಕದಲ್ಲಿ ಎರಡೂ ನರಗಳು ಉಬ್ಬಿ ಕಾಣಿಸುತ್ತಿದ್ದವು.

೨

ಹತ್ತು ವರ್ಷಗಳ ನಂತರ ಅದೇ ಪುಸ್ತಕ ಮತ್ತೆ ನನ್ನ ಕೈಗೆ ಸಿಕ್ಕಿತು. ನನ್ನ ತಂಗಿಯನ್ನು ಅವಳ ಅತ್ತೆಯ ಮನೆಗೆ ಕಳುಹಿಸಲು ಹೋಗಿದ್ದೆನು...ಅದೇ ದಿನ ಹಿಂತಿರುಗಿ ಬರಬೇಕೆಂದುಕೊಂಡಿದ್ದೆ. ಆದರೆ ಪುಸ್ತಕ ಓದಬೇಕೆನ್ನುವ ಆಸೆಯಿಂದ ಅಲ್ಲಿಯೇ ಉಳಿದುಕೊಂಡೆ.

ಪುಸ್ತಕ ತೆಗೆದುಕೊಂಡು, ನಿಧಾನವಾಗಿ ಮೊದಲಿನಿಂದ ಓದಲಾರಂಭಿಸಿದೆ.

ಕೆಲವು ಪುಟಗಳನ್ನಷ್ಟೇ ಓದಿದ್ದೆನು. ಯಾಕೋ ಅನುಮಾನವಾಯಿತು. ಪುಸ್ತಕದ ಹಾಳೆಗಳನ್ನು ಮಗುಚಿ ನೋಡಿದೆ. 'ಹ್ಞಾ ಅದೇ ಪುಸ್ತಕ.'

ಮತ್ತೆ ಕೆಲವು ಪುಟಗಳನ್ನು ಓದಿದೆ. 'ಇಲ್ಲ ಎಲ್ಲೋ ಏನೋ ತಪ್ಪಿದೆ' ಎನ್ನಿಸಲಾರಂಭಿಸಿತು. ಮತ್ತೂ ಓದಲಾರಂಭಿಸಿದೆ.

ಮತ್ತೆ ಕೆಲ ಹೊತ್ತಿನ ನಂತರ 'ಇಲ್ಲ, ಇನ್ನು ಓದಲು ಸಾಧ್ಯವೇ ಇಲ್ಲ' ಎನ್ನಿಸಿತು.

ಇದು ಅದೇ ಪುಸ್ತಕವೇ. ಯಾವ ಪುಸ್ತಕವನ್ನು ನಾನು ಅಸನ್‌ಸೋಲ್‌ನ ರೈಲು ನಿಲ್ದಾಣದಲ್ಲಿ ಬೇಸಿಗೆಯ ಬಿರು ಬಿಸಿಲಿನಲ್ಲಿ ಅವಸರವಸರವಾಗಿ ಓದಿದ್ದೆನೋ ಅದೇ....

'ಯಾವುದೇ ವ್ಯಕ್ತಿ ಇಷ್ಟೊಂದು ಕಳಪೆ ಪುಸ್ತಕ ಬರೆಯಲು ಸಾಧ್ಯವೇ ?' ಎನ್ನಿಸಿತು.

ಇದನ್ನು ಓದಿ ಮುಗಿಸುವುದು ಅಸಂಭವವೇ ಸರಿ. ಕಾದಂಬರಿಯೊಂದಿಗೆ ಸ್ಪಂದಿಸಲಾಗುತ್ತಲೇ ಇಲ್ಲ.

ಹತ್ತು ವರ್ಷಗಳ ಹಿಂದೆ ನನ್ನಲ್ಲಿದ್ದ ಓದುಗ ಯಾವಾಗಲೋ ಸತ್ತು ಹೋಗಿದ್ದನು.

ಈ ಬಾರಿಯೂ ಪುಸ್ತಕವನ್ನು ಪೂರ್ತಿ ಮುಗಿಸಲಾಗಲಿಲ್ಲ.

ಬನ್‌ಫೂಲ್ :

'ಬನ್‌ಫೂಲ್' ಕಾವ್ಯ ನಾಮದಿಂದ ಬಂಗಾಲಿ ಸಾಹಿತ್ಯದಲ್ಲಿ ಪ್ರಸಿದ್ಧರಾದ ಶ್ರೀ ಬಲಯ ಚಂದ್ ಮುಖ್ಯೋಪಾಧ್ಯಾಯ (1899-1979) ಅವರು ವೃತ್ತಿಯಿಂದ ಡಾಕ್ಟರ್. ಮೂಲತಃ ಇವರು ಕಾದಂಬರಿಕಾರರು. ತೃಣಖಂಡ, ಕಿಚುಕ್ಷಣ್ (ಕೆಲವು ಕ್ಷಣ), ಸೆ ಓ ಅಮಿ (ಅದು ತಾನೇ), ಮೃಗಯಾ, ನವದಿಗಂತ, ಮಾನದಂಡ—ಇವು ಅವರ ಕೆಲವು ಕಾದಂಬರಿಗಳು. ಸ್ಥಾವರ (1951) ಮತ್ತು ಜಂಗಮ (1943) ಎರಡೂ ಕಾದಂಬರಿಗಳು ಇವರ ಸುಪ್ರಸಿದ್ಧ ಕಾದಂಬರಿಗಳು.

ಬಂಗಾಲಿ ಸಾಹಿತ್ಯದ ಕಿರುಗತೆಗಳ ಕ್ಷೇತ್ರದಲ್ಲಿ ಬನ್‌ಫೂಲರದು ಬಹು ದೊಡ್ಡ ಹೆಸರು. ಸುಮಾರು ಮುನ್ನೂರಕ್ಕೂ ಹೆಚ್ಚು ಪುಟ್ಟ ಪುಟ್ಟ ಕಥೆಗಳನ್ನು ರಚಿಸುವುದರ ಮೂಲಕ ಬಂಗಾಲಿ ಕಿರುಗತೆಗಳಿಗೆ ಹೊಸ ಆಯಾಮವನ್ನು ನೀಡಿದ್ದಾರೆ. ಚಿಕ್ಕ ಚಿಕ್ಕ ವಾಕ್ಯಗಳು, ಸರಳ ಪದಗಳು ಹಾಗೂ ನೇರ ಕಥನಗಳಿಗಾಗಿ ಇವು ಕಥಾ ಸಾಹಿತ್ಯದಲ್ಲಿಯೇ ಅಪೂರ್ವವಾದವುಗಳಾಗಿವೆ. ಇವರ ಈ ಬಗೆಯ ಕಿರುಗತೆಗಳನ್ನು 'ಬನ್‌ಫೂಲೇರ್ ಗಲ್ಪ ಸಂಗ್ರಹ' (ಬನ್‌ಫೂಲ್‌ರ ಕಥಾ ಸಂಗ್ರಹ) ಎನ್ನುವ ಮೂರು ಸಂಪುಟಗಳಲ್ಲಿ ಪ್ರಕಟಿಸ ಲಾಗಿದೆ. ಇಲ್ಲಿನ ಎರಡೂ ಕಥೆಗಳನ್ನು ಈ ಸಂಗ್ರಹದ ಮೊದಲ ಸಂಪುಟದಿಂದ ಆಯ್ದು ಕೊಳ್ಳಲಾಗಿದೆ. ಅವು 'ಏಕ್ ಫೊಟಾಗಲ್ಪ (ಒಂದು ಪುಟ್ಟ ಕಥೆ—ತಾಯಿ) ಹಾಗೂ ಪಾಠಕೇರ್ ಮೃತ್ಯು' (ಓದುಗನ ಸಾವು).

ಸಮಾಜ-ಚಿಕಿತ್ಸಕ ಅಂಬೇಡ್ಕರ್

ಅಸ್ಪೃಶ್ಯತೆಯ ನಿರ್ಮೂಲನಕ್ಕೆ ಪಟ್ಟು ಹಿಡಿದು, ನಿಮ್ನ ಜಾತೀಯರ ಸಮಸ್ಯೆಗಳನ್ನು ಆಮೂಲಾಗ್ರ ಅರ್ಥ ಮಾಡಿಕೊಂಡು ಅವುಗಳನ್ನು ರಾಷ್ಟ್ರ ನಾಯಕರಿಗೆ ಸಮರ್ಥವಾಗಿ ಮನವರಿಕೆ ಮಾಡಿಕೊಟ್ಟ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಜನ್ಮಶತಾಬ್ದಿಯ ವರ್ಷದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯವೂ ತನ್ನ ಗೌರವವನ್ನು 'ಸಮಾಜ-ಚಿಕಿತ್ಸಕ ಅಂಬೇಡ್ಕರ್' ಕೃತಿಯ ಮೂಲಕ ಅರ್ಪಿಸಿದೆ. ಬಾಬಾ ಸಾಹೇಬರ ಈ ಸಂಕ್ಷಿಪ್ತ ಜೀವನ ಕಥನಕ್ಕೆ ಅವರ ನಿಕಟವರ್ತಿಯಾಗಿದ್ದ ಶ್ರೀ ದತ್ತೋಪಂತ ಠೇಂಗಡಿ ಅವರ ಪ್ರಸ್ತಾವನೆಯು ಒಳ್ಳೆಯ ನೆಲಗಟ್ಟನ್ನು ಒದಗಿಸಿದೆ.

10 ಅಧ್ಯಾಯಗಳಲ್ಲಿ ಡಾ॥ ಅಂಬೇಡ್ಕರರ ಬದುಕಿನ ಸ್ಥೂಲ ಚಿತ್ರವನ್ನು ಸಂಗ್ರಹಿಸಿಕೊಡುವಲ್ಲಿ ಚಂದ್ರಶೇಖರ ಭಂಡಾರಿ ಮತ್ತು ಎಸ್. ಆರ್. ರಾಮಸ್ವಾಮಿ ಅವರು ಯಶಸ್ವಿಯಾಗಿದ್ದಾರೆ. ಆಡಂಬರವಿಲ್ಲದ ಭಾಷೆಯಿಂದಾಗಿ ಗ್ರಂಥದ ಗುರಿಯು ಸುಲಭ ಗ್ರಾಹ್ಯವಾಗಿದೆ. 'ಸಮಾಜ-ಚಿಕಿತ್ಸಕ ಅಂಬೇಡ್ಕರ್' ಕೃತಿಯನ್ನು ಓದಿದ ನಂತರ ಡಾ॥ ಅಂಬೇಡ್ಕರ್ ಅವರ ಬಗೆಗೆ ಆಮೂಲಾಗ್ರವಾಗಿ ತಿಳಿಯುವ ಕುತೂಹಲ ಕೆರಳಿ, ಗಂಭೀರಾಸಕ್ತಿ ಬೆಳೆದರೆ ಆಶ್ಚರ್ಯಪಡಬೇಕಾಗಿಲ್ಲ.

ಡಾ॥ ಅಂಬೇಡ್ಕರ್ ಅವರ ಭಾಷಣಗಳಿಂದ, ಗ್ರಂಥಗಳಿಂದ ಸಂಗ್ರಹಿಸಿರುವ ಉಲ್ಲೇಖಗಳ ಜೊತೆಗೆ ಹಲವಾರು ಸಮಕಾಲೀನ ರಾಷ್ಟ್ರ ನಾಯಕರ ಅಭಿಪ್ರಾಯಗಳ ದಾಖಲೆಗಳ ಮೂಲಕ ಡಾ॥ ಅಂಬೇಡ್ಕರ್ ಅವರ ವ್ಯಕ್ತಿತ್ವದ ವೈಶಿಷ್ಟ್ಯತೆಯ ಸ್ಥೂಲ ಪರಿಚಯ ಮಾಡಿಕೊಡುವಲ್ಲಿ ಈ ಕೃತಿಯು ಸಫಲವಾಗಿದೆ.

ಡಾ॥ ಅಂಬೇಡ್ಕರ್ ಅವರ ಬದುಕಿನ ಪಕ್ಷಿನೋಟ ನೀಡುವ ಈ ಕೃತಿಯು ನಿಮ್ನ ಜಾತೀಯರ ನಾಯಕನಾಗಿ, ಅವರ ಹಿತರಕ್ಷಣೆಯ ಸಲುವಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಎದುರಿಸಿದ ಅಡ್ಡಿ ಆತಂಕಗಳು, ಪಡೆದ ಗೆಲುವುಗಳ ಸ್ಪಷ್ಟ ಚಿತ್ರಣ ನೀಡಿದೆ. ವ್ಯಕ್ತಿಯಾಗಿ, ಶಕ್ತಿಯಾಗಿ ಡಾ॥ ಅಂಬೇಡ್ಕರ್ ಅವರು ಅನುಭವಿಸಿದ ನೋವು-ನಲಿವುಗಳ ರೇಖಾಚಿತ್ರಣ ಈ ಕೃತಿ.

ನಿಮ್ನ ಜಾತಿಯಲ್ಲಿ ಹುಟ್ಟಿ, ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಉನ್ನತಿಗಾಗಿ

ಇಡೀ ಬದುಕು ಶ್ರಮಿಸಿದ ಡಾ|| ಅಂಬೇಡ್ಕರ್ ಅವರು ತಮ್ಮ ಸ್ವಂತ ಬದುಕಿನಲ್ಲೂ ನೋವನ್ನು, ಅವಮಾನಗಳನ್ನು ಅನುಭವಿಸಿದವರು. ಬಡತನದಲ್ಲೇ ಶಿಕ್ಷಣ ಮುಂದು ವರಿಸಿ, ಉನ್ನತ ವಿದ್ಯಾಭ್ಯಾಸವನ್ನೂ ಪಡೆದ ಬಾಬಾಸಾಹೇಬರು ಉದ್ಯೋಗದ ಸಂದರ್ಭಗಳಲ್ಲೂ ನೊಂದವರು. ಈ ನೋವುಗಳೇ ಅವರು ನಿಮ್ನ ಜಾತೀಯರ ಉನ್ನತಿಗಾಗಿ ಶ್ರಮಿಸಿ, ಸಫಲರಾಗಲು ಕಾರಣವಾದುವು.

'ಮೇಧಾವಿ ಪ್ರಾಧ್ಯಾಪಕ, ಯಥಾರ್ಥವಾದಿ ಶಿಕ್ಷಣತಜ್ಞ; ಉಚ್ಚಕೋಟಿಯ ಅರ್ಥಶಾಸ್ತ್ರಜ್ಞ, ಸಮರ್ಥ ನ್ಯಾಯವಾದಿ; ಗಂಭೀರ ಗ್ರಂಥಲೇಖಕ; ದಲಿತ-ಪೀಡಿತ ಶೋಷಿತರಲ್ಲಿ ಕೀಳರಿಮೆಯ ಕೊರಗನ್ನು ದೂರಗೊಳಿಸಿದ ಹೋರಾಟಗಾರ ನಾಯಕ; ಅಭಿನವ ಸ್ಮೃತಿಕಾರ; ದೂರದರ್ಶಿತ್ವ ಹೊಂದಿದ ಸಮಾಜ ಸುಧಾರಕ' ಇತ್ಯಾದಿ ವರ್ಣರಂಜಿತ ಶಬ್ದಗಳಿಂದ ಪ್ರಶಂಸಿಸಿರುವ ಲೇಖಕದ್ವಯರ ಈ ಕೃತಿಯು ಡಾ||ಅಂಬೇಡ್ಕರ್ ಅವರ ಬದುಕಿನ ಸ್ಥೂಲ ಚಿತ್ರವನ್ನು ಮಾತ್ರ ಒದಗಿಸಲು ಸಾಧ್ಯವಾಗಿದೆ; ಸಮಗ್ರ ಪರಿಚಯ ಮಾಡಿಕೊಳ್ಳಲು ಪ್ರೇರಕವಾಗಿದೆ.

ಯಾವುದೇ ಶ್ರೇಷ್ಠ ವ್ಯಕ್ತಿಯನ್ನು ಆ ವ್ಯಕ್ತಿಯ ಜೀವನಾವಧಿಯ ನಂತರ ಯಾರೇ ಆದರೂ ತಮ್ಮ ಜೊತೆಗೆ, ತಮ್ಮ ತತ್ವಗಳ ಜೊತೆಗೆ ಸಮೀಕರಿಸಿಕೊಳ್ಳುವುದು ವಾಸ್ತವ. ಡಾ|| ಅಂಬೇಡ್ಕರ್ ಅವರ ತತ್ವಗಳನ್ನು ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ತತ್ವಗಳ ಚೌಕಟ್ಟಿನಲ್ಲೂ ಗುರುತಿಸುವ ಪ್ರಯತ್ನ ನಡೆಸುತ್ತವೆ. ಭಾವನಾತ್ಮಕ ಸಂಬಂಧಗಳೇ ಇಂತಹ ಪ್ರಯತ್ನಕ್ಕೆ ಕಾರಣಗಳು. 'ಸಮಾಜ-ಚಿಕಿತ್ಸಕ ಅಂಬೇಡ್ಕರ್' ಕೃತಿಯಲ್ಲಿ ಓದುಗರಿಗೆ ಡಾ|| ಅಂಬೇಡ್ಕರ್ ಅವರು ಹಲವೆಡೆ ಕಾಂಗ್ರೆಸ್ ವಿರೋಧಿ, ಕಮ್ಯುನಿಸ್ಟ್ ವಿರೋಧಿಯಾಗಿ ಕಂಡುಬಂದರೆ ಆಶ್ಚರ್ಯಪಡಬೇಕಾಗಿಲ್ಲ, ಹಿಂದು ಧರ್ಮವನ್ನು ತಿರಸ್ಕರಿಸುವ ಸಂದರ್ಭಗಳಲ್ಲೂ ಅದರ ಬಗ್ಗೆ ಒಳಗೆ ಪ್ರೀತಿ–ಹೊರಗೆ ದ್ವೇಷವನ್ನು ಗುರುತಿಸುವ ಪ್ರಯತ್ನಗಳೂ ಆಗುತ್ತವೆ.

ಡಾ। ಅಂಬೇಡ್ಕರ್ ಅವರನ್ನು ಕೇವಲ ಒಂದು ವರ್ಗದ ನಾಯಕರನ್ನಾಗಿ ಮಾತ್ರ ಗುರುತಿಸದೆ, ಭಾರತೀಯ ಸಂವಿಧಾನ ಶಿಲ್ಪಿಯಾಗಿ, ಮಾನವೀಯ ಮೌಲ್ಯಗಳಿಗೆ ತಮ್ಮ ಬದುಕನ್ನೇ ಮುಡುಪಿಟ್ಟ ಮಹಾನ್ ನಾಯಕರನ್ನಾಗಿ ಭಾರತೀಯ ಸಮಾಜವು ಗೌರವಿಸಬೇಕಾದ ಸಂದರ್ಭದಲ್ಲಿ ಬಂದಿರುವ 'ಸಮಾಜ-ಚಿಕಿತ್ಸಕ ಅಂಬೇಡ್ಕರ್' ಆರಂಭದ ಓದಿಗೆ ಉತ್ತಮ ಕೃತಿಯಾಗಿದೆ.

—ಎಚ್. ಎಸ್. ಗೋಪಾಲರಾವ್

(ಸಮಾಜ-ಚಿಕಿತ್ಸಕ ಅಂಬೇಡ್ಕರ್: ಲೇ: ಚಂದ್ರಶೇಖರ ಭಂಡಾರಿ, ಎಸ್. ಆರ್. ರಾಮಸ್ವಾಮಿ, ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು. ಪುಟ: 124, ಬೆಲೆ ರೂ. 10)

ಚಿಂತಾಮಣಿ ಅವರ "ಈ ಜಗತ್ತು"

ಚಿಂತಾಮಣಿ ಕೊಡ್ಲೆಕೆರೆ ಅವರ "ಈ ಜಗತ್ತು" ಕವನ ಸಂಕಲನ ಜೀವಂತಿಕೆಯಿಂದ ನಳನಳಿಸುವ ಹಲವು ಸಾಧ್ಯತೆಗಳ ಊರ್ಧ್ವಗಾಮಿ ಕವಿ ಪ್ರತಿಭೆಯನ್ನು ಪರಿಚಯಿಸುತ್ತದೆ. ಕೊಡ್ಲೆಕೆರೆ ಪ್ರವರ್ಧಮಾನಕ್ಕೆ ಬರುತ್ತಲಿರುವ ಕವಿ. ಕವಿಯ ಒಟ್ಟು ಧೋರಣೆ ಹಾಗೂ ಶೈಲಿ ಈ ಸಂಕಲನದಲ್ಲಿ ಸ್ಪಷ್ಟವಾಗುತ್ತದೆ. ಗಾಂಭೀರ್ಯ-ವಿನೋದ, ಅಭಿಜಾತ-ಗ್ರಾಮ್ಯ. ಛಂದೋಬದ್ಧ-ಸ್ವಚ್ಛಂದ ಛಂದ ಇತ್ಯಾದಿ ಅನೇಕ ವೈರುಧ್ಯಗಳು ಇರುವದು ಸಂಕಲನದ ಪ್ರಥಮ ಓದಿಗೇ ಕಾಣುವದರಿಂದ "ಈ ಪ್ರಥಮ ಸಂಕಲನ ಎಲ್ಲೇ ತೆರೆದು ಯಾವುದೇ ಕವನ ಓದಿದರೂ ಅದು ತನ್ನದೇ ಆದ ಸಿದ್ಧ ಶೈಲಿಯಿಂದ ನಮ್ಮನ್ನು ಮೋಹಗೊಳಿಸುತ್ತದೆ" ಎಂಬ ಮುನ್ನುಡಿಕಾರರ ಮಾತನ್ನು ಒಪ್ಪುವದು ಕಷ್ಟ.

ಸದ್ಯದ ಕನ್ನಡ ಕಾವ್ಯಕ್ಷೇತ್ರದ ವಾತಾವರಣ ಎಷ್ಟು ಕಾರಣವೋ ಅದಕ್ಕಿಂತ ಕವಿಯ ವೈಯಕ್ತಿಕ ನಿಲವು, ವ್ಯಕ್ತಿತ್ವ ಇದಕ್ಕೆ ಕಾರಣವೆನ್ನಬಹುದು. ಉದಾಹರಣೆಗೆ ಮುಗ್ಧತೆ-ಪ್ರಬುದ್ಧತೆಗಳ ದ್ವಂದ್ವ ಇಲ್ಲಿಯ ಅನೇಕ ಕವಿತೆಗಳ ಮೂಲಸ್ರೋತ್ರ: ಒಂದೆಡೆ ಕವಿ–

> "ಇಂದಿಗೂ ನಾನು ಅದೇ ಹುಡುಗ, ಗಡ್ಡ ಮೀಸೆ ಬಂದಿದ್ದು
> ನನಗಲ್ಲ, ನನ್ನ ದೇಹಕ್ಕೆ"

ಎಂದು ಹೇಳುವದು ತಮಾಷೆಗಾಗಿ ಅಷ್ಟೇ ಅಲ್ಲ, ಪ್ರಧಾನವಾಗಿ ಈ ಕಾರಣದಿಂದಾಗಿ ಇಲ್ಲಿಯ ಕವಿತೆಗಳಲ್ಲಿ ಕೆಲವು ಮಗು ಸಹಜ ಮುಗ್ಧತೆ, ಬೆರಗು, ಖುಷಿಗಳ ಅಭಿವ್ಯಕ್ತಿಯಾಗಿದ್ದರೆ, ಇನ್ನು ಕೆಲವು ಪ್ರೌಢ ಚಿಂತನೆಯ ಗಟ್ಟಿಕಾಳಿನಂತಿವೆ. ಇವೆರಡರ ಮಧ್ಯೆ ತೂಗುಯ್ಯಾಲೆ ಹೊಡೆಯುವಂಥವೂ ಕೆಲವಿವೆ.

'ಮಗೂ', 'ಬಾಗಿಲು ತೆಗೆ ಮಗೂ' ಮುಂತಾದ ಕವನಗಳು ಪರಿವರ್ತನೆ ಮತ್ತು ದ್ವಂದ್ವಗಳನ್ನು ನಾಟಕೀಯವಾಗಿ ಅನಾವರಣಗೊಳಿಸಿದರೆ 'ಶಪಥ', 'ಕತ್ತಲೆಗೊಂದು ಮಾತು', 'ಅಮಾವಾಸ್ಯೆಯ ದಿವಸ', 'ಮಣ್ಣು' ಮುಂತಾದ ಕವನಗಳು ಧೇನಿಸುವ ಪ್ರಕ್ರಿಯೆಯಲ್ಲಿ ಮೂರ್ತಗೊಳಿಸುತ್ತವೆ !

ಸುತ್ತಲಿನ ಬದುಕು ನಿಧಾನವಾಗಿ ಮಗುವಿನಲ್ಲಿರುವ ಸೃಜನಶೀಲತೆಯನ್ನು ಸ್ವಾಹಾ ಮಾಡುವ ವಿಧಾನವನ್ನು ನಾಟಕೀಯವಾಗಿ ಇಡುವದರಲ್ಲಿ ಇವರ ಕಾವ್ಯ

ಪ್ರತಿಭೆ ಮಿಂಚುತ್ತದೆ.

'ಮಣ್ಣು' ಕವನ ತನ್ನ ಲವಲವಿಕೆ, ಉಮೇದಿನಿಂದ ಲಘುಧಾಟಿಯಿಂದ,

ನಾನು ಭಾವ ನೀನು ಗೀತ
ನಾನು ರಾಮ ನೀನು ಸೀತ

ಸುರುವಾಗಿ ನಿಧ ನಿಧಾನವಾಗಿ ಸದ್ದಿಲ್ಲದೆ ಗಂಭೀರವಾಗುವದು; ಮಧ್ಯದಲ್ಲಿ

ಮಣ್ಣು ಹಣತೆಯದೊಂದು ಕತೆ
ಮಡಿಕೆಯದೊಂದು ನೀಳ್ಗತೆ
ಹೊಸಮನೆಯ ಗೋಡೆಯದೊಂದು ಕಾದಂಬರಿಯೇ ಇದೆ

ಎಂದು ರೂಪಕದಲ್ಲಿ ಬೆಳೆಯತೊಡಗಿದರೂ ಪತ್ತೆಹಚ್ಚದೆ ಕೊನೆಯಲ್ಲಿ ಅರ್ಥ ಪೂರ್ಣವಾಗುವ ರೀತಿ ವಿಸ್ಮಯ ಹುಟ್ಟಿಸುವದನ್ನು ನೋಡಿ :

ಬಜಾರಿನ ತರಕಾರಿ, ಬಜಾರಿಯ ಚಿನ್ನಾಭರಣ....
ಮಾನವ ಕುಲದ ಇತಿಹಾಸದಶ್ವತ್ಥ ಮರದಡಿಗೆ
ಮಣ್ಣಲ್ಲಿ ಮಣ್ಣಾಗಿ ಕರಗುವ ಕತೆಯೇ ಇಂದಿ ನೀ ಉಸಿರು.

ಸರಳವಾಗಿದ್ದೂ ಆಳ ಅನಿಸಿಕೆಗಳನ್ನು ಕಾವ್ಯದಲ್ಲಿ ಕಡೆದಿಡುವ ಇಂಥ ಕವನ ಓದಿದಾಗ ಥಟ್ಟನೆ ನೆನಪಿಗೆ ಬರುತ್ತದೆ ಅಮೇರಿಕೆಯ ಕವಿ ರಾಬರ್ಟ್ ಫ್ರಾಸ್ಟ್‌ನ ಕಾವ್ಯ ವ್ಯಾಖ್ಯೆ : "A Poem begins with delight and ends with wisdom."

ಇಲ್ಲಿ ಮಾನವ ಕುಲದ ಚಿತ್ರವನ್ನು ಭೂತ, ವರ್ತಮಾನಗಳ ಪ್ರಜ್ಞೆಯಲ್ಲಿ ಬದುಕು-ಸಾವುಗಳ ದ್ವಂದ್ವದಲ್ಲಿ, ಗಾಂಭೀರ್ಯ-ವಿನೋದಗಳ ಸಮ್ಮಿಶ್ರ ಧಾಟಿಯಲ್ಲಿ, ಸೂಕ್ಷ್ಮ ಪ್ರತಿಮಾ ವಿನ್ಯಾಸಗಳ ಮೂಲಕ ಕಟ್ಟಿಕೊಡುವ ಚಿಂತಾಮಣಿಯವರ ಕಾವ್ಯ ಶಕ್ತಿಯಿಂದ ನಾವು ಇನ್ನೂ ಮಹತ್ವವಾದದ್ದನ್ನು ಖಂಡಿತ ನಿರೀಕ್ಷಿಸಬಹುದು.

ಆದರೆ ಈ ಕವಿ 'ಸಿದ್ಧ'ನಾಗಿ ಹೊರಬಿದ್ದಿಲ್ಲ; ಇನ್ನೂ ಸಿದ್ಧತೆಯಲ್ಲೇ ಇದ್ದಾನೆ ಎನ್ನುವದನ್ನು ಇದರಲ್ಲಿ ಅನೇಕ ಕವಿಗಳು ಸಾಬೀತುಪಡಿಸುತ್ತವೆ. ಉದಾ : 'ನಾನು' ಕವನದಲ್ಲಿ ತಮಾಷೆ, ಗಾಂಭಿರ್ಯ ಧಾಟಿ ಸರಿಯಾಗಿ ಬೆಸೆಯದೇ, ಆರಂಭದಲ್ಲಿ ತುಂಬ brilliant ಆಗಿ ಸಾಗಿದರೂ, ಕೊನೆಯಲ್ಲಿ ಅತೃಪ್ತಿ ನೀಡುತ್ತದೆ. ಅದರಲ್ಲೂ ಇಂಥದೇ ಥೀಮಿನ ಮೇಲೆ ಇದೇ ಜಿಲ್ಲೆಯ ಹಿರಿಯ ಕವಿ ಶ್ರೀ ವಿ. ಜಿ. ಭಟ್ಟರ 'ಆತ್ಮ ಗೀತೆ' ಓದಿದಾಗಂತೂ ಕೊಡ್ಲೆಕೆರೆಯವರು ಇಲ್ಲಿ ವಿಫಲರಾದದ್ದು ನಿಚ್ಚಳವಾಗುತ್ತದೆ. ಇದಕ್ಕೆ ಕಾರಣ ವೈಚಾರಿಕವಾಗಿ ಕವಿ ಸ್ಪಷ್ಟ ನಿಲುವಿಗೆ ಬರಲಾಗದ್ದು ಎನಿಸುತ್ತದೆ.

ಭಾಷೆಯ ಬಳಕೆಯಲ್ಲಿ ಸಹ ಕವಿ ಸಿದ್ಧತೆ ಮಾಡಿಕೊಳ್ಳುತ್ತಿರುವುದು ಸುವ್ಯಕ್ತವಾಗಿದೆ. ಉದಾ : ತನ್ನ ಸ್ವಾರ್ಥವ ನೆನೆದು/ವ್ಯರ್ಥವಾಗಿದೆ ಜೀವ ('ಧನ್ಯವಾಯಿತು ಹುಟ್ಟಿ ಸಾವಿನಲ್ಲಿ') 'ತುಂಬುತಿದೆ ಕಿವಿಯು' (ಗೋಕುಲದ ಹಾಡು) ಇತ್ಯಾದಿ ಸಾಲುಗಳಲ್ಲಿ ನವೋದಯದ diction ಇಣಿಕಿದರೆ, 'ಈ ಲೋಕ ಎಷ್ಟೊಂದು ಸುಂದರ' 'ಆಚೆ' ಕವನಗಳು ನವೋದಯದ ಕಾವ್ಯ ಬಂಧದಲ್ಲೆ ರಚಿತವಾಗಿವೆ.

ನವ್ಯಕಾವ್ಯದ ಮುಕ್ತ ಛಂದಸ್ಸು, ಆ ಪಂಥದ ಹಲವು ಕವಿಗಳಿಗೆ ಪ್ರಿಯವಾದ ಕತ್ತಲೆ-ಬೆಳಕುಗಳ ಥೀಮ್, ಆತ್ಮಶೋಧನೆಯ ತಹ-ತಹ ಇತ್ಯಾದಿ ಇದ್ದರೂ ಈ ಕವಿತೆಗಳು ನವ್ಯಕಾವ್ಯಕ್ಕೆ ಸೇರಿದವು ಎನ್ನುವಂತಿಲ್ಲ. ನವ್ಯದ ಅತಿ ಬೌದ್ಧಿಕತೆ, ಕ್ಲಿಷ್ಟ ಪ್ರತಿಮಾ ಸಂವಿಧಾನ, ಸಂಕೀರ್ಣ ಸಂಯೋಜನೆಗಳಿಂದ ಮುಕ್ತವಾದ ಇಲ್ಲಿನ ಕವನಗಳಲ್ಲಿ ನವ್ಯೋತ್ತರ ಕಾವ್ಯ ಪ್ರಪಂಚದ 'ಅನ್ವೇಷಣೆ'ಯ ಹೊಸ ಆವಿಷ್ಕಾರದ ಒಲವು, ಭಾವಗೀತಾಗಂಧಿ ರಚನೆಗಳು, ಅನೇಕ ಪ್ರಯೋಗ ಹಾಗೂ ಪ್ರಭಾವಗಳಿಗೆ ತೆರೆದುಕೊಂಡು ಸ್ಪಂದಿಸುತ್ತ ಸೃಜನಶೀಲವಾದ ಮನಸ್ಸು ನಮ್ಮನ್ನು ತಟ್ಟುತ್ತದೆ. ಇಂಥ ಜೀವಂತಿಕೆಯಿಂದ ತುಂಬಿದ ಪ್ರಯತ್ನಶೀಲವಾದ ಪ್ರತಿಭೆಯಿಂದ ನಾವು ಖಂಡಿತ ಶಕ್ತ ಹಾಗೂ ಅರ್ಥಪೂರ್ಣ ಕೃತಿಗಳನ್ನು ಚಿಂತಾಮಣಿ ಅವರಿಂದ ನಿರೀಕ್ಷಿಸಬಹುದು.

—ಟಿ. ಜಿ. ಭಟ್ಟ, ಹಾಸಣಗಿ

(ಈ ಜಗತ್ತು (ಕವನ ಸಂಕಲನ): ಚಿಂತಾಮಣಿ ಕೊಡ್ಲೆಕೆರೆ, ಪುಟ 72, ಬೆಲೆ ರೂ. 12, ಚಿತ್ರಮೂಲ ಪ್ರಕಾಶನ, ಗೋಕರ್ಣ-581325.)

ANVESHANE MAG (5) PRB-DECL 127/85-86

ಇದೀಗ ಮಾರುಕಟ್ಟೆಯಲ್ಲಿ

ಡಾ॥ ಬಸವರಾಜ ಸಬರದ ಅವರ

೧. **ಹೊಸ ದಿಕ್ಕು** (ವಿಮರ್ಶೆ) ಬೆಲೆ ರೂ. 30/-

೨. **ದನಿ ಎತ್ತಿ ಹಾಡೇನ** (ಕವನ ಸಂಕಲನ) ಬೆಲೆ ರೂ. 10/-

ಅನ್ವೇಷಣೆ ಚಂದಾದಾರರಿಗೆ 40% ರಿಯಾಯಿತಿ.

ಪ್ರತಿಗಳಿಗೆ : ಡಾ॥ ಬಸವರಾಜ ಸಬರದ, ರೀಡರ್
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ-585106

'ಅನ್ವೇಷಣೆ' ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾದ ಪತ್ರಿಕೆ

---

* ನವ್ಯೋತ್ತರ ಕನ್ನಡ ಸಾಹಿತ್ಯದ ಮಹತ್ವದ ದಾಖಲೆಗಳಿಗೆ
* ಪ್ರಗತಿಪರ ವಿಚಾರಗಳಿಗೆ, ಸೈದ್ಧಾಂತಿಕ ಹಿನ್ನೆಲೆಯು ಮುಕ್ತ ವಿಚಾರಗಳಿಗೆ
* ಹಿರಿ-ಕಿರಿ ಬರಹಗಾರರ ತಾತ್ವಿಕ ವಿಚಾರಗಳ ಸಂವಾದಕ್ಕೆ

ಚಂದಾ ವಿವರ : ವಾರ್ಷಿಕ ಚಂದಾ ರೂ. 35 (ವ್ಯಕ್ತಿಗಳಿಗೆ)
ರೂ. 50 (ಗ್ರಂಥಾಲಯಕ್ಕೆ)
ಮೂರು ವರ್ಷಕ್ಕೆ ರೂ. 100
ಅಜೀವ ಚಂದಾ ರೂ. 500 ಸಂಸ್ಥೆ/ಗ್ರಂಥಾಲಯಕ್ಕೆ ಮಾತ್ರ

ವಿಳಾಸ : ಸಂಪಾದಕ, "ಅನ್ವೇಷಣೆ, 478
11ನೇ ಎಂ. ಸಿ. ಬಡಾವಣೆ ರಸ್ತೆ
ವಿಜಯನಗರ, ಬೆಂಗಳೂರು-560040.

ಅನ್ವೇಷಣೆ ಸಂಪಾದಕ/ಮುದ್ರಕ : ಆರ್. ಜಿ. ಹಳ್ಳಿ ನಾಗರಾಜ್, ಪ್ರಕಾಶಕರು : ಅರುಣ ಯುವ ಲೇಖಕರ ಬಳಗ, ಬೆಂಗಳೂರು-79. ಚೇತನ ಪ್ರಿಂಟರ್ಸ್, ಎಲ್. ಎನ್. ಪುರ, ಬೆಂ-21